ವಿತ್ತೀಯ ಕಾರ್ಯ ಕಲಾಪಗಳು

೧೯೮೫-೮೬ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಲೋಕೋಪಯೋಗಿ ಇಲಾಖೆಯ ಬೇಡಿಕೆಗಳು

ಬೇ. ಕ್ರ. ಸಂ ೪೪, ೪೫, ೪೬, ೩೪, ಮತ್ತು ೩೫.

†ಶ್ರೀ ಎಂ. ವೀರಪ್ಪಮೊಯ್ಲಿ (ಕಾರ್ಕಳ).—ಸನ್ಮಾನ್ಯ ಸಭಾಧ್ಯಕ್ಷರೆ, ನೀರಾವರಿ, ರಸ್ತೆ ಸೇತುವೆ ಇವುಗಳಿಗೆ ಸಂಬಂಧಪಟ್ಟಂಥ ಬೇಡಿಕೆಗಳ ಬಗ್ಗೆ ಮೊನ್ನೆ ಕೂಡ ಚರ್ಚೆ ನಡೆದಿದೆ. ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಬಹಳ ವ್ಯಾಪಕವಾಗಿ ಈ ಬಗ್ಗೆ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಒಂದು ಸಂತೋಷದ ವಿಚಾರ ಎಂದರೆ, ಯಾರು ಈ ಕಡೆಯಲ್ಲಿ ನೀರಾವರಿಯ ಬಗ್ಗೆ ಬಹಳ ವ್ಯಾಪಕವಾದ ಅನುಭವದಿಂದ ಆ ಇಲಾಖೆಯಲ್ಲಿರತಕ್ಕ ಲೋಪದೋಷಗಳನ್ನೆಲ್ಲಾ ಶೋಧನೆ ಮಾಡಿ ಅಧಿಕಾರವಾಣಿಯಿಂದ ಇಲ್ಲಿ ಮಾತನಾಡುತ್ತಿದ್ದರೋ ಅದೇ ಹಿರಿಯ ಸದಸ್ಯರು ಈ ದಿವಸ ಈ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಆದ್ದರಿಂದ ಈ ಇಲಾಖೆಯ ಜವಾಬ್ದಾರಿ ಇಲ್ಲದಿರುವವರ ಕೈಯಲ್ಲಿಲ್ಲ ಎನ್ನುವ ವಾದವನ್ನು ನಾವು ಮಾಡುವುದಕ್ಕೆ ಬರುವುದಿಲ್ಲ. It is in a right hand. ಅವರಿಗೆ ಈ ಇಲಾಖೆಯ ಬಗ್ಗೆ ಬಹಳಷ್ಟು ತಿಳುವಳಿಕೆ ಇದೆ. ಆ ಕಡೆಯಲ್ಲೇ ಇದ್ದು, ಸಚಿವರಾಗಿದ್ದರೆ ಕ್ರಿಟಿಕಲ್ ಆಟಿಟ್ಯೂಡ್ ಇರುವುದಿಲ್ಲ. ಆದರೆ ಈ ಕಡೆಯಲ್ಲಿ ಅನೇಕ ವರ್ಷಗಳ ಕಾಲ ಕೆಲಸಮಾಡಿ ಅನಂತರ ಆ ಕಡೆಗೆ ಹೋಗಿ ಅಧಿಕಾರವನ್ನು ಮಾಡಿದರೆ ಜವಾಬ್ದಾರಿಯಿಂದ ಕೆಲಸಮಾಡುವುದಕ್ಕೆ ಸಾಧ್ಯವಾಗುತ್ತದೆ. ಎಲ್ಲೆಲ್ಲಿ ತೊಂದರೆ ಇದೆ ಅದನ್ನು ನಿವಾರಣೆ ಮಾಡಿ ದಕ್ಷತೆಯಿಂದ ಕೆಲಸ ಮಾಡಲು ಸಾಧ್ಯವಾಗುತ್ತದೆ. The Hon. Minister is fully eqipped as for as these departments are concerned. ಈ ಇಲಾಖೆಯ ಬಗ್ಗೆ ಮತ್ತೊಂದು ವಿಷಯ ಎಂದರೆ. He is practically a de-facto Chief Minister as for as his departments are concerned. You are equipped in all angles. ನೀವು ನಮ್ಮನ್ನು ದೂರುವುದಕ್ಕೆ ಅವಕಾಶ ಇಲ್ಲ. ಈ ಇಲಾಖೆಯಲ್ಲಿ ಏನಾದರೂ ಕೆಲಸ ಆಗದೇ ಇದ್ದರೆ ಮಾನ್ಯ ಮುಖ್ಯ ಮಂತ್ರಿಗಳು ನನಗೆ ಜವಾಬ್ದಾರಿ ಕೊಟ್ಟಿಲ್ಲ, ನನಗೆ ಸರಿಯಾದ ಅಧಿಕಾರ ಇಲ್ಲ, ನಾನು ನೋಡಬೇಕು, ಕೇಳಬೇಕು, ಎಂಬುದು ಏನೂ ಇಲ್ಲ. ಬೇರೆ ಸಚಿವರಾಗಿದ್ದಿದ್ದರೆ ಇದರ ಬಗ್ಗೆ ಏನಾದರೂ ಹೇಳಬಹುದಿತ್ತು.

ಆ ದಕ್ಷತೆ ಇದ್ದರೆ, ಲೋಪದೋಷಗಳಿದ್ದರೆ ಅವುಗಳನ್ನು ಅಡಗಿಸುವುದಕ್ಕೆ ಪ್ರಯತ್ನ ಮಾಡ ಬೇಕು. ಈ ದಿಸೆಯಲ್ಲಿ ಮಾನ್ಯ ದೇವೇಗೌಡರು ಸಿದ್ಧರಾಗಿದ್ದಾರೆ. ಅವರು ಯಾವುದೇ ಸಾಬೂಬನ್ನೂ ಹೇಳುವುದಕ್ಕಾಗುವುದಿಲ್ಲ. ಈ ಒಂದು ಹಿನ್ನೆಲೆಯಲ್ಲಿ ನಾನು ಕೆಲವು ವಿಚಾರಗಳನ್ನು ಈ ಸದನದ ಮುಂದಿಡುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ಪ್ರಮುಖವಾಗಿ ನಾನು ನೀರಾವರಿಯ ವಿಚಾರದಲ್ಲಿ ಮಾತನಾಡುತ್ತೇನೆ. ನನಗೆ ತಿಳಿದಿರುವಂತೆ ಇಡೀ ನೀರಾವರಿಯಲ್ಲಿ ೫೪ ಪರ್ಸೆಂಟ್ ಕೃಷ್ಣಾ ವ್ಯಾಲಿಗೆ ಸಂಬಂಧಪಟ್ಟಂತಿದೆ. ಇನ್ನು ಮುಂದೆ ಬರತಕ್ಕದ್ದು ಕಾವೇರಿ, ವಿಚಾರಕ್ಕೆ ಸಂಬಂಧಪಟ್ಟದ್ದು. ಇನ್ನುಳಿದ ವಿಷಯಗಳು ಅಷ್ಟೇನೂ ಇರುವುದಿಲ್ಲ. ನೀರಾವರಿಗೆ ಸಂಬಂಧಪಟ್ಟಂತೆ ಕಾವೇರಿ ಮತ್ತು ಕೃಷ್ಣಾ ಬೇಸಿನ್ ವಿಚಾರಗಳಲ್ಲಿ ಮಾತನಾಡುವುದಾದರೆ ಇವು ಬಹಳ ಪ್ರಮುಖವಾದವು, ಅಷ್ಟೇ ಅಲ್ಲ ಬಹಳ ಸೂಕ್ಷ್ಮ ವಿಚಾರಗಳೂ ಕೂಡ. ಇವುಗಳ ಬಗ್ಗೆ ಹೆಚ್ಚು ವ್ಯಾಪಕವಾಗಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಕಾವೇರಿ ವಿಚಾರ ನಾನ್ ಪ್ಲಾನ್ಡ್ ಆಗಿದೆ. ಕೃಷ್ಣಾ ಬೇಸಿನ್ ವಿಚಾರದಲ್ಲಿ ಹೇಳುವುದಾದರೆ ಇದು ಮೊದಲು ವಾದ ಗ್ರಸ್ತ ವಿಚಾರವಾಗಿರಲಿಲ್ಲ. ಆದರೆ ಆಂಧ್ರ ಪ್ರದೇಶದವರು ಹೋಗತಕ್ಕ ವಿಧಾನವನ್ನು ನೋಡಿದರೆ ಇದೀಗ ತುಂಬಾ ವಾದಗ್ರಸ್ತ ವಿಚಾರವಾಗಿದೆ.

೨-೦೦ ಪಿ.ಎಂ.

ಯಾವುದೇ ವಿಚಾರವನ್ನು ವಿಶ್ಲೇಷಣೆ ಮಾಡುವಾಗ ಎರಡು ವಿಚಾರಗಳನ್ನು ನಾನು ನನ್ನ ಮನಸಿನಲ್ಲಿಟ್ಟುಕೊಂಡು ಚರ್ಚೆ ಮಾಡುವಾಗ ಕರ್ನಾಟಕ ರಾಜ್ಯದ ಅಭಿವೃದ್ಧಿಯ ಬಗ್ಗೆ ಮತ್ತು ಹಕ್ಕಿನ ಬಗ್ಗೆ ಇಲ್ಲಿ ಚರ್ಚೆ ಮಾಡಬೇಕಾದಂಥ ಒಂದು ಅಗತ್ಯವಿರುತ್ತದೆ. ಆ ಒಂದು ದೃಷ್ಟಿಕೋನವನ್ನು ಇಟ್ಟುಕೊಂಡು ನೀರಾವರಿಯ ಬಗ್ಗೆ ಚರ್ಚೆ ಮಾಡಲಿಕ್ಕೆ ಇಷ್ಟಪಡುತ್ತೇನೆ.

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಕೃಷ್ಣಾ ಬೇಸಿನ್ ಡ್ರೈನೇಜ್ ೫೮.೯೩ ಪರ್ಸೆಂಟ್ ಅಂದರೆ ಡ್ರೈನೇಜ್ ಏರಿಯಾ ೯೭೦ ಟಿ.ಎಂ.ಸಿ. ಬರುತ್ತದೆ. ಕಾವೇರಿ ಡ್ರೈನೇಜ್ ಏರಿಯಾ ೩೬೯.೧೩ ಪರ್ಸೆಂಟ್ ಗೋದಾವರಿ ೩.೨೧, ವೆಸ್ಟ್ ಫ್ಲೋಯಿಂಗ್ ರಿವರ್ ೧೨.೭೯ ಪರ್ಸೆಂಟ್ ನಾರ್ತ್ ಮತ್ತು ಸೌತ್ ಪೆನ್ನಾರ್ ಏರಿಯಾ ಇದು ೭.೧೩ ಬರುತ್ತದೆ. ಇದರಲ್ಲಿ ಒಟ್ಟು 7·13% and economically utilisable water resource is around 1610 TMC. ಇದನ್ನು ನಾವು ಈವತ್ತು ಉಪಯೋಗ ಮಾಡತಕ್ಕಂಥ ಪ್ರಯತ್ನ ನಡೆಯಬೇಕಾಗಿದೆ. ಈ ಬಗ್ಗೆ ಈಗಾಗಲೇ ಯೋಜನೆಗಳನ್ನು ಕೂಡ ನಮ್ಮ ಸರ್ಕಾರದವರು ಹಾಕಿಕೊಂಡಿರುತ್ತಾರೆ. ಹಿಂದೆಯೂ ಕೂಡ ಯೋಜನೆಗಳನ್ನು ಹಾಕಿಕೊಂಡಿತ್ತು. ಅವರ ಪ್ರಕಾರ ಒಟ್ಟು ಕೃಷ್ಣಾ ವ್ಯಾಲಿಯನ್ನು ತೆಗೆದುಕೊಂಡರೆ ೬೨೮.೪೨ ಟಿ.ಎಂ.ಸಿ. ಅಷ್ಟು ನೀರನ್ನು ಔಟ್ ಆಫ್ ೭೦೦ ಟಿ.ಎಂ.ಸಿ. ಅಷ್ಟೊ ನೀರಾವರಿ ಯೋಜನೆಯನ್ನು ಮಾಡತಕ್ಕಂಥ ಯೋಚನೆ ಈಗಾಗಲೇ ನಾನಾ ಹಂತದಲ್ಲಿ ಕಾರ್ಯಗತವಾಗತಕ್ಕಂಥ ಹಂತದಲ್ಲಿ ಇರುತ್ತದೆ. ಈ ಯೋಜನೆಗಳಲ್ಲಿ ಯು.ಕೆ.ಪಿ ಮೊದಲನೇ ಮತ್ತು ಎರಡನೇ ಫೇಸ್‌ನಲ್ಲಿ ೨೯೨ ಟಿ.ಎಂ.ಸಿ. ಹಿಪ್ಪರಗಿ ೧೨.೮೧ ಟಿ.ಎಂ.ಸಿ. ಬೆಣ್ಣೆತೊರೆ ೫.೩೪ ಟಿ.ಎಂ.ಸಿ. ಭದ್ರ ೭೧.೫ ಟಿ.ಎಂ.ಸಿ ಘಟಪ್ರಭಾ ೭೭.೮೦ ಟಿ.ಎಂ.ಸಿ. ಮಲಪ್ರಭಾ ೩೭.೭೩ ಟಿ.ಎಂ.ಸಿ. ತುಂಗಭದ್ರಾ ೧೩೨ ಟಿ.ಎಂ.ಸಿ. ಟೋಟಲ್ ೬೨೮.೪೨ ಟಿ.ಎಂ.ಎಸ್. ಇಷ್ಟು ನೀರನ್ನು We have already overstretched ಅಪ್ಪರ್ ಭದ್ರಾ, ಅಪ್ಪರ್ ತುಂಗಾ ಯೋಜನೆಗಳು ಬಂದಹಾಗೆ We tried, as far as Krishna vally is concerned. ಆದ್ದರಿಂದ ಈವತ್ತು ಸರ್ಪ್ಲಸ್ ನೀರನ್ನು ಹಿಡಿದು ಕೊಂಡಿರುತ್ತೇವೆ ಎನ್ನುವುದು ಇಲ್ಲವೇ ಇಲ್ಲ. ಈವತ್ತು ಈ ನೀರನ್ನು ಉಪಯೋಗ ಮಾಡತಕ್ಕಂಥ ಪ್ರಯತ್ನ ನಾವು ಯಾವರೀತಿಯಲ್ಲಿ ಮಾಡಿದ್ದೇವೆ ಎನ್ನುವುದು ಪ್ರಶ್ನೆ. ಕರ್ನಾಟಕ ರಾಜ್ಯಮಟ್ಟದಲ್ಲಿ ಹೆಚ್ಚು ನೀರನ್ನು ಸುಮಾರು ೫೦ ಲಕ್ಷ ಹೆಕ್ಟೇರ್ ಭೂಮಿಗೆ ನೀರನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ನಾವು ಮಾಡಬಹುದು. ಆದರೆ ಈವತ್ತು ೧೯೭೭-೭೮ನೇ ಇಸವಿಯಲ್ಲಿ ನಮ್ಮ ಪರಿಸ್ಥಿತಿ ಏನು ಇತ್ತು ಎಂದರೆ ಅಗ್ರಿಕಲ್ಚರ್ ಇರಿಗೇಷನ್ ಕಮಿಷನ್‌ರವರು ಹೇಳಿರುವಂತೆ ೫೮.೪ ಪರ್ಸೆಂಟ್‌ನಿಂದ ೭೫ ಪರ್ಸೆಂಟ್‌ಗೆ ಏರಿಸಿದ್ದೇವೆ. ಅಂದರೆ ಕರ್ನಾಟಕ೧೦.೮ ಪರ್ಸೆಂಟ್, ಆಂಧ್ರ ಪ್ರದೇಶ ೨೭.೨ ಪರ್ಸೆಂಟ. ತಮಿಳುನಾಡು ೪೩.೨ ಪರ್ಸೆಂಟ್‌ಇದೆ ಈ ಇತಿಹಾಸವನ್ನು ನೋಡಿದರೆ ನಾವು ಬಹಳ ಹಿಂದೆ ಬಿದ್ದಿದ್ದೇವೆ ಇದನ್ನು ಸುಧಾರಿಸಿಕೊಂಡು ನಾವು ಮುಂದೆ ಹೋಗಬೇಕಾಗಿದೆ. ಇದರ ಬಗ್ಗೆ ನಾವು ವ್ಯಾಖ್ಯಾನ ಮಾಡುವಂತೆ ಇಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಹಿಂದಿನ ಸರ್ಕಾರ ಮಾಡಲಿಲ್ಲವೆಂದು ಹೇಳಿದರು. ಅದಕ್ಕೆ ಪುರಾವೆಗಳು ಕೂಡ ಇವೆ. ಸನ್ಮಾನ್ಯ ವೀರೇಂದ್ರ ಪಾಟೀಲರ ಬಗ್ಗೆ ಬಹಳವಾಗಿ ಚರ್ಚೆ ನಡೆಯಿತು. ಸನ್ಮಾನ್ಯ ವೀರೇಂದ್ರ ಪಾಟೀಲರು ಅನ್ಯಾಯ ಮಾಡಿದ್ದಾರೆಂದು ಹೇಳಿದರು. ಅನ್ಯಾಯ ಯಾರು ಮಾಡಿದ್ದಾರೋ, ಯಾರು ಮಾಡಿಲ್ಲವೋ ಅದರ ಚರ್ಚೆಗೆ ನಾನು ಹೋಗುವುದಿಲ್ಲ. ಸಾಕಷ್ಟು ಚರ್ಚೆಯಾಗಿ ಅವರನ್ನು ಡಿಫೆಂಡ್ ಮಾಡಿಕೊಂಡಿದ್ದಾರೆ. ನಿನ್ನೆಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಜನರಲ್ ಡಿಸ್‌ಕಷನ್‌ಗೆ ಉತ್ತರವನ್ನು ಕೊಡುತ್ತಾ ವಿಶ್ಲೇಷಣೆ ಮಾಡಲಿಕ್ಕೆ ಹೋದರು. ವೀರೇಂದ್ರ ಪಾಟೀಲರು ಏನೇನೂ ಮಾಡಲಿಲ್ಲ ಎಂದು ಹೇಳಿಕೆ ಕೊಟ್ಟಿರತಕ್ಕಂಥದ್ದು ಪತ್ರಿಕೆಗಳಲ್ಲೂ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಸೋರ್ಸಸ್ ಇದೆ. ಯೂನಿಯನ್ ಮಿನಿಸ್ಟರ ಬಗ್ಗೆ ಲಘುವಾಗಿ ಹೇಳತಕ್ಕಂಥ ಅವರ ಲವಕುಶರ ಪ್ರೇಮ ಈ ಸದನದಲ್ಲಿ ತರತಕ್ಕಂಥದ್ದಕ್ಕೆ ಅವಕಾಶ ಇರಲಿಲ್ಲ. ಪ್ರೇಮ ಕಲಹ ಇರುತ್ತದೆ. ಈ ದೇಶದಲ್ಲಿ ರಾಜಕೀಯ ಮಾಡಬೇಕಾದರೆ ಒಂದು ಸರ್ಕಾರದ ಮೇಲೆ ಮತ್ತೊಂದು ಸರ್ಕಾರ ಗೂಬೆ ಕೂರಿಸತಕ್ಕಂಥದ್ದೆಲ್ಲ ನಡೆದಿದೆ. ಸಾಮಾನ್ಯವಾಗಿ ಕರ್ನಾಟಕದ ಪಿಕ್ಚರ್ ಪ್ರೊಫೈಲ್ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಹಂಚಿದರು. Some day will come when we all of us will have to move a privilege motion. ಬಹಳ ತಪ್ಪು ತಪ್ಪು ಹೇಳಿಕೆಗಳನ್ನು ಕೊಟ್ಟಿದ್ದಾರೆ. ೧೯೮೧-೮೨ರಿಂದ ೧೯೮೫ರ ವರೆಗೆ ನಾವು ಬಹಳವಾಗಿ ಸಾಧನೆ ಮಾಡಿದ್ದೇವೆಂದು ಹೇಳಿಕೆ ಕೊಟ್ಟಿದ್ದಾರೆ. ಆದರೆ ಇಲ್ಲಿಯವರೆಗೆ ಏನೆಲ್ಲಾ ಸಾಧನೆ ಮಾಡಿದ್ದಾರೆಂಬುದರ ಬಗ್ಗೆ ವಿಶ್ಲೇಷಣೆ, ವಿವರಣೆಗಳಿಗೆ ಹೋಗುವುದಿಲ್ಲ. ಇವರು ಹೇಳಿರತಕ್ಕಂಥದ್ದರಲ್ಲಿ ೧೦೦ಕ್ಕೆ ೯೯ರಷ್ಟು ಸರಿಯಾದುದಲ್ಲ. ಅಂಕಿಸಂಖ್ಯೆಗಳು ಆಧಾರವಾಗಿಲ್ಲ. ವಾಸ್ತವಿಕವಾಗಿ ಮಂತ್ರಿಗಳು ಮಾತನಾಡಿದ್ದಾರೆ ಅಷ್ಟೇ ಎಂದು ಹೇಳಬಹುದು. ಆದುದರಿಂದ ಈವತ್ತು ಟೋಟಲ್ ಇರಿಗೇಟೆಡ್ ಏರಿಯಾ ೧೯೭೦-೭೧ಕ್ಕೆ ೧೦ ಲಕ್ಷ ಹೆಕ್ಟೇರ್ ಮಾತ್ರ ಇತ್ತು. ಆದರೆ ಈವತ್ತಿಗೂ ಸುಮಾರು ಅವರು ಕೊಟ್ಟಿರತಕ್ಕಂಥ ಅಂಕಿ ಅಂಶಗಳ ಪ್ರಕಾರ ಒಂದೊಂದು ಪುಸ್ತಕದಲ್ಲಿ ಒಂದೊಂದು ರೀತಿಯಲ್ಲಿ ಇದೆ. Total irrigated area in 1970-71 was 10 lakh hectares. Within 12 years

ie. by 1982-83 it went upto 23·56 lakh hectares even taking that as a margin. ಇದರಲ್ಲಿ ೧೩.೪ ಲಕ್ಷ ಹೆಕ್ಟೇರ್ ಜಾಸ್ತಿ ಇರಿಗೇಟ್ ಆಗಬೇಕಾಗಿದ್ದು ೧೯೫೬ರಿಂದ ಇಲ್ಲಿಯವರೆಗೆ ಲೆಕ್ಕ ತೆಗೆದುಕೊಂಡರೆ ಈ ವರ್ಷದ ಪ್ಲಾನ್ ಪೀರಿಯಡ್‌ನಲ್ಲಿ ೨·೫೦ ಲಕ್ಷ ಹೆಕ್ಟೇರ್ ಆಗಿರಬಹುದು. ಅಂದರೆ ಇಲ್ಲಿಯವರೆಗೆ ಸುಮಾರು ೧೫ ವರ್ಷಗಳ ಕಾಲದಲ್ಲಿ ಆಗಿದ್ದು ೫ ಲಕ್ಷ ಹೆಕ್ಟೇರ್ ಇದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಯಾವುದಕ್ಕೂ ಮನಸ್ಸು ಮಾಡಿ ಆ ಒಂದು ವೇಳೆ ಯಲ್ಲಿ ಒಂದು ರೀತಿ ರೆವಲ್ಯೂಷನ್ ಮಾದರಿಯಲ್ಲಿ ಮಾಡಬಹುದಾಗಿತ್ತು.

ನಾವು ಜವಾಬ್ದಾರಿಯನ್ನು ತಪ್ಪಿಸಲಿಕ್ಕೆ ಈ ಮಾತನ್ನು ಆಡುತ್ತಿಲ್ಲ. ಆದರೆ, ಗತ ಚರಿತ್ರೆ ಏನಿದೆ ಅದರ ಪ್ರಕಾರ ಪಂಜಾಬಿಗೆ ೫೫ ಪರ್ಸೆಂಟ್ ಹೋಗಿದೆ. We have lost the race. We could have reached the saturation point ಹತ್ತು ವರ್ಷದಲ್ಲಿ ಒಂದು ಹೊಸ ಮನ್ವಂತರದ ಪ್ರಾರಂಭವಾಯಿತು. ಡೆವಲಪ್‌ಮೆಂಟ್ ಟೆಂಪೋ ಮತ್ತು ಇರಿಗೇಷನ್ ಮೇಲೆ, ಪವರ್ ಮೇಲೆ ಮತ್ತು ದಿ ರೇಟ್ ಆಫ್ ಗ್ರೋತ್ ಇನ್ ಇರಿಗೇಷನ್ ಅಂಡ್ ಪವರ್‌ನಲ್ಲಿ ಮಾನ್ಯ ದೇವರಾಜ್ ಅರಸ್‌ರವರು ೧೯೭೦-೭೭ರಲ್ಲಿ ಏನು ಸಾಧನೆ ಮಾಡಿದ್ದಾರೆ, ಅದನ್ನು ನೆನಪಿಸಿಕೊಳ್ಳ ಬೇಕು. ಆ ಬಗ್ಗೆ ಅವರಿಗೆ ನಮನ ಮಾಡಬೇಕು. ಅದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಇವತ್ತು ನೀವು ಬೇರೆ ಬೇರೆ ಲೆಕ್ಕಾಚಾರ ಹಾಕಿ ಅದನ್ನು ತಾವು ಅಳಿಸಲಿಕ್ಕೆ ಪ್ರಯತ್ನ ಮಾಡಬಹುದು. We have got to remember, ಏನೆಂದರೆ ೧೯೭೦-೭೧ ರವರೆಗೆ ನೀರಾವರಿ ಮತ್ತು ವಿದ್ಯುಚ್ಛಕ್ತಿ ಯೋಜನೆಗಳ ಬಗ್ಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದೆ. ಬಂಗಲೆಗಳನ್ನು ಕಟ್ಟುವುದರಲ್ಲಿ ಮತ್ತು ರಸ್ತೆ ಗಳನ್ನು ಮಾಡುವುದರಲ್ಲಿಯೇ ನಾವು ಹೆಚ್ಚು ಕಾಲ ಕಳೆದಿದ್ದರಿಂದ, ಆ ಸಮಯವನ್ನು ನಾವು ಕಳೆದು ಕೊಳ್ಳಬೇಕಾಗಿ ಬಂತು. ಇದು ನಡೆದಿದೆ. ಇದರ ಪ್ರಕಾರ ೧೯೭೯-೮೦ರಲ್ಲಿ ೨೨.೦೪ ಲಕ್ಷ ಹೆಕ್ಟೇರ್, ೧೯೮೦-೮೧ರಲ್ಲಿ ಅಕ್ಯುಮುಲೇಟೆಡ್ ಫಿಗರ್ಸ್‌ನ್ನು ಕೊಡುತ್ತಿದ್ದೇವೆ. ೨೩.೪೩ಲಕ್ಷ. ೧೯೮೨-೮೩ರಲ್ಲಿ ೨೩.೫೬ಲಕ್ಷ. ೧೯೮೩-೮೪ರಲ್ಲಿ ೨೪.೩೪ಲಕ್ಷ. ೧೯೮೪-೮೫ರಲ್ಲಿ ೨೪.೪೬ಲಕ್ಷ. ನಾವು ಆರನೇ ಯೋಜನೆ ಯಲ್ಲಿ ಒಂದು ಮಾರ್ಗದರ್ಶನ ಹಾಕಿಕೊಂಡಿದ್ದೆವು.

I happened to be at that time the Planning Minister and also the Finance Minister ಎಂದು ಲೆಕ್ಕಾಚಾರ ಹಾಕಿದ್ದೇವೆ. ಇಡೀ ಬಡ್ಜೆಟ್ಟಿನಲ್ಲಿ ಸುಮಾರು ೨೫ ಪರ್ಸೆಂಟ್ ಹಣವನ್ನು ನೀರಾವರಿಯಲ್ಲಿ ಖರ್ಚು ಮಾಡಬೇಕೆಂದು ಆ ಸಮಯದಲ್ಲಿ ನಿರ್ಣಯ ಮಾಡಿದ್ದಿತ್ತು. We did spend that money. ಆ ಸಮಯದಲ್ಲಿ ನಾವು ಹಣವನ್ನು ಖರ್ಚು ಮಾಡಿದ್ದು ಇದೆ. ಆರನೇ ಯೋಜನೆಯ ಬಗ್ಗೆ ಒಂದು ವಿವರಣೆ ಕೊಡಬೇಕಾದರೆ ೧೯೮೦-೮೧ರಲ್ಲಿ ನಾವು ಸುಮಾರು ೯೯.೯೪ ಕೋಟಿ ರೂಪಾಯಿ ಇರಿಗೇಷನ್‌ಗೆ ಇಟ್ಟಿದ್ದೆವು. ಆದರೆ, ಖರ್ಚಾಗಿದ್ದು ೯೯.೩೭ ಕೋಟಿ. ೧೯೮೨-೮೩ರಲ್ಲಿ ೧೨೧.೧೫ ಕೋಟಿ ರೂ. ಇದ್ದರೆ, ಖರ್ಚಾಗಿದ್ದು, ೧೧೪.೩೬ ಕೋಟಿ. ೮೩-೮೪ರಲ್ಲಿ ೧೩೬ ಕೋಟಿ ರೂ. ಇದ್ದರೆ, ಖರ್ಚಾಗಿದ್ದು ೧೨೫ ಕೋಟಿ ರೂ. ೮೪-೮೫ರಲ್ಲಿ ೧೬೩ ಕೋಟಿ ರೂ. ಇಟ್ಟಿದ್ದರೆ, ಖರ್ಚಾಗಿದ್ದು ೧೩೯ ಕೋಟಿ ರೂ. There was a very steep decline. Even with regard to achievements of the potential which has created in 80-81 was 38,200 hectares, ಒದಗಿಸಿದ್ದು ೨೦,೯೫೬ ಹೆಕ್ಟೇರ್‌ಗೆ ಮಾತ್ರ ಅಂದರೆ ಇಟ್ಟಂತಹ ಹಣವನ್ನೂ ಕೂಡ ಖರ್ಚು ಮಾಡಿಲ್ಲ. ೮೦-೮೧ರಲ್ಲಿ ೩೮,೨೦೦ ಹೆಕ್ಟೇರ್‌ಗೆ ನೀರಾವರಿ ಒದಗಿಸುತ್ತೇವೆಂದು ಇಟ್ಟುಕೊಂಡಿದ್ದರೆ, ಒದಗಿಸಿದ್ದು ೨೦,೪೬೦ ಹೆಕ್ಟೇರ್‌ಗೆ. ೮೧-೮೨ರಲ್ಲಿ ೭೦,೬೩೪ ಹೆಕ್ಟೇರ್‌ಗೆ ಒದಗಿಸುತ್ತೇವೆಂದು ಗುರಿ ಇಟ್ಟುಕೊಂಡಿದ್ದರೆ, ಒದಗಿಸಿದ್ದು ೨೮ ಸಾವಿರ ಹೆಕ್ಟೇರ್‌ಗೆ, ಅದೇ ರೀತಿ ೧೯೮೨-೮೩ರಲ್ಲಿ ೭೯ ಸಾವಿರ ಹೆಕ್ಟೇರ್‌ಗೆ ಒದಗಿಸುತ್ತೇವೆಂದು ಗುರಿ ಇಟ್ಟುಕೊಂಡಿದ್ದರೆ, ಒದಗಿಸಿದ್ದು ೪೫,೮೫೦ ಹೆಕ್ಟೇರ್‌ಗೆ ಮಾತ್ರ. ಇದು ಏನು ತೋರಿಸುತ್ತದೆಂದರೆ, ನಾವು ಏನು ಸಾಧನೆ ಮಾಡಬೇಕೆಂದು ಹೊರಟ್ಟಿದ್ದೇವೆ, ಆ ಸಾಧನೆಯನ್ನು ಆರನೇ ಯೋಜನೆಯಲ್ಲಿ ಮಾಡಲಿಕ್ಕೆ ಆಗಲಿಲ್ಲ. ಅದರಲ್ಲಿ ಮೇಜರ್ ಇರಿಗೇಷನ್ ಅನ್ ಅಪ್ರೂವ್ಡ್ ಪ್ರಾಜೆಕ್ಟ್ಸ್ ಮತ್ತು ಪ್ಲಾನ್ಡ್ ಸ್ಕೀಮ್ಸ್ ಎಲ್ಲಾ ಸೇರಿಸಿದರೂ ಕೂಡ ಆರನೇ ಯೋಜನೆಯಲ್ಲಿ ೪,೭೬,೩೧೦ ಹೆಕ್ಟೇರ್ ನೀರಾವರಿಗೆ ಪೊಟೆನ್ಸಿಯಲ್ ಕ್ರಿಯೇಟ್ ಮಾಡಬೇಕೆಂದು ಯೋಜನೆ ಹಾಕಿಕೊಂಡಿದ್ದಾರೆ, ೧,೯೩,೨೫೩ ಹೆಕ್ಟೇರ್‌ಗೆ ಮಾತ್ರ ಇರಿಗೇಷನ್ ಕೊಡಲಿಕ್ಕೆ ಸಾಧ್ಯ ವಾಯಿತು. That means to say that ೪೦ ಪರ್ಸೆಂಟ್ ಆಫ್ ದಿ ಟಾರ್ಗೆಟೆಡ್ ಅಚೀವ್ ಮೆಂಟ್. ೪೦ ಪರ್ಸೆಂಟ್ ಮಾತ್ರ ನಾವು ಸಾಧನೆ ಮಾಡಲಿಕ್ಕೆ ಸಾಧ್ಯವಾಯಿತು. ಇದರಲ್ಲಿ ಸಣ್ಣ ನೀರಾವರಿಯನ್ನು ಸೇರಿಸಿದರೂ ಕೂಡ ಸುಮಾರು ೨.೪೭ ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ಪೊಟೆನ್ಸಿಯಲ್

ಕ್ರಿಯೇಟ್ ಮಾಡುವುದಕ್ಕೆ ಸಾಧ್ಯವಾಯಿತು. ಇದು ನಮಗೆ ಖಂಡಿತವಾಗಿ ಘೋಷಣಪ್ರಾಯವಾದಂತಹ ಅಭಿವೃದ್ಧಿ ಅಲ್ಲ, ಸಾಧನೆಯೂ ಅಲ್ಲ. ಇದರ ಬಗ್ಗೆ ನಾವು ಮುಂದಿನ ಹೆಜ್ಜೆ ಇಡಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಯವರು ಪ್ರತಿಯೊಂದು ಮಾತಿಗೂ, ಅವರ ಹೇಳಿಕೆಯಲ್ಲೂ ಬ್ರೇಕ್ ಆಫ್ ಫಿಗರ್ಸ್ ಕೊಡುವಾಗಲೂ ಹೇಳುತ್ತಾರೆ. ಮೂರು ವರ್ಷಕ್ಕೆ ನೀವು ಅಷ್ಟು ಖರ್ಚು ಮಾಡಿದ್ದೀರಿ ಎರಡು ವರ್ಷಕ್ಕೆ ನಾವು ಇಷ್ಟು ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. It is alright for persons ಅಂದರೆ ಏನೂ ತಿಳಿಯದ ಮುಗ್ಧರಿಗೆ ಇವರಲ್ಲಿ ಏನೋ ಹೊಸ ರಹಸ್ಯ ಇದೆಯೆಂದು ಅನಿಸುತ್ತದೆ. ಆದರೆ, ಈ ಹೇಳಿಕೆಯನ್ನು ಹಿಂದೆ ಅರ್ಥ ಸಚಿವರಾಗಿ ಕೆಲಸ ಮಾಡಿದವರು ಹೇಳಬಾರದು. In any plan period ಮೂರು ವರ್ಷ ಇನ್‌ಫ್ರಾಸ್ಟ್ರಕ್ಚರ್ build up ಮಾಡಿದ ಮೇಲೆ Actual benefits will accure only in the last three or two years. ಆದರಿಂದ ಅಚೀವ್‌ಮೆಂಟ್ ಅಷ್ಟು ಆಗಲಿಲ್ಲ. ಕಾನಲ್ ವರ್ಕ್ ಸಾಕಷ್ಟು ಆಗಿತ್ತು. ಬಹಳ ವೇಗವಾಗಿ ನಡೆಸಬೇಕಾದಂತಹ ಬೇಡಿಕೆ ಸಿದ್ಧವಾಗಿದೆ. ತಾವು ಮಾಡುವಾಗ you are in the last leg of the plan period ಅದು ಯಾವ ರೀತಿ ಬೆಳೆಯುತ್ತಾ ಬರುತ್ತದೆಯೋ, ಆಗ ಹೆಚ್ಚು ಖರ್ಚು ಮಾಡಲೇ ಬೇಕು. ಪ್ರಥಮ ವರ್ಷದಲ್ಲಿ ಹೆಚ್ಚು ಸಂಪನ್ಮೂಲ ಬರುವುದಿಲ್ಲ. ರಿಸೋರ್ಸಸ್ ಇದ್ದರೆ As it goes on, the resources will be built up, the infra-structer will be built up and the question of the reaping the benefits will come in the last leg of two or three years. ಇದಕ್ಕೆ ಸಾಮಾನ್ಯವಾಗಿ ಅರ್ಥ ಶಾಸ್ತ್ರಜ್ಞ ಬೇಕಾಗಿಲ್ಲ. ಇದು ಜನಸಾಮಾನ್ಯರೂ ಕೂಡ ಅರ್ಥ ಮಾಡಿಕೊಳ್ಳಬಹುದಾದಂತಹ ವಿಚಾರ. ತಾತ್ಪರ್ಯ ಏನು, ಇದರ ಗಾತ್ರವೇನು ಇದನ್ನು ತಿಳಿದುಕೊಂಡಂತಹ ವ್ಯಕ್ತಿಗಳು.

My request is Hon'ble Chief Minister should stop misguiding the House or the people of the state. ಇದನ್ನು ಮಾಡಲಿಕ್ಕೆ ದಯವಿಟ್ಟು ಹೋಗಬಾರದು. ಅಷ್ಟಕ್ಕೆ ಇದನ್ನು ನಾನು ವಿಶ್ಲೇಷಣೆ ಮಾಡಿದೆ. ೬ನೇ ಯೋಜನೆಯಲ್ಲಿ ನಾವು ಸುಮಾರು ೨೮.೧೦ ಲಕ್ಷ ಹೆಕ್ಟೇರ್‌ನಲ್ಲಿ ನೀರಾವರಿ ಮಾಡಬೇಕಿತ್ತು. ಆದರೆ, ನಾವು ಮಾಡಿದ್ದು ೨೪.೪೬ ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ. There is a heavy slip page asfar as these projects are concerned.

ಉಪಾಧ್ಯಕ್ಷರು.—೧೮೦ ನಿಮಿಷಗಳ ಕಾಲ ನಿಮ್ಮ ಪಕ್ಷದವರಿಗೆ ಅವಕಾಶ ಕೊಟ್ಟಿದೆ. ಇನ್ನು ೫ ನಿಮಿಷಗಳಲ್ಲಿ ತಾವು ಮುಗಿಸಬೇಕು.

ಶ್ರೀ ಹೆಚ್.ಡಿ. ದೇವೇಗೌಡ.—ನಾವು ಇನ್ನೂ ಎರಡು ಗಂಟೆಗಳ ಕಾಲ ಕೂತುಕೊಳ್ಳುವುದಕ್ಕೆ ಸಿದ್ಧರಾಗಿದ್ದೇವೆ. ಕೆಲವು ಅತ್ಯಂತ ಉತ್ತಮವಾದ ಸಲಹೆಗಳು ಬಂದಂತಹ ಕಾಲದಲ್ಲಿ, ಚರ್ಚೆಯನ್ನು ಮೊಟಕು ಮಾಡುವುದು ಯೋಗ್ಯವಲ್ಲ. ನಾನು ನಾಳೆ ಬೆಳಿಗ್ಗೆ ಉತ್ತರ ಕೊಡುತ್ತೇನೆ. ಅವರು ಈಗ ಮಾತನಾಡಲಿ. ಅದನ್ನು ಕೇಳಬೇಕೆಂದು ಬಹಳ ಕುತೂಹಲದಿಂದ ಕೂತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಉಪಾಧ್ಯಕ್ಷರು ಹೊಸದಾಗಿ ಬಂದಿದ್ದಾರೆ. ೧೮೦ ನಿಮಿಷಗಳ ಕಾಲ ಕೊಟ್ಟಿದ್ದೇವೆ, ಮತ್ತು ಅದು ಜಾಸ್ತಿಯಾಯಿತೆಂದು ಹೇಳಿದ್ದಾರೆ. ಇದು ಬಹಳ ಗಹನವಾದ ವಿಷಯವಾಗಿದೆ. ಇದನ್ನು ಚರ್ಚೆ ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಕೂಡ ಒಪ್ಪಿಕೊಂಡಿದ್ದಾರೆ. ಓದಿಕೊಂಡು ಬಂದಂತಹ ಸದಸ್ಯರಿಗೆ ಹೆಚ್ಚು ಮಾತನಾಡುವುದಕ್ಕೆ ಅವಕಾಶ ಕೊಡುವುದು ಒಳ್ಳೆಯದು.

ಉಪಾಧ್ಯಕ್ಷರು.—೧೮೦ ನಿಮಿಷಗಳ ಕಾಲ ಕೊಟ್ಟಿದ್ದೇನೆ. ಇನ್ನೂ ೨೦ ನಿಮಿಷವಾಗಿದೆ. ಸಮಯ ಜಾಸ್ತಿಯಾಗಿದೆಯೆಂದು ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಉಪಾಧ್ಯಕ್ಷರೇ, ತಾವು ತಮ್ಮ ಕರ್ತವ್ಯ ಮಾಡಿದ್ದೀರಿ. ತಾವು ಕುಳಿತುಕೊಳ್ಳಬೇಕೆಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ. ಆದ್ದರಿಂದ, ಪವರ್ ಅಂಡ್ ಡೆವಲಪ್‌ಮೆಂಟ್‌ನಲ್ಲಿ ೬ನೇ ಯೋಜನೆಯಲ್ಲಿ ೨೫ ಪರ್ಸೆಂಟ್ ಖರ್ಚುಮಾಡಬೇಕೆಂದು ಇತ್ತು. ದಯಮಾಡಿ ತಾವು ನೋಡಬೇಕು. ೧೯೮೨-೮೩ರಲ್ಲಿ ಶೇಕಡಾ ೨೫ರಷ್ಟು ಪವರ್ ಅಂಡ್ ಇರಿಗೇಷನ್‌ಗೆ ಖರ್ಚಾಗಿದೆ. ಆದರೆ ಇದು ೧೯೮೩-೮೪ರಲ್ಲಿ ೨೨ ಪರ್ಸೆಂಟ್‌ಗೆ ಇಳಿದಿದೆ. ಇದನ್ನು ಸ್ವಲ್ಪ ವಿಚಾರ ಮಾಡಬೇಕು. You have gone back from the assurance held out to the

Planning Commission, You have gone back from the assurance given to the people of this State. ಪವರ್ ಅಂಡ್ ಇರಿಗೇಶನ್‌ನಲ್ಲಿ ೨೫ ಪರ್ಸೆಂಟ್ ಖರ್ಚು ಮಾಡಿದ್ದು ೮೩-೮೪ ಬರುವಾಗ ೨೨ ಪರ್ಸೆಂಟ್‌ಗೆ ಇಳಿದುಬಿಟ್ಟಿದೆ. There is a commitment to the people. ಇದಕ್ಕೆ ಆದ್ಯತೆ ಕೊಡತಕ್ಕಂಥ ದೃಷ್ಟಿಯಲ್ಲಿ ಸರ್ಕಾರ ವಿಫಲವಾಗಿದೆಯೆಂದು ನಾನು ಆರೋಪ ಮಾಡುತ್ತೇನೆ. It is unpardonable. I have to charge this Government. ೧೯೮೫-೯೦ರ ಹೊತ್ತಿಗೆ ಲೆಕ್ಕಾಚಾರ ಹೇಗಿದೆಯೆಂದು ನೋಡಿದಾಗ— Perhaps, it may even come down to 18%. How are you going to maintain the tempo of development? ಹಣಕಾಸಿನ ವ್ಯವಹಾರದ ಮಟ್ಟಿಗೆ ಇವನ್ನು ತಾವು ಹೇಳಬಹುದು. 'Finance is the only constraint and the rest of the constraint I can win over' ಎಂದು ಸನ್ಮಾನ್ಯ ಸಚಿವರು ಹೇಳಬಹುದು. ಇದಕ್ಕೆ ಆದ್ಯತೆ ಕೊಡತಕ್ಕಂಥ ಸಂದರ್ಭದಲ್ಲಿ ೬ನೇ ಯೋಜನೆಯಲ್ಲಿ ಇದನ್ನು ಕಡಿಮೆ ಮಾಡುವಂಥ ನೈತಿಕ ಹಕ್ಕು ನಿಮಗೆ ಇಲ್ಲ. ಇದನ್ನು ಕಾಪಾಡಿಕೊಳ್ಳುವಂಥ ಜವಾಬ್ದಾರಿ ನಿಮಗೆ ಇತ್ತು. ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಗಳನ್ನು ಕೊಡುತ್ತಲೇ ಇದ್ದಾರೆ. ಡೆವಲಪ್‌ಮೆಂಟ್ ಟೆಂಪೊ ಮೈನ್‌ಟೈನ್ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಹಣದ ಮೊತ್ತವನ್ನು ನೋಡಿ ಲೆಕ್ಕಾಚಾರ ಹಾಕುವುದಲ್ಲ. ಆದರೆ ಒಟ್ಟು ಯೋಜನಾ ವೆಚ್ಚದಲ್ಲಿ ಎಷ್ಟು ಹಣವನ್ನು ಪವರ್ ಅಂಡ್ ಇರಿಗೇಷನ್ ಸೆಕ್ಟರ್‌ನಲ್ಲಿ ಇಟ್ಟಿದ್ದೀರಿ? ಇದಕ್ಕೆ ಬೇಕಾದ ಹಣವನ್ನು ಮೊದಲು ಇಟ್ಟು, ಪಾಪ್ಯುಲಿಸ್ ಮೆಜರ್ಸ್‌ಗಾಗಲೀ, ಯಾವುದೇ ಆಗಲಿ ಆದ್ಯತೆ ಮೇರೆಗೆ ಕೆಲಸ ಮಾಡಬೇಕಾಗುತ್ತದೆ. ಈ ಸರ್ಕಾರ ಈ ಜವಾಬ್ದಾರಿಯನ್ನು ನಿರ್ವಹಣೆ ಮಾಡಿಲ್ಲ, ಇದರಲ್ಲಿ ತಪ್ಪಿದ್ದೀರಿ ಎಂದು ನಾನು ಹೇಳುತ್ತೇನೆ. ೧೯೮೦-೮೧ರಲ್ಲಿ ೨೪ ಪರ್ಸೆಂಟ್, ೮೧-೮೨ರಲ್ಲಿ ೨೫ ಪರ್ಸೆಂಟ್ ಇದೆ, ಒವರ್‌ಆಲ್ ೨೫ ಪರ್ಸೆಂಟ್ ವಾಟರ್ ಅಂಡ್ ಪವರ್‌ನಲ್ಲಿ ಹಣ ಮೀಸಲಿಟ್ಟು ಆಮೇಲೆ ಬಾಕಿ ಯೋಜನೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಒಂದು ಮಾತನ್ನು ಹೇಳುವುದಾದರೆ ಯೋಜನೆಯಲ್ಲಿ ಏನು ಇಟ್ಟಿದ್ದೀರಿ? ಅದನ್ನು ವಿಶ್ಲೇಷಣೆ ಮಾಡಿ ನೋಡಿದರೆ ೨೫ ಪರ್ಸೆಂಟ್ ಅಲ್ಲ, ೩೦ ಪರ್ಸೆಂಟ್ ಅಲ್ಲ, ೫೦ ಪರ್ಸೆಂಟ್‌ನ್ನು ಯೋಜನಾ ವೆಚ್ಚದಲ್ಲಿ ಪವರ್ ಅಂಡ್ ಇರಿಗೇಷನ್‌ಗೆ ಇಡದಿದ್ದರೆ, ನಾನು ಹೇಳುತ್ತೇನೆ—The State is not going to survive. ನಾವು ಈಗ ಯಾವ ಹಂತಕ್ಕೆ ಬಂದಿದ್ದೇವೆ ಎಂದರೆ, We have to live with the State. We have to survive with the State. ಈ ಪ್ರಶ್ನೆ ನಮ್ಮ ಮುಂದೆ ಬಂದಾಗ, ನಾನು ಜನರಲ್ ಬಡ್ಜೆಟ್‌ನಲ್ಲೂ ಕೂಡ ಮಾತನಾಡುತ್ತಾ ಸೂಕ್ಷ್ಮವಾಗಿ ಹೇಳಿದ್ದೇನೆ. ಇದನ್ನು ವಿಶ್ಲೇಷಣೆ ಮಾಡದೇ ಇದ್ದರೆ, ೨೫-೩೦ ಅಲ್ಲ, ೫೦ ಪರ್ಸೆಂಟ್ ಹಣವನ್ನು ಇರಿಗೇಶನ್ ಅಂಡ್ ಪವರ್‌ಗೆ ಏಳನೇ ಯೋಜನೆಯಲ್ಲಿ ಇಟ್ಟು ದಿಟ್ಟವಾದ ಒಂದು ನಿರ್ಣಯವನ್ನು ತೆಗೆದುಕೊಳ್ಳದೇ ಇದ್ದರೆ, ಬಹಳ ದೊಡ್ಡ ಅನಾಹುತ ನಮ್ಮ ರಾಜ್ಯಕ್ಕೆ, ಮತ್ತು ನಮ್ಮ ಜನತೆಗೆ ಆಗುತ್ತದೆ ಎಂದು ನಾನು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ೬೦ ಪರ್ಸೆಂಟ್‌ನಷ್ಟು ಜನರು ಬಡತನದ ರೇಖೆ ಕೆಳಗೆ ಇದ್ದಾರೆ ಎಂದು ಹೇಳಿದ್ದಾರೆ.........

ಶ್ರೀ ಎಚ್.ಡಿ. ದೇವೇಗೌಡ.—ಸನ್ಮಾನ್ಯ ಸದಸ್ಯರು ಬಹಳ ಯೋಗ್ಯವಾದ ಸಲಹೆಗಳನ್ನು ಕೊಡುತ್ತಿದ್ದಾರೆ. ಆದರೆ ದುರ್ದೈವ ಏನಾಗಿದೆ ಎಂದರೆ, ಕೆಟ್ಟ ಸಂಪ್ರದಾಯವನ್ನು ನಾವು ಹಾಕಿದ್ದೇವೆ, ಸಾಮಾನ್ಯವಾಗಿ ಯಾವುದೇ ಯೋಜನೆ ಇರಬಹುದು, ೬ನೇಯದು ಇರಬಹುದು ಅಥವಾ ೭ನೇ ಯೋಜನೆ ಇರಬಹುದು, ಈ ಸದನದಲ್ಲಿ ಹಿಂದೆ ಸಾಮಾನ್ಯವಾಗಿ ಚರ್ಚೆಯಾಗುತ್ತಿತ್ತು. The draft plan is to be discussed on the Floor of the House. ಸದನದ ಅಭಿಪ್ರಾಯವನ್ನು ತೆಗೆದುಕೊಂಡು ಆದ್ಯತೆಯನ್ನು ಕೊಡುತ್ತಿದ್ದೆವು. ಈ ಪರಿಪಾಠ ಈಗ ನಿಂತು ಹೋಗಿದೆ.

ಶ್ರೀ ಕೆ.ಎಚ್. ಪಾಟೀಲ್.—ಇವತ್ತು ಈ ಪದ್ಧತಿ ಹಾಗೆಯೇ ಇದೆ, ಆದರೆ ನೀವು ಮಾಡುವುದಿಲ್ಲ. ಸದನದಲ್ಲಿ ಚರ್ಚೆ ಮಾಡಿ ತೆಗೆದುಕೊಂಡು ಹೋದರೆ ನಮಗೂ ಕಲ್ಯಾಣ, ನಿಮಗೂ ಕಲ್ಯಾಣ.

ಶ್ರೀ ಎಚ್.ಡಿ. ದೇವೇಗೌಡ.—ಇದು ನಿನ್ನೆಯಿಂದ ಆದುದಲ್ಲ. ಹಿಂದೆಯೇ ಈ ಪರಿಪಾಠವನ್ನು ನಿಲ್ಲಿಸಿಬಿಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗ ಈ ಪರಿಪಾಠವನ್ನು ಮುಂದುವರೆಸೋಣ. ಈ ಸದನದ ಮುಂದೆ ಬೇಕಾದರೆ ಚರ್ಚೆಯಾಗಲಿ. ಏಕೆಂದರೆ ಯಾವುದಕ್ಕೆ ಆದ್ಯತೆ, ಪ್ರಾಮುಖ್ಯತೆ ಕೊಡಬೇಕಾಗುತ್ತದೆ ಎಂದು ಜನತೆಗೆ ಹೇಳಬೇಕಾಗುತ್ತದೆ. ಯಾವ ಪಕ್ಷವೇ ಅಧಿಕಾರದಲ್ಲಿ ಇರಬಹುದು. ೨೦ ವರ್ಷ

ಗಳ ಕಾಲ ಶ್ರೀ ರಾಮಕೃಷ್ಣ ಹೆಗಡೆಯವರು ಇದ್ದರು. ವೈಯುಕ್ತಿಕವಾಗಿ ಹೇಳುವುದಾದರೆ ನಾನು ೭-೮ ವರ್ಷ ಕಾಲ ಅಧಿಕಾರದಲ್ಲಿ ಇದ್ದಿರಬಹುದು. ಮುಂದೆ ಅಧಿಕಾರಕ್ಕೆ ಬರಬಹುದು ಅಥವಾ ಬಾರದೇ ಇರಬಹುದು. ಆದರೆ ರಾಜ್ಯದ ಹಿತಕ್ಕೋಸ್ಕರ, ರಾಜ್ಯದ ಜನತೆಯ ಪ್ರಗತಿಗೋಸ್ಕರ ನಾವು ಇದಕ್ಕಾಗಿ ರಾಜಕೀಯ ಪಕ್ಷದಲ್ಲಿ ಸೇರಿಕೊಂಡಿರತಕ್ಕಂಥಾದ್ದು. ತಾವು ಜನತಾ ಪಕ್ಷ ಸೇರಿದಿರಿ. ನಾವು ದೇಶದ ಅಭಿವೃದ್ಧಿ ಮಾಡೋಣ ಬಡವರ ಅಭಿವೃದ್ಧಿ ಮಾಡೋಣ ಎಂದು ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದೇವೆ. ಪಕ್ಷವನ್ನು ಇತರರು ಕಮ್ಯುನಿಸ್ಟ್ ಪಕ್ಷವನ್ನು ಸೇರಿದರು. ಒಟ್ಟಾರೆ ಈ ಕರ್ನಾಟಕ ರಾಜ್ಯದ ಜನತೆಯ ಉದ್ಧಾರ ಆಗಬೇಕು. ಮಾನ್ಯ ಮುಖ್ಯಮಂತ್ರಿಗಳು ಅನೇಕ ಸಾರಿ ಹೇಳುವುದಕ್ಕೂ ಮತ್ತು ಮಾಡತಕ್ಕ ಸಾಧನೆಗೂ ತಾಳೆಯೇ ಬರುವುದಿಲ್ಲ. I am sorry. I have to make this remark. ೬೦ ಪರ್ಸೆಂಟ್‌ಗಿಂತಲೂ ಜಾಸ್ತಿ ಬಡವರು ಕರ್ನಾಟಕ ರಾಜ್ಯದಲ್ಲಿ ಇರುತ್ತಾರೆ ಎಂದು ಅವರು ಹೇಳಿದ್ದಾರೆ. ಇದಕ್ಕೆ ರಾಷ್ಟ್ರವ್ಯಾಪ್ತಿಯಲ್ಲಿ ಒಂದು ವ್ಯಾಖ್ಯಾನವನ್ನೂ ಕೊಟ್ಟರು. ೬೦ ಪರ್ಸೆಂಟ್ ಅಲ್ಲ. ಮುಂದೆ ವಾಟರ್ ಅಂಡ್ ಇರಿಗೇಶನ್‌ನ್ನು ಕಡೆಗಣಿಸಿದರೆ ಕ್ರಿ.ಶ. ೨೦೦೦ ಮುಟ್ಟುವುದರೊಳಗೆ ೯೦ ಪರ್ಸೆಂಟ್‌ನಷ್ಟು ಬಡವರು ಬಡತನದ ರೇಖೆಯ ಕೆಳಗೆ ಹೋಗಿಬಿಡುತ್ತಾರೆ, for which only the State alone should be blamed. ರಾಷ್ಟ್ರ ರಾಜಕಾರಣವನ್ನು ಬೆರೆಸಿ ರಾಜ್ಯದ ಜವಾಬ್ದಾರಿಯಿಂದ ತಪ್ಪಿಸಿ ಕೊಳ್ಳುವುದಕ್ಕೆ ಹೋಗಬಾರದು. ಕನಿಷ್ಟ ೫೦ ಪರ್ಸೆಂಟ್ ಅಥವಾ ಅದಕ್ಕೆ ಹತ್ತಿರ ಹಣವನ್ನು ಇದಕ್ಕೆ ಒದಗಿಸದೇ ಹೋದರೆ ನಾವು ಭಾರೀ ಅನಾಹುತವನ್ನು ಎದುರಿಸಬೇಕಾಗುತ್ತದೆ. ಸೀರೆ ಕೊಡಿ, ಬಟ್ಟೆ ಕೊಡಿ, ಅಕ್ಕಿ ಬೇಕಾದರೆ ಕೊಡಿ. In the production of food grains also not even 5% growth ನಾವು ಸಾಧಿಸಿಲ್ಲ. ಇದನ್ನು ನಿವಾರಿಸಬೇಕಾಗಿದ್ದರೆ, ನೀವೇನು ತಿಳಿದುಕೊಂಡುಬಿಟ್ಟಿದ್ದೀರಿ, ಎಂದರೆ ದಾನ ಕೊಟ್ಟುಬಿಟ್ಟರೆ ಬಡತನ ನಿವಾರಣೆಯಾಗುತ್ತದೆ ಎಂದು. ದಾನ ಕೊಟ್ಟ ಮಾತ್ರಕ್ಕೆ ಬಡತನ ನಿವಾರಣೆಯಾತಕ್ಕ ಆರ್ಥಿಕ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಆಗುತ್ತದೆಂದು ತಿಳಿಯಬಾರದು. ರಾಷ್ಟ್ರಮಟ್ಟದಲ್ಲಿ ವಿಚಾರ ಬಂದಾಗ ಇದರ ಬಗ್ಗೆ ಚರ್ಚೆ ಮಾಡೋಣ. In the Planning Commission, you should have fought for that priority for Water and Power will continue in the Seventh Plan. We want that assurance from the Hon'ble Chief Minister. ಅಥವಾ ಇವರಾದರೂ ಕೊಡಲಿ. ಇವರು ಯಾವ ದಿಕ್ಕಿನಲ್ಲಿ ಈ ರಾಜ್ಯವನ್ನು ಕೊಂಡೊಯ್ಯುತ್ತಿದ್ದಾರೆ ಎಂದು ಸ್ಪಷ್ಟೀಕರಣ ನೀಡಬೇಕಾಗುತ್ತದೆ. ಇಂತಹ ಒಂದು ಸ್ಪಷ್ಟೀಕರಣವನ್ನು ನೀಡದೆ, ಬಾಕಿ ಎಲ್ಲಾ ಪಾಲಿಸಿ, ಅಥವಾ ನೀತಿಯ ಬಗ್ಗೆ ಘೋಷಣೆ ಮಾಡುತ್ತಿದ್ದಾರೆ. ನಮಗೆ ಬೇಕಾಗುದುದು ಕರ್ನಾಟಕ ರಾಜ್ಯದ ಹಿತಸಾಧನೆ ಎನ್ನತಕ್ಕಂಥ ಘೋಷಣೆಯನ್ನು ನಿಮ್ಮ ಪಕ್ಷ ಮತ್ತು ಸರ್ಕಾರ ಮಾಡಬೇಕಾಗುತ್ತದೆ. That could be done only in the core sector of power and irrigation. ಇದನ್ನು ನಾವು ನಿರೀಕ್ಷಣೆ ಮಾಡುತ್ತಿದ್ದೇವೆ. Unfortunately that it no forth-coming.

೩-೩೦ ಪಿ ಎಂ.

ಇನ್ನು ಟ್ರೆಂಡ್ಸ್ ಇನ್ ದಿ ಡೆವಲಪ್‌ಮೆಂಟ್ ನೋಡಿದರೆ ಕರ್ನಾಟಕ ಇರಿಗೇಷನ್‌ನಲ್ಲಿ ಉತ್ಪಾದನೆ ಮಾಡಿಲ್ಲ ಇವರ ಒಂದು ಎಕನಾಮಿಕ್ ರೆವ್ಯೂ ೮೪-೮೫ರಲ್ಲಿ ಅಫೆಂಡಿಕ್ಸ್ ೧೦.೨ ರಲ್ಲಿ ನೋಡಿದರೂ ಈ ಇರಿಗೇಷನ್ ಪೊಟೆನ್‌ಶಿಯಲ್ ಕ್ರಿಯೇಟ್ ಮಾಡುವುದರಲ್ಲೂ ಇಳಿಮುಖವಾಗಿದೆ. ಹೆಚ್ಚಳವಿಲ್ಲ. ೭೯-೮೦ರಲ್ಲಿ ೪.೨೭ ಇದ್ದುದ್ದು ೮೨-೮೩ರಿಂದ ೮೪-೮೫ರ ಅವಧಿಯಲ್ಲಿ ೧.೫೫ರಷ್ಟು ಕಡಿಮೆಯಾಗಿದೆ

ಇನ್ನು ಅಪ್ಪರ್ ಕೃಷ್ಣಾಕ್ಕೆ ತಾವು ಖರ್ಚು ಮಾಡತಕ್ಕಂಥ ದುಡ್ಡಿನ ಪ್ರಮಾಣ ನೋಡಿದರೆ ಇನ್ನೂ ೧೫-೨೦ ವರ್ಷ ಆದರೂ ನಿಮಗೆ ಬೇಕು. ಏಕೆಂದರೆ ಟೋಟಲ್ ಕಾಸ್ಟ್ ಆಫ್ ದಿ ಪ್ರೊಜೆಕ್ಟ್ ಇಸ್ ೧೦೩೯.೭೧ ಕೋಟಿಗಳಿರುವಾಗ ದಿ ಟೋಟಲ್ ಎಕ್ಸ್‌ಪೆಂಡಿಚರ್ ಈಸ್ ೩೧೭.೫೩ ಕೋರ್ಸ್ ಮಾತ್ರ. ಅಂದರೆ ಸುಮಾರು ೭೭೧.೧೮ ಕೋಟಿಗಳಷ್ಟು ಬ್ಯಾಲೆನ್ಸ್ ವರ್ಷಕ್ಕೆ ೫೫ ಕೋಟಿಯಂತೆ ಖರ್ಚು ಹೆಚ್ಚಿಗೆ ಮಾಡಿದರೂ ಇನ್ನೂ ೧೪ ವರ್ಷ ನಿಮಗೆ ಬೇಕು. ೧೯೮೩ರಲ್ಲೇ ಪ್ರಾಜೆಕ್ಟ್ ಕಂಪ್ಲೀಟ್ ಆಗಬೇಕಾಗಿತ್ತು. ಈಗ ತಾವು ೩೧-೩-೮೭ರೊಳಗೆ ಮುಗಿಸುವುದಾಗಿ ಎಕ್ಸ್‌ಟೆನ್‌ಷನ್ ತೆಗೆದುಕೊಂಡಿದ್ದೀರಿ. ಹಾಗೆಂದು ವರ್ಲ್ಡ್ ಬ್ಯಾಂಕ್‌ನವರಿಗೆ ಮಾತುಕೊಟ್ಟಿದ್ದೀರಿ. ಅವರು ಎಕ್ಸ್‌ಟೆನ್‌ಷನ್ ಕೊಟ್ಟಿದ್ದರೂ ನೀವು ಅದನ್ನು ಸಾಧಿಸುತ್ತೀರೋ ಇಲ್ಲವೋ ಎಂಬುದನ್ನು ಕರ್ನಾಟಕದ

ಜನತೆ ನೋಡುತ್ತಿದ್ದಾರೆ. ೮೨-೮೩ರಲ್ಲಿ ೫೩ ಕೋಟಿ ಇದ್ದು ಖರ್ಚಾಗಿರುವುದು ೩೮.೧೩ ಕೋಟಿ
೮೩-೮೪ರಲ್ಲಿ ೫೦.೬೦ ಇದ್ದು ಖರ್ಚಾಗಿರುವುದು ೪೯.೧೦ ಕೋಟಿ. ೮೪-೮೫ರಲ್ಲಿ ೫೭.೧೧ ಕೋಟಿ
ಇದ್ದು ಖರ್ಚಾಗಿರುವುದು ೪೧.೭೩ ಕೋಟಿ ಮಾತ್ರ ಇದರಲ್ಲಿ ಸುಮಾರು ೭ ಕೋಟಿಗಳು ಆರ್ಬಿ
ಟ್ರೇಷನ್ ಅಕೌಂಟ್‌ಗೆ ಕೂಡ ಸೇರಿರಬಹುದು ಟು ದಟ್ ಎಕ್ಸ್‌ಟೆಂಟ್ ದೇರೀಸ್ ನೋ ವರ್ಕ್.
೬೧ರಿಂದ ಸುಮಾರು ೭ ಕೋಟಿ ರೂ ಹೋದರೆ ಇನ್ನು ೩೪ ಕೋಟಿ ರೂ. ಮಾತ್ರ ಅದರಲ್ಲಿ ಬಿಲ್
ಕ್ಲಿಯರೆನ್ಸ್ ಮಾಡಲು ಹಿಂದೆ ಎಷ್ಟು ಕೊಟ್ಟಿದ್ದೀರಿ ಅದರ ಟೋಟಲ್ ಅಕೌಂಟ್ ಕೊಡಬೇಕು.
That means to say that for 1984-85 with all your dynamism
you could not take up this project. You may have your own
constraints. ಇದ್ದರೆ ಅವನ್ನು ಹೇಳಿ. ಏಕೆಂದರೆ ಆರ್ಬಿಟ್ರೇಷನ್‌ಗೆ ಸುಮಾರು ೩೧
ಕೇಸ್‌ಗಳು ಹೋಗಿವೆ ಅವು ಬೇರೆ ಬೇರೆ ಹಂತಗಳಲ್ಲಿವೆ. ಇವತ್ತು ೩೧-೩-೮೬ರರೊಳಗೆ ೭೭೧ ಕೋಟಿ
ರೂಗಳನ್ನು ಹೇಗೆ ಖರ್ಚು ಮಾಡುತ್ತೀರಿ ಎಂಬುದನ್ನು ಹೇಳಬೇಕು ವ್ಯಾಪಕವಾಗಿ ತಾವು ಖರ್ಚು
ಮಾಡಬೇಕು. ಆಟ್‌ದಿ ಮೋಸ್ಟ್ ಯುಆ ಮೇ ಪ್ರೊವೈಡ್ ೬೦ ಟು ೬೫ ಕ್ರೋರ್ಸ್ ವರ್ಲ್ಡ್
ಬ್ಯಾಂಕ್ ಪ್ರೊಜೆಕ್ಟ್‌ಗೆ ರೀಇಂಬರ್ಸ್‌ಮೆಂಟ್ ಸಿಗುತ್ತದೆ. ಪ್ಲಾನಿಂಗ್ ಕಮಿಷನ್‌ಗೆ ಹೇಳಿ ಯುಓ
ಮಸ್ಟ್ ಟ್ರೀಟ್ ಇಟ್ ಔಟ್‌ಸೈಡ್ ದಿ ಪ್ಲಾನ್ ಎಂದು ವಿಶೇಷವಾದ ರೀತಿಯಲ್ಲಿ ಪ್ಲಾನ್‌ಸಲ್ಲಿ ಸೇರಿಸಿ
ನೀವು ಕೆಲಸ ಮಾಡಬೇಕು. ಈ ಸಲ ೧೦೦ ಕೋಟಿಯಾದರೂ ಖರ್ಚು ಮಾಡದೇ ಹೋದರೆ ವರ್ಲ್ಡ್
ಬ್ಯಾಂಕ್‌ನವರು ಇನ್ನು ಮುಂದೆ ಯಾವ ಪ್ರೊಜೆಕ್ಟ್‌ಗೂ ಮಾನ್ಯತೆ ಕೊಡುವುದಿಲ್ಲ. ಮಾನ್ಯ ಲಕ್ಷ್ಮೀ
ಸಾಗರ್‌ರವರೂ ಕೂಡ ಬೆಂಗಳೂರಿನ ಕಾವೇರಿ ೩ನೇ ಹಂತಕ್ಕೆ ವರ್ಲ್ಡ್ ಬ್ಯಾಂಕ್‌ನಿಂದ ದುಡ್ಡು ತರು
ತ್ತೇನೆಂದು ಹೇಳಿದರು. ಆದರೆ ಇದನ್ನು ಇಂಪ್ಲಿಮೆಂಟ್ ಮಾಡುವುದು ಹೇಗೆ? ಹಿಂದೆ ಕೊಟ್ಟಿರುವ
ಹಣವನ್ನೇ ನಾವು ಬಳಸುವ ಸ್ಥಿತಿಯಲ್ಲಿಲ್ಲದಾಗ ಮತ್ತೆ ಹಣ ತರುತ್ತೇವೆ ಎಂಬುದು ಪೊಲಿಟಿಕಲ್
ಸ್ಟಂಟ್‌ಗೆ ಹೇಳಬಹುದೇ ಹೊರತು ಸರಿಯಾದಂಥ ಸಾಧನೆಯ ದೃಷ್ಟಿಯಲ್ಲಿ ನಾವು ಯಶಸ್ವಿಯಾಗು
ವುದಿಲ್ಲ ಎಂಬುದನ್ನು ಯೋಚಿಸಬೇಕು. ಇದನ್ನು ನಾನು ಹೇಳುತ್ತಿದ್ದೇನೆ. ಪತ್ರಿಕೆಗಳಲ್ಲಿ ಕೂಡ
ಬಂತು ಬೆಂಗಳೂರಿಗೆ ಹೇಮಾವತಿಯಿಂದ ನೀರು ತರುತ್ತೇನೆಂದು ಮಾನ್ಯ ಲಕ್ಷ್ಮೀಸಾಗರ್ ಹೇಳಿ
ದ್ದಾರೆ. ವರ್ಲ್ಡ್ ಬ್ಯಾಂಕ್‌ನ ಎಕ್ಸ್‌ಪರ್ಟ್ಸ್ ಈ ಹಿಂದೆ ಒಂದು ಬೆಂಗಳೂರಿಗೆ ಅರ್ಕಾವತಿ ಕಾವೇರಿ
ಹೇಮಾವತಿ ನದಿಗಳ ಪೈಕಿ ಯಾವುದರಿಂದ ನೀರು ತರಬಹುದೆಂದು ಅಧ್ಯಯನ ಮಾಡಿ ಕೊನೆಯಲ್ಲಿ
ಅರ್ಕಾವತಿ ಮತ್ತು ಹೇಮಾವತಿಗಳು ಕಾರ್ಯಸಾಧುವಾಗುದ್ದಿಲ್ಲವೆಂದು ರಿಜೆಕ್ಟ್ ಮಾಡಿದರು. ಕೊನೆಗೆ
ಕಾವೇರಿಯನ್ನೇ ಅನುಮೋದಿಸಿದರು. ಈಗ ಹೇಮಾವತಿಯಿಂದ ತನ್ನಿ ಎನ್ನು ಅವರಾದರೂ ಏಕೆ
ಹೇಳುತ್ತಾರೆ? ಹೇಮಾವತಿಯ ನೀರು ಯಾವುದೋ ಒಂದು ಕಾಲಕ್ಕೆ ಮಾತ್ರ ಬರುತ್ತದೆ. ಎಲ್ಲಾ
ಕಾಲಕ್ಕೂ ಸಿಕ್ಕುವುದಿಲ್ಲ. ಸರ್‌ಪ್ಲಸ್ ವಾಟರ್ ಇರಿಗೇಷನ್ ಸಾಕಾಗುತ್ತಿಲ್ಲ. ಸುಮ್ಮನೆ ಕೇಂದ್ರ
ಸರ್ಕಾರದಲ್ಲಿಕ್ಕೂ ಇದೆ ಎಂದು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬೇಡಿ. ಕೇಂದ್ರ ಸರ್ಕಾರಕ್ಕೇ
ಆಗಲಿ ವಿಶ್ವ ಬ್ಯಾಂಕ್‌ಗೇ ಆಗಲಿ ನೀವು ಯಾವುದೇ ಯೋಜನೆ ಕೊಟ್ಟರೂ On the world Bank
map, Karnataka will be totally blacklisted. You may feel it will
give a political advantage but ultimatley Karnataka will be consi-
dered as a State with persons without knowledge of irragiation.
You must not forget that you are from the land of Dr. Visveswa
raiah. ನಾವು ನಮ್ಮ ಮುಗ್ಧತೆಯನ್ನು ಅಥವಾ ಮೌಢ್ಯವನ್ನು ವಿಶ್ವಬ್ಯಾಂಕಿನ ವೇದಿಕೆಯಲ್ಲಿ
ಕೇಂದ್ರದ ಡೆಲ್ಲಿಯ ವೇದಿಕೆಯಲ್ಲಿ ತೋರಿಸತಕ್ಕಂಥ ಟ್ರೆಂಡ್ ಕರ್ನಾಟಕದಲ್ಲಿ ಪ್ರಾರಂಭವಾಗಿದೆ ನೀವು
ರಾಜಕಾರಣದ ದೃಷ್ಟಿಯಿಂದ ಏನಾದರೂ ಸಾಧನೆ ಮಾಡುತ್ತೇವೆ ಎಂದು ಹೇಳಿಕೊಂಡರೆ ಅದರ ಪರಿ
ಣಾಮವಾಗಿ ಕರ್ನಾಟಕಕ್ಕೆ ಶಾಶ್ವತವಾದ ಕಳಂಕ ಬರುವಂತಹ ಪ್ರವೃತ್ತಿ ಉಂಟಾಗುತ್ತದೆ. ಅದನ್ನು
ದಯವಿಟ್ಟು ಮಾಡಬೇಡಿ ಎಂದು ಸನ್ಮಾನ್ಯ ನೀರಾವರಿ ಸಚಿವರ ಮುಂದೆ ಇಡಬಯಸುತ್ತೇನೆ. ಆದರೆ
ಯುಕೆಪಿ ಪರಿಸ್ಥಿತಿ ಇವತ್ತು ಏನಾಗಿದೆ ಎಂದರೆ ಇದು ಪಿ.ಎ.ಸಿ. ಯಲ್ಲಿ ಬಂದಿದೆ. ಇಲ್ಲಿ ಅದನ್ನು ಹೆಚ್ಚಿಗೆ
ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ವಿಷಯವೆಂದರೆ ಕಂಟ್ರಾಕ್ಟರುಗಳಿಗೆ ಕಂಟ್ರಾಕ್ಟ್
ಸಿಕ್ಕಿದ ಕೂಡಲೇ ಆರ್ಬಿಟ್ರೇಷನ್‌ನಲ್ಲಿ ಜಯಗಳಿಸತಕ್ಕ ಎಲ್ಲಾ ದಾಖಲೆಗಳನ್ನೂ ಸಿದ್ಧಪಡಿಸುತ್ತಾರೆ.
ನಿಮ್ಮ ಚೀಫ್ ಇಂಜಿನಿಯರ್‌ಗಳು ಮತ್ತಿತರ ಜವಾಬ್ದಾರರು ಸರ್ಕಾರದ ಹಿತರಕ್ಷಕರಾಗದೆ ಅನೇಕ
ಬಾರಿ ಅವರಿಗೇ ಸಾಮೀಲಾಗಿರುತ್ತಾರೆ, ಮೌನ ಪ್ರೇಕ್ಷಕರಂತೆ ಕರ್ನಾಟಕದ ಹಿತವನ್ನು ಬಲಿಕೊಡು
ತ್ತಿದ್ದಾರೆ. They are against the Government. ಇಂಥ ಇಂಜಿನೀಯರ್‌ಗಳನ್ನು ನೀವು
ಬಲಿ ಹಾಕದಿದ್ದರೆ ಇವರು ಎಲ್ಲ ಯೋಜನೆಗಳನ್ನೂ ಬಲಿ ತೆಗೆದುಕೊಂಡು ಬಿಡುತ್ತಾರೆ. ಆದ್ದರಿಂದ
ಯುಕೆಪಿ ಆರ್ಬಿಟ್ರೇಷನ್ ವಿಚಾರದಲ್ಲಿ ೩೧ ಕೇಸ್‌ಗಳ ಪೈಕಿ ೯ ಕೇಸ್‌ಗಳನ್ನು ಮಾತ್ರ ಸ್ವೀಕಾರ ಮಾಡಿ

ದ್ಧರೆ. ಉಳಿದವು ಇನ್ನೂ ಇತ್ಯರ್ಥವಾಗಬೇಕಾಗಿದೆ, ಆ ಕೆಲಸ ನಿಮ್ಮ ಕಡೆಯಿಂದ ತುರ್ತಾಗಿ ಆಗಬೇಕಾಗಿದೆ.

ಕೃಷ್ಣಾ ಮೇಲ್ದಂಡೆ ವಿಚಾರದಲ್ಲಿ ಮೂರು ವಿಷಯಗಳನ್ನು ಮಾತ್ರ ನಾನು ಹೇಳಬಯಸುತ್ತೇನೆ ಇದರಿಂದ ಮೂರು ವಿಚಾರ ಉದ್ಭವವಾಗುತ್ತವೆ. ಮೊದಲನೆಯದಾಗಿ ಒಂದು ವ್ಯಾಲಿಯಿಂದ ಮತ್ತೊಂದು ವ್ಯಾಲಿಗೆ ನೀರನ್ನು ಡೈವರ್ಟ್ ಮಾಡತಕ್ಕ ವಿಚಾರ. This is the fundamental issue upon which Karnataka always fought for years and years. ಒಂದು ರಿವರ್‌ನಿಂದ ಮತ್ತೊಂದು ರಿವರ್ ವ್ಯಾಲಿಗೆ ನೀರನ್ನು ಡೈವರ್ಟ್ ಮಾಡತಕ್ಕ ವಿಚಾರವನ್ನು ಮಾಡಬಾರದು. ಬಹುಶಃ ೨೦–೩೦ ವರ್ಷಗಳಿಂದ Engineers have fought at various forums. ನಾವು ಕೂಡ ಫೈಟ್ ಮಾಡಿದ್ದೇವೆ. ಕೃಷ್ಣಾ ನದಿಯಿಂದ ತೆಲುಗು–ಗಂಗಾ ಯೋಜನೆ It is an important point. ೧೫ ವರ್ಷ ನೀರನ್ನು ಉಪಯೋಗ ಮಾಡಿದರೆ I am subject to correction. ವೇಸ್ಟ್ ಆಗುವ ನೀರನ್ನು ಉಪಯೋಗ ಮಾಡಿಕೊಳ್ಳಬಹುದೆಂದು ಇವತ್ತು ಹೇಳಬಹುದು. After 2000 when you sit over judgement over the distribution of the water, you may not have any right what so ver left. ಯಾವ ರೀತಿಯ ಅಧಿಕಾರ ಕೂಡ ಆಗಬರಲಿಕ್ಕೆ ಸಾಧ್ಯವಿಲ್ಲ Other State must have already established riparian rights over it. ಇದನ್ನು ತಾವು ಸೂಕ್ಷ್ಮವಾಗಿ ಆಲೋಚನೆ ಮಾಡಬೇಕಾಗಿದೆ. ಬಚಾವತ್ ಅವಾರ್ಡಿನಲ್ಲಿ ಯಾವುದೇ ಸಂದರ್ಭದಲ್ಲಿ ಒಂದು ವ್ಯಾಲಿಯಿಂದ ಮತ್ತೊಂದು ವ್ಯಾಲಿಗೆ ನೀರನ್ನು ಟ್ರಾನ್ಸ್‌ಫರ್ ಮಾಡಬೇಕೆಂದು ಇಲ್ಲ. It is totally prohibited. That is prohibited in the Bachawat Award is now sought to be established by the AP Government. You will have to take precaution for that. ಹಿಂದೆ ಕೂಡ ಅಂತರರಾಜ್ಯ ವಿಚಾರ ಬಂದಾಗ, ಮದ್ರಾಸ್‌ನಲ್ಲಿ ಕಾಮರಾಜ್ ನಾಡಾರ್ ಮುಖ್ಯ ಮಂತ್ರಿಯಾಗಿದ್ದರು, ಆಂಧ್ರದಲ್ಲಿ ಸಂಜೀವರೆಡ್ಡಿಯವರು, ಮತ್ತು ಕರ್ನಾಟಕದಲ್ಲಿ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದರು. ವೈಯಕ್ತಿಕವಾಗಿ ಅವರೆಲ್ಲ ಬಹಳ ಸ್ನೇಹಿತರಾಗಿದ್ದರು. ಆದರೆ ನೀರಿನ ವಿಚಾರ ಬಂದಾಗ ಅವರೆಲ್ಲಾ ಕ್ಲಿಯರ್ ಆಗಿ ಡಿಸಿಷನ್ ತೆಗೆದುಕೊಳ್ಳುತ್ತಿದ್ದರು. We have been very clear about it. We want the Hon.Chief Minister to be categorical as far as that is concerned. ನೀರಿನ ಕಾಂಪೊನೆಂಟ್ ವಿಚಾರ ಬಂದಾಗ ಅದಕ್ಕೆ ನಾವು ವಿರುದ್ಧ ಇದ್ದೇವೆಂದು ಹೇಳಿದರೆ ಕಾಂಟ್ರವರ್ಸಿಗೆ ಕಾರಣವಿರುವುದಿಲ್ಲ. All controversies would be got over. by the Chief Minister, himself ಆರೀತಿ ಹೇಳುತ್ತಾರೆಂದು ನನ್ನ ನಂಬಿಕೆ. ಮತ್ತೊಂದು ಸೂಕ್ಷ್ಮವಾದ ವಿಚಾರ ಎಂದರೆ ತೆಲುಗು–ಗಂಗಾ ವಿಚಾರ ೧೯೭೭ರ ಫೆಬ್ರವರಿ ತಿಂಗಳಿನಲ್ಲಿ ಆಗಿನ ಮುಖ್ಯ ಮಂತ್ರಿಗಳು ಹೈದರಾಬಾದಿಗೆ ಹೋಗಿದ್ದರು. ಆಗ ಗಂಗಾ ಯೋಜನೆಯ ಘಟನೆ ನಡೆಯುತ್ತಿತ್ತು. ಆಗ ಈ ವಿಚಾರ ಬಂತು. ಆಗಿನ ಮುಖ್ಯ ಮಂತ್ರಿಗಳು ತಕ್ಷಣ by telex he enformed Delhi that 5 TMC ft could be spared from Karnataka. After two months there were follow up meetings by the officers. There were two points which are canvassed by our officers (i) there would not be any diversion from one valley to another. ಅಂದರೆ ಟ್ವಿನ್ ಡಕ್ಟ್ ಮೂಲಕ ನೀರನ್ನು ಕೊಡಬೇಕು. ನೀರು ಓಪನ್ ಆಗಿ ಕಾಲುವೆ ಮೂಲಕ ಹೋಗಬೇಕೆ ಹೊರತು ಓಪನ್ ಚಾನಲ್ ಮೂಲಕ ಹೋಗಬಾರದು ಎನ್ನುವ ಈ ಕಂಡೀಷನ್‌ನಲ್ಲಿ It was agreed. ಓಪನ್ ಚಾನಲ್‌ನಲ್ಲಿ ನೀರನ್ನು ತೆಗೆದುಕೊಂಡು ಹೋಗಬೇಕೆಂದು ಯಾವಾಗ ಬದಲಾವಣೆ ಮಾಡಿದರು ಅದಕ್ಕೆ ಏಕೆ ಒಪ್ಪಿಗೆ ಕೊಟ್ಟರಿ ? ಆ ಕಾಲದಲ್ಲಿ ಏಕೆ ವಿರೋಧ ಮಾಡಿಲ್ಲ ? ಈ ಪ್ರಶ್ನೆಯಿಂದ ಕರ್ನಾಟಕದ ಜನರಿಗೆ ಸ್ಪಷ್ಟ ಪಡಿಸಬೇಕಾದಂತಹ ರೀತಿಯಲ್ಲಿ ಮಾಡುತ್ತೀರೆಂದು ಇಂದು ನಾನು ನಂಬುತ್ತೇನೆ. ಅಧ್ಯಕ್ಷರೇ ಇವತ್ತು ನಾವು ಒಂದು ರೀತಿಯ ಸಂದಿಗ್ಧ ಕಾಲದಲ್ಲಿ ಇದ್ದೇವೆ As for as water rates are concerned ನಾವು ವಿಶೇಷವಾಗಿ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾವು ಅದನ್ನು ವಿವರವಾಗಿ ತಾವು ಕರೆದಾಗ ಮಾತನಾಡುತ್ತೇವೆ. ಇವತ್ತು You will have to come out with the Master Plan ಎಲ್ಲಾ ನೀರನ್ನೂ ಅಂದರೆ ಅದು ಕೃಷ್ಣಾವ್ಯಾಲಿ ಇರಬಹುದು, ಕಾವೇರಿ ವ್ಯಾಲಿ ಇರಬಹುದು, ಉಳಿದ ಸಣ್ಣ ಸಣ್ಣ ನದಿಗಳು ಅಥವಾ On west flowing rivers you

may take some time. ಅದರ ಬಗ್ಗೆ ಮಾಸ್ಟರ್ ಪ್ಲಾನ್‌ನ್ನು ಇವತ್ತು ಕೊಡಿ. ಇದನ್ನು ಈ ಸದನ ಮುಗಿಯುವುದರೊಳಗೆ ಕೊಡಿ ಅಥವಾ ಎರಡು-ಮೂರು ತಿಂಗಳಲ್ಲಿ ಕೊಡಿ. ಆದರೆ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಬೇಕಾದದ್ದು ಒಂದು ಅವಶ್ಯಕತೆ ಇದೆ. ತಾವು ಮಾಡತಕ್ಕ ಮಾಸ್ಟರ್ ಪ್ಲಾನ್ ೨೦೦೦ ಎ.ಡಿ.ಗೆ ಈ ನೀರನ್ನು ಉಪಯೋಗ ಮಾಡಲಿಕ್ಕೆ ಬರುತ್ತದೆ. ೭ನೇ ಪ್ಲಾನ್‌ನಲ್ಲಿ ನಾವು ನೋಡುವಾಗ ಮೇಜರ್ ಇರಿಗೇಷನ್‌ಗೆ ೧ ಸಾವಿರ ಕೋಟಿ ರೂಪಾಯಿ ಮಾತ್ರ according to my information ಕಳೆದ ಬಾರಿ ನೀವು ೭೦೦ ಕೋಟಿ ಚಿಲ್ಲರೆ ಖರ್ಚು ಮಾಡಿದ್ದಿರಿ ಇದರಿಂದ ೭.೩೮ ಲಕ್ಷ ಹೆಕ್ಟೇರ್ ಭೂಮಿಗೆ ಮಾತ್ರ ಅನುಕೂಲವಾಗಿದೆ.

ಇನ್ನೊಂದು ವಿಷಯವೆಂದರೆ ಸುಮಾರು ೧೮ ಲಕ್ಷ ಅಥವಾ ೧೯ ಲಕ್ಷ ಹೆಕ್ಟೇರು ಭೂಮಿಯನ್ನು ಈ ಯೋಜನೆ ಆಗುವಾಗ ಉಪಯೋಗಕ್ಕೆ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಈ ದೃಷ್ಟಿಯಲ್ಲಿ ಹೋದರೆ ಯಾವುದೇ ಒಂದು ರೀತಿಯಲ್ಲಿ ಇರಿಗೇಷನ್ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಈ ಬಗ್ಗೆ ವ್ಯಾಪಕವಾದಂತಹ ಒಂದು ನಿರ್ಣಯ ಮತ್ತು ಮಾಸ್ಟರ್ ಪ್ಲಾನ್‌ನ್ನು ಕೊಡದೇ ಇದ್ದರೆ ನಿಮ್ಮ ಮೇಲೆ ಕರ್ನಾಟಕ ರಾಜ್ಯದ ಜನರಿಗೆ ವಿಶ್ವಾಸ ಬರುವುದಿಲ್ಲ. ತಾವುಗಳು ಸಾಕಷ್ಟು ಕಂಟ್ರಾಕ್ಟರುಗಳ ಬಗ್ಗೆ ಹೇಳಿದ್ದೀರಿ. ಕಂಟ್ರಾಕ್ಟರುಗಳ ಸಿಸ್ಟಮ್‌ನ್ನು ಅಬಾಲಿಷ್ ಮಾಡಬೇಕೆಂದು ತಾವು ಭಾಷಣ ವನ್ನೂ ಮಾಡಿದ್ದೀರಿ. ಅದನ್ನು ಓದಲಿಕ್ಕೆ ನಾನು ಹೋಗುವುದಿಲ್ಲ. ಕಂಟ್ರಾಕ್ಟರುಗಳ ಸಿಸ್ಟಮ್‌ನ್ನು ನಿರ್ಮೂಲನೆ ಮಾಡದೇ ಇದ್ದರೆ ಕನಿಷ್ಠಪಕ್ಷ ೧೦ ವರ್ಷಗಳ ಕಾಲ ಸೆಕ್ಯೂರಿಟಿ ಡಿಪಾಸಿಟ್‌ನ್ನು ಇಡಿಸಿ ಕೊಳ್ಳುವಂತಹ ಏರ್ಪಾಡು ಮಾಡಬೇಕು. ಪ್ರಾಜೆಕ್ಟ್‌ಗಳು ಹೆಚ್ಚು ಕಡಿಮೆಯಾದರೆ ಆ ಹಣವನ್ನು ಉಪಯೋಗ ಮಾಡಬಹುದು. ನಮ್ಮ ನೀರಾವರಿ ಸಚಿವರು ಬಹಳ ದೊಡ್ಡ ಭಾಷಣವನ್ನು ಈ ಕಡೆಯಲ್ಲಿ ಇದ್ದಾಗ ಮಾಡುತ್ತಿದ್ದರು. ಅದನ್ನೆಲ್ಲಾ ನಾನು ಇಲ್ಲಿ ಓದಲಿಕ್ಕೆ ಹೋಗುವುದಿಲ್ಲ. ಇದನ್ನೆಲ್ಲಾ ಒತ್ತಿ ಹೇಳಿದ ಮೇಲಾದರೂ ತಮಗೆ ಸ್ಪಿರಿಟ್ ಬರಬಹುದೆಂದು ನಾನು ಹೇಳುತ್ತಿದ್ದೇನೆ. ಪ್ರಮುಖ ವಾಗಿ ಕಾವೇರಿ, ಹೇಮಾವತಿ ಮತ್ತು ಕೃಷ್ಣ ಯೋಜನೆಗಳು ಇವೆ. ಈ ಯೋಜನೆಗಳನ್ನು ಮಾಡಲು ಹೊರಗಿನಿಂದಲೂ ಕಂಟ್ರಾಕ್ಟರುಗಳು ಬಂದಿದ್ದಾರೆ. ಅವರಲ್ಲಿ ರೆಡ್ಡಿ ಎನ್ನುವವರು ಒಬ್ಬರು ಇನ್ನೊಬ್ಬರು ರಾಮಯ್ಯ ಎನ್ನುವವರು ಮತ್ತು ಶ್ರೀನಿವಾಸ್ ಎಂಜಿನೀಯರಿಂಗ್ ಕಂ. ಇವರು ಈ ಮೇಲಿನ ಯೋಜನೆಗಳನ್ನು ಪೂರ್ಣಗೊಳಿಸಿದರೆ ಸುಮಾರು ೯೦ ಪರ್ಸೆಂಟ್ ಇರಿಗೇಟ್ ಮಾಡಬಹುದು. ಆದರೆ ನಿಮ್ಮ ಜುಟ್ಟು ರಾಮಯ್ಯ ಎನ್ನುವವರಿಗೆ ಕೊಟ್ಟಿದ್ದೀರೋ ಅಥವಾ ರೆಡ್ಡಿಯವರಿಗೆ ಕೊಟ್ಟಿದ್ದೀರೋ ಗೊತ್ತಿಲ್ಲ. ಇವರ ಹಿಡಿತದಿಂದ ಸರ್ಕಾರ ತಪ್ಪಿಸಿಕೊಳ್ಳಲಿಕ್ಕೆ ಒಂದು ರೀತಿಯ ಅಸಮರ್ಥತೆ ತೋರಿಸಿರುವುದರಿಂದ ನಮ್ಮ ಇರಿಗೇಷನ್ ಪ್ರಾಜೆಕ್ಟ್ ಇಂಪ್ಲಿಮೆಂಟೇಷನ್‌ಗೆ ತೊಂದರೆ ಆಗುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಬರೀ ಜುಟ್ಟು ಕೊಟ್ಟಿದ್ದಾರೋ ಅಥವಾ ಜನಿವಾರವನ್ನೂ ಕೊಟ್ಟಿದ್ದಾರೋ ?

ಶ್ರೀ ಎಂ. ವೀರಪ್ಪಮೊಯಿಲಿ.—ಯಾರು ಏನು ಮಾಡಿದ್ದಾರೆ ಹಾಗೂ ಯಾವ ಸಂದರ್ಭದಲ್ಲಿ ಮಾಡಿದ್ದಾರೆ ಎನ್ನುವುದನ್ನು ಸಮಯ ಬಂದಾಗ ಹೇಳುತ್ತೇನೆ.

I am telling you this chart holds whether this or for the previous Government. Mr. Devegowda is sitting here to preside over the destiny of Karnataka.... ಅವರು ಏನು ಮಾಡಿದ್ದಾರೆ ಅವನ್ನು ನಾನು ಹೇಳಬೇಕಾಗಿದೆ. ಏಕೆಂದರೆ ಅವರಿಗೆ ದೇಶದ ವ್ಯಾಮೋಹ ಇರುವುದಿಲ್ಲ. ಕರ್ನಾಟಕ ರಾಜ್ಯವನ್ನು ಮುಂದೆ ಕೊಂಡೊಯ್ಯಬೇಕೆಂಬ ಆಕಾಂಕ್ಷೆ ಇರುವುದಿಲ್ಲ. You permit them. Because they are interested only in money and getting escalation and higher percentage. ಇದು ಈವತ್ತು ನಡೆಯುತ್ತಿದೆ. ಅದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡದೆ ಮುಂದೂ ಕೂಡ ಅದನ್ನೇ ಮುಂದುವರಿಸಿಕೊಂಡು ಹೋಗತಕ್ಕಂಥ ಪರಿಸ್ಥಿತಿ, ಮನೋ ಭಾವ ಈ ಸರ್ಕಾರದಲ್ಲೂ ಕೂಡ ಉಳಿದಿದೆ ಎಂದು ಆಪಾದನೆಯನ್ನು ನಾನು ಮಾಡುತ್ತೇನೆ. ನೀವು ಕಠಿಣವಾದ ಸಂದರ್ಭದಲ್ಲಿ ಕಠಿಣವಾಗಿ ಹೆಜ್ಜೆ ಇಡಬೇಕಾಗಿದೆ.

ಸನ್ಮಾನ್ಯ ಅಧ್ಯಕ್ಷರೇ, ದೇವೇಗೌಡರು ೭೪ ನೇ ಇಸವಿಯಲ್ಲಿ ಚೀಫ್ ಇಂಜನೀಯರ್‌ಗಳ ಸಂಖ್ಯೆಯ ಬಗ್ಗೆ ಹೇಳಿದರು ಆಗ ಇದ್ದುದು ೩ ಅಥವಾ ೪ ಈಗ ೩೪ ಚೀಫ್ ಇಂಜಿನಿಯರ್‌ಗಳಿದ್ದಾರೆ. ೪ ಚೀಫ್ ಇಂಜಿನಿಯರ್‌ಗಳಿದ್ದಾಗ ಏಕೆ ಇಷ್ಟೊಂದು ಜನರನ್ನು ಇಟ್ಟು ಕೊಂಡಿದ್ದೀರಿ ಎಂದು ಕೇಳಿದ್ದರು. ಆದರೆ ಇವತ್ತು ೩೪ ಜನರನ್ನು ಇಟ್ಟುಕೊಂಡು ನೀವೇನು ಮಾಡುತ್ತಿದ್ದೀರಿ ? ವಾಟ್ ಈಸ್ ಯುವರ್

ಪರ್‌ಫಾರ್ಮೆನ್ಸ್ ? ಯಾವಪ್ರಾಜೆಕ್ಟ್‌ನಲ್ಲಿ ದಕ್ಷತೆ ಕಾಣಬೇಕಾಗಿತ್ತೋ, ಯಾವ ಒಂದು ಕ್ಷಿಪ್ರವಾದ ಅಭಿವೃದ್ಧಿ ಕಾಣಬೇಕಾಗಿತ್ತೋ ಅದು ಸಂಪೂರ್ಣವಾಗಿ ಶೂನ್ಯವಾಗಿದೆ ಎಂಬ ಭಾವನೆ ಕರ್ನಾಟಕ ಜನರಲ್ಲಿ ಬಂದಿದೆ ಅದನ್ನು ಸರಿ ಮಾಡತಕ್ಕಂಥ ಅವಶ್ಯಕತೆ ಇವತ್ತು ಇದೆ. ಈ ದಿಸೆಯಲ್ಲಿ ಸರ್ಕಾರ ಯಾವ ರೀತಿ ಗಮನಹರಿಸುತ್ತಿದೆ ಎಂಬುದನ್ನು ಇಂದು ನಮಗೆ ದೇವೇಗೌಡರು ಹೇಳಬೇಕಾಗಿದೆ. ಇನ್ನು ನೀರಾವರಿ ಬಗ್ಗೆ ಇವತ್ತು ೩೪ ಚೀಫ್ ಇಂಜಿನಿಯರ್‌ಗಳು ಬೇರೆ ಬೇರೆ ಕಡೆಗಳಲ್ಲಿ ಇದ್ದಾರೆ ಅವರ ಪೈಕಿ ಕೆಲವರು ಅನಗತ್ಯ ಜಾಗಗಳಲ್ಲೂ ಇದ್ದಾರೆ. ಕೆಲವು ಸಲ ನೀವು ದಾಕ್ಷಿಣ್ಯದ ಸುಳಿಗೆ ಬೀಳು ತ್ತಿದ್ದೀರಿ ಎಂದು ನನಗನ್ನಿಸುತ್ತದೆ. ಏಕೆಂದರೆ ಚೀಫ್ ಇಂಜಿನಿಯರ್ ಸಂಖ್ಯೆ ಬಗ್ಗೆ ನಿಮ್ಮ ನಡವಳಿಕೆ ಬಗ್ಗೆ ನಾನು ಇನ್ನೊಮ್ಮೆ ವ್ಯಾಖ್ಯಾನ ಮಾಡುತ್ತೇನೆ. ಇವತ್ತು ಪ್ರೋಮೋಷನಲ್ ಅವನ್ಯೂ ದೃಷ್ಟಿ ಯಿಂದಲೋ ಏನೋ ಈ ರೀತಿ ಮಾಡಿದ್ದೀರಿ, ಚೀಫ್ ಇಂಜಿನಿಯರ್ ಕಮ್ಯುನಿಕೇಷನ್ಸ್ ಅಂಡ್ ಬಿಲ್ಡಿಂಗ್ಸ್, ಧಾರವಾಡದಲ್ಲಿ ನಾರ್ತ್ ಅಂಡ್ ಸೌತ್ ಎಂದು ಮಾಡಿದ್ದೀರಿ. ನೀವು ದಾಕ್ಷಿಣ್ಯದ ಸುಳಿಗೆ ಬಿದ್ದರೆ ಈ ಕೆಲಸ ಆಗುವುದಿಲ್ಲ. ಇದನ್ನು ನೇರವಾಗಿ ಹೇಳುತ್ತಿದ್ದೇನೆ. ಕೆಲಸ ಮಾಡುವುದಕ್ಕೆ ಆಗದಿದ್ದರೆ ನಾನು ಇಲ್ಲಿರುವುದಿಲ್ಲ ಎಂದು ಕೂಡ ನೀವು ಹೇಳಿದ್ದೀರಿ. ಈಗ ಏಕೆ ಅಡ್ಡದಾರಿ ಹಿಡಿದಿರಿ? ೩೪ ಚೀಫ್ ಇಂಜಿನಿಯರ್‌ಗಳನ್ನು ಏಕೆ ಇಟ್ಟುಕೊಂಡಿದ್ದೀರಿ ? ಅದು ನನಗೆ ಬೇಕು. ಇನ್ನು ವರ್ಗಾವಣೆಯ ಬಗ್ಗೆ ನಾನು ವಿಸ್ತಾರವಾಗಿ ಪರ್ಸನೊಲೈಸ್ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ತಾವು ಕಳೆದ ಎರಡು ವರ್ಷಗಳಿಂದ ಯಾವ ನೀತಿಯನ್ನು ಅನುಸರಿಸಿಕೊಂಡಿದ್ದೀರೋ ಅದರಿಂದ ಇಲಾಖೆಗೆ ದಕ್ಷತೆಯನ್ನು ತರುವುದಕ್ಕೆ ಆಗುತ್ತಿಲ್ಲ. ಅದರ ಬದಲಿಗೆ ಅದಕ್ಷತೆ ಹೆಚ್ಚಾಗುತ್ತಿದೆ. ಚೀಫ್ ಇಂಜಿನಿಯರ್‌ಗಳಲ್ಲಿ ನಿಜವಾದ ಉತ್ಸುಕತೆ ನಾಶವಾಗುತ್ತಿದೆ. ನಿಮ್ಮ ಸರ್ಕಾರ ನಡೆಸುವ ಆಡಳಿತ ವೈಖರಿಯಿಂದ ಕೆಲವು ಅನುಮಾನಗಳು ನಮ್ಮಲ್ಲಿ ಉದ್ಭವವಾಗಿವೆ. ಪ್ರಮುಖವಾದದ್ದೆಂದರೆ ಇಷ್ಟೊಂದು ಅಧಿಕಾರ ಇದ್ದರೂ ಕೂಡ ವೈಯಕ್ತಿಕವಾದ ಜವಾಬ್ದಾರಿಯನ್ನೂ ಹೊತ್ತುಕೊಳ್ಳುತ್ತಿದ್ದೀರಿ ಏಕೆ ? ತಮ್ಮ ಚಾಯ್ಸ್‌ಗೆ ಸರಿಯಾದಂಥ ಆಡಳಿತ ಯಂತ್ರ ಇರುವಾಗ ಇಡೀ ಇಲಾಖೆಯ ಜವಾಬ್ದಾರಿಯನ್ನು ನೀವೇ ಹೊತ್ತಿಕೊಳ್ಳುವುದರಿಂದ the entire hierarcy of the PWD and Irrigation Depts look to you for direction. It may be that you are fully immersed in this dept. Committment is OK. Attachment to the Dept is, OK. ಆದರೆ ಬೇರೆ ಬೇರೆ ಹಂತದಲ್ಲಿ ಇರತಕ್ಕಂಥ ಅಧಿಕಾರಿಗಳಿಗೆ ತಾವು ಕೆಲಸ ಮಾಡತಕ್ಕಂಥ ದೃಷ್ಟಿಯಿಂದ ಹುಮ್ಮಸ್ಸನ್ನು ತುಂಬಬೇಕಾಗುತ್ತದೆ. ಅಧಿಕಾರವನ್ನು ಕೊಡಬೇಕಾಗು ತ್ತದೆ. ಇಲ್ಲದಿದ್ದರೆ ಇಲಾಖೆಯಲ್ಲಿ ಎಲ್ಲೇ ಏನೇ ನಡೆಯಲಿ ಅದರ ಸಂಪೂರ್ಣವಾದ ಜವಾಬ್ದಾರಿಯನ್ನು ಹೊಣೆಗಾರಿಕೆಯನ್ನೂ ನೀವೇ ಹೊರ ಬೇಕಾಗುವಂಥ ಪರಿಸ್ಥಿತಿ ತಮಗೆ ಉದ್ಭವವಾಗುತ್ತದೆ ಎಂದು ಎಚ್ಚರಿಕೆ ಕೊಡುತ್ತಿದ್ದೇನೆ. ಅಲ್ಲಿ ಏನಾಗುತ್ತದೆ ಎಂದರೆ Initive on various Offices at Various hierarchy has been sapped. When there is Ministers interference everywhere ಜವಾಬ್ದಾರಿಯನ್ನು ಅವರು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗು ವುದಿಲ್ಲ. ಈಗಾಗಲೇ ಯಾವಹಂತದಲ್ಲೂ ತೆಗೆದು ಕೊಳ್ಳುತ್ತಿಲ್ಲ. ಈ ಹಸ್ತಕ್ಷೇಪವನ್ನು ವಿವರವಾಗಿ ವಿಸ್ತಾರ ಮಾಡಿದರೆ ಪರ್ಸನಲೈಸ್ ಆಗುತ್ತದೆ. ಆದ್ದರಿಂದ ಮಾಡುವುದಿಲ್ಲ ಈಗ ಮಾಡಿರುವ ಆಪಾದನೆ ಯನ್ನು ನೀವು ಅರ್ಥಮಾಡಿಕೊಂಡರೆ ವೈಕ್ತಿಕವಾಗಿ ಹಾಗೂ ಸರ್ಕಾರಕ್ಕೂ ಒಳ್ಳೆಯದಾಗುತ್ತದೆ. ದಕ್ಷತೆ ಹೆಚ್ಚಾಗುತ್ತದೆ. ನಾನು ಮುಗುಮ್ಮಾಗಿ ಹೇಳಿದ್ದೇನೆಂದು ಯಾರೂ ತಿಳಿದುಕೊಳ್ಳಬಾರದು. ಸಾಕಷ್ಟು ಚಿಂತಿಸಿ, ವಿಚಕ್ಷಣೆಯಿಂದ, ಏಕೆಂದರೆ ವಿಮರ್ಶಿಸಿ ಹೇಳುತ್ತಿದ್ದೇನೆ. I am framing this charge against the Hon Minister. Don't peronalise the Irrigation or P.W. Department. ಇದರಲ್ಲಿ ವ್ಯಾಪಕವಾದ ದಕ್ಷತೆಯನ್ನು ಹೆಚ್ಚಿಸತಕ್ಕಂಥ ಹುಮ್ಮಸ್ಸನ್ನು ತುಂಬಿಸತಕ್ಕಥ ಆಡಳಿತ ಇಂದು ಬೇಕಾಗಿದೆ. ಆದ್ದರಿಂದ ಇದನ್ನು ಆಲೋಚಿಸತಕ್ಕ ಅವಶ್ಯಕತೆ ಖಂಡಿತ ವಾಗಿಯೂ ಇದೆ. If you find inefficiency every where this is one of the components attributed to this. ಇನ್ನು ರೋಡ್ಸ್ ಅಂಡ್ ಬ್ರಿಡ್ಜಸ್ ವಿಷಯ ಹೇಳುವುದಾದರೆ ಇದರ ಬಗ್ಗೆ ನಾನೂ ಕೂಡ ಅರ್ಥಮಂತ್ರಿಯಾಗಿದ್ದೆ ನನಗೂಗೊತ್ತಿದೆ. ಈ ಸದನದಲ್ಲಿ ಕೆಲವು ಡಾಕ್ಯುಮೆಂಟ್ಸ್‌ಗಳನ್ನು ನಾನೂ ಕೊಡುತ್ತೇನೆ. ಎಲ್ಲಾ ಸದಸ್ಯರಿಗೂ ನಿಮಗೆ ೩೦ ಲಕ್ಷ ರೂ ಕೆಲಸ ನಿಮಗೆ ೫೦ ಲಕ್ಷ ರೂ ಕೆಲಸ ಮಾಡಿಸಿಕೊಡುತ್ತೇವೆಂದು ಎಂದು ಸಾರಿದ್ದೀ ಸಾರಿದ್ದು, ಆದರೆ ಬಡ್ಜೆಟ್‌ನಲ್ಲಿ ಹೇಳಿದ್ದನ್ನೆಲ್ಲ ಕೆಲಸ ಮಾಡುವಾಗ ಅಳಿಸಿ ಹಾಕಿದ್ದು ಮಾತ್ರ ಮಾಡಿದ್ದೀರಿ. This goes to the very root, very sanctity of the budgetary system hear. ಇದನ್ನು

ಪುನರಾಲೋಚನೆ ಮಾಡಬೇಕಾಗುತ್ತದೆ. ಏಕೆಂದರೆ ನೀವು ಭರವಸೆ ನೀಡಿದ್ದ ಮೊಬಲಗನ್ನು ಇರಿಗೇಷನ್ ಗೋ, ಪವರ್‌ಗೋ, ವಿನಿಯೋಗಿಸಿದ್ದಿದ್ದರೆ ಸದಸ್ಯರು ಸಮಾಧಾನ ಪಟ್ಟುಕೊಳ್ಳುತ್ತಿದ್ದರು. ಆದರೆ ಅದಕ್ಕೂ ಕೊಡಲಿಲ್ಲ. ಬೇರೇ ರೀತಿಯಲ್ಲಿ ಕೊಡುತ್ತಿದ್ದೀರಿ. ತಾವು ರಾಜಕೀಯ ಕಾರಣಕ್ಕಾಗಿ ಕೊಟ್ಟಿದ್ದೀರಿ. ಉದಾಹರಣೆಗೆ ಹೋದ ಸಲ ಕೊಟ್ಟಿದ್ದನ್ನೇ ಈ ಸಲ ಇಲ್ಲವೆನ್ನುತ್ತಿದ್ದೀರಿ. ಪ್ಲೀಸ್ ಕಮ್ ಔಟ್ ವಿಥ್ ದಟ್ ಸ್ಟೇಟ್‌ಮೆಂಟ್. ಈ ಕೆಟ್ಟ ಪರಂಪರೆ ನೀವು ಪ್ರಾರಂಭ ಮಾಡುತ್ತಿದ್ದೀರಿ. ಕಳೆದ ಬಜೆಟ್‌ನಿಂದಲೇ ಇದು ಶುರುವಾಯಿತು ಇದು ಕೆಲಸ ಮಾಡುವ ಸರ್ಕಾರದ ಲಕ್ಷಣ ಅಲ್ಲ ಯಾರಿಗೂ ಗೌರವ ಮರ್ಯಾದೆ ತರತಕ್ಕಂಥದಲ್ಲವೆಂದು ಹೇಳುತ್ತೇನೆ.

ಇನ್ನೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿದ್ದಿದೆ. ಆದರೂ ಕೂಡ ಈಗ ಮಾಡಿರುವುದರ ವಿವರಣೆಗೆ ನಾನು ಹೋಗುವುದಿಲ್ಲ. ಆದ್ದರಿಂದ ಅಧ್ಯಕ್ಷರೇ ಇವತ್ತು ನೀರಾವರಿಯಾಗಲೀ ರಸ್ತೆಯಾಗಲೀ, ಸೇತುವೆಯಾಗಲೀ ಯಾವುದೇ ದೃಷ್ಟಿಯಿಂದ ನೋಡಿದರೂ ಕೂಡ ಮತ್ತು ಆಗಿರ ತಕ್ಕಂಥ ಪರ್‌ಫಾರ್ಮೆನ್ಸ್ ಕೂಡ ಅತ್ಯಂತ ನಿಕೃಷ್ಟವಾಗಿದೆ. ರಾಜ್ಯದ ಅಭಿವೃದ್ಧಿಯನ್ನು ಹಿಮ್ಮುಖವಾಗಿ ತೆಗೆದುಕೊಂಡು. ಹೋಗುವ ಆ್ಯಂಟಿ ಕ್ಲೈಮೇಟ್ ಸೃಷ್ಟಿಯಾಗಿದೆ. ಇಷ್ಟು ಹೇಳಿ ಅವಕಾಶ ಮಾಡಿ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೩-೦೦ ಪಿ.ಎಂ.

† ಶ್ರೀ ಸಂಜಪ್ಪ.ಎಸ್ (ಕೃಷ್ಣರಾಜ ನಗರ).—ಮಾನ್ಯ ಅಧ್ಯಕ್ಷರೇ ಲೋಕೋಪಯೋಗಿ, ನೀರಾವರಿ ಮತ್ತು ಜಲಾನಯನ ಪ್ರದೇಶ ಹಾಗೂ ಅಚ್ಚುಕಟ್ಟು ಇಲಾಖೆಯ ೪೪,೪೫,೪೬, ಮತ್ತು ೩೪,೩೫ನೇ ಬೇಡಿಕೆಗಳನ್ನು ನಾನು ಬೆಂಬಲಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಮಾನ್ಯ ದೇವೇಗೌಡರು ಲೋಕೋಪಯೋಗಿ ಖಾತೆಯನ್ನು ವಹಿಸಿಕೊಂಡ ಮೇಲೆ, ಅದರಲ್ಲಿಯೂ ನೀರಾವರಿ ಬಾಬುಗಳಲ್ಲಿ ಅನೇಕ ಸುಧಾರಣೆಗಳನ್ನು ತಂದಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ವೀರಪ್ಪ ಮೊಯಿಲಿಯವರು ಮಾತನಾಡುತ್ತಾ ಹಿಂದೆ ಯೋಜನೆಗೆ ವೆಚ್ಚ ಮಾಡುವ ಬಾಬತ್ತು ಸಾಕಷ್ಟು ಹಣ ಖರ್ಚು ಆಗುತ್ತಾ ಇದ್ದರೂ ಯೋಜನೆಯ ಪ್ರಗತಿ ಗಣನೀಯ ಪ್ರಮಾಣದಲ್ಲಿ ಕುಂಠಿತವಾಗಿದೆ ಎನ್ನುವ ಮಾತನ್ನು ಹೇಳಿದರು. ಆಗ ಹಾರಂಗಿ ಎಡದಂಡೆ ಯೋಜನೆಯಲ್ಲಿ ೯೦ ಕಿ.ಮೀ. ನಷ್ಟು ನಾಲೆಗಾಗಿ ಹಣ ಪಾವತಿ ಮಾಡಿದ್ದರೂ, ನಾಲೆಯನ್ನು ಇನ್ನೂ ತೋಡುತ್ತಾ ಇದ್ದಾರೆ. ನಮ್ಮ ಸರಕಾರ ಬಂದಮೇಲೆಯೂ, ಅದೇ ನಾಲೆಯನ್ನು ತೋಡುತ್ತಾ ಇದ್ದಾರೆ. ಈ ನಾಲೆಯು ೯೦ ಕಿ.ಮೀ.ನಷ್ಟು ಬಂದರೆ ನನ್ನ ಕ್ಷೇತ್ರವಾದ ಕೃಷ್ಣರಾಜ ನಗರಕ್ಕೆ ನೀರು ಬರುತ್ತದೆ. ನಾನು ಶಾಸಕನಾದ ಮೇಲೆ, ಇದನ್ನು ಯಾವಾಗ ಮಾಡಿ ಕೊಡುತ್ತೀರಿ ಎಂದು ಕೇಳಿದಾಗ ೮೪ರ ಮಾರ್ಚ್ ತಿಂಗಳು ಎಂದು ಹೇಳಿದರು, ನಂತರ ಡಿಸೆಂಬರ್ ಎಂದು ಹೇಳಿದರು. ಈ ವಿಷಯವನ್ನು ಕರ್ನಾಟಕ ಅಭಿವೃದ್ಧಿ ಸಮಿತಿಯಲ್ಲಿ ಪ್ರಸ್ತಾಪ ಮಾಡಿದಾಗ ಇನ್ನೂ ಆರು ತಿಂಗಳು ಬೇಕು ಎಂದು ಹೇಳುತ್ತಾರೆ. ಈ ರೀತಿಯಲ್ಲಿ ಯೋಜನೆಯಲ್ಲಿ ಯಾವುದು ಪ್ರಗತಿಯಾಗಬೇಕಾಗಿತ್ತೋ ಅದು ತಾಂತ್ರಿಕ ದೋಷಗಳಿಂದಾಗಿ ಕುಂಠಿತವಾಗಿದೆ. ನಾವು ಖರ್ಚು ಮಾಡುತ್ತಿದ್ದೇವೆ ಎಂದು ಪುಸ್ತಕದಲ್ಲಿ ತೋರಿಸುತ್ತಾರೆ. ಆದರೆ ಅದರಿಂದ ಜನಗಳಿಗೆ ಉಪಯೋಗ ಆಗಲಿಲ್ಲವೆಂದು ನಾನು ಹೇಳಬಯಸುತ್ತೇನೆ. ನಾನು ಈ ಸಂದರ್ಭದಲ್ಲಿ ಮಂತ್ರಿವರ್ಯರನ್ನು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಲೋಪದೋಷಯುಕ್ತವಾದಂಥ ಕಾರ್ಯವನ್ನು ಸರಿಯಾದ ರೀತಿಯಲ್ಲಿ ಮಾಡಿಸಬೇಕು. ಸಮಾನಾಂತರವಾಗಿ ಎರಡೂ ಕಡೆ ತೋಡಿರುವುದರ ಮೂಲಕ ಮಳೆ ಬಂದಾಗ ತೋಡು ಬಿದ್ದು ಹೋಗುತ್ತದೆ. ಇದನ್ನು ಅಬ್ಯಾಂಜನ್, ಇನ್ನೂ ಏನಾದರೂ ಬೇರೆ ರೀತಿಯಲ್ಲಿ ಯೋಜನೆಯನ್ನು ರೂಪಿಸಿ, ನನ್ನ ಕ್ಷೇತ್ರವಾದ ಕೃಷ್ಣರಾಜನಗರ ತಾಲ್ಲೂಕಿಗೆ, ಹಾರಂಗಿ ಎಡದಂಡೆ ನಾಲೆಯ ನೀರನ್ನು, ನಮ್ಮ ಜನರು ಬಹಳ ದಿವಸಗಳಿಂದ ಬಯಸುತ್ತಾ ಇರುವಂತಹ ನೀರನ್ನು ದೊರಕಿಸಿಕೊಡಬೇಕೆಂದು ಮಾನ್ಯ ಮಂತ್ರಿವರ್ಯರಿಗೆ ತಮ್ಮ ಮೂಲಕ ಪ್ರಾರ್ಥಿಸುತ್ತೇನೆ, ಮತ್ತು ನಮ್ಮ ಜನರ ಸಂಕಷ್ಟಗಳನ್ನು ಅವರಿಗೆ ಈ ಮೂಲಕ ತಿಳಿಸಲಿಚ್ಛಿಸುತ್ತೇನೆ. ನಾನು ಇನ್ನು ಹೆಚ್ಚು ವಿಷಯಗಳನ್ನು ಪ್ರಸ್ತಾಪ ಮಾತುವುದಕ್ಕೆ ಇಚ್ಛೆಪಡುವುದಿಲ್ಲ. ಈ ಸಂದರ್ಭದಲ್ಲಿ ನೀರಾವರಿ ಇಲಾಖೆಯ ಬಗ್ಗೆ ಹೇಳುವುದಾದರೆ, ತಾವು ಹೊಸ ಯೋಜನೆಗಳನ್ನು, ಅಣೆಕಟ್ಟುಗಳನ್ನು ಕಟ್ಟಲಿಕ್ಕೆ ಯೋಜನೆಗಳನ್ನು ಹಾಕಿಕೊಂಡಿದ್ದೀರಿ ಇದರಿಂದಾಗಿ ಬಹುಶಃ ಹಿಂದಿನ ನೀರಾವರಿ ಅಚ್ಚುಕಟ್ಟು ಕಾಮಗಾರಿಗಳಿಗೆ ಹೆಚ್ಚಿನ ಆದ್ಯತೆಯನ್ನು, ಮತ್ತು ಗಮನವನ್ನು ಕೊಡುತ್ತಾ ಇರಲಿಲ್ಲ ಇಲ್ಲ ಎಂದು ಹೇಳಬಯಸುತ್ತೇನೆ. ಇನ್ನು ಹಳೆಯ ನಾಲೆಗಳು ನೂರು, ಇನ್ನೂರು ವರ್ಷಗಳಿಂದ ಹಿಂದೆ ಕಟ್ಟಲ್ಪಟ್ಟಿವೆ. ಆ ನಾಲೆಗಳ ದುರಸ್ತಿ ವಿಷಯ ಹೇಳತೀರದು. ಅದಕ್ಕಾಗಿ ಈ ನಾಲೆಗಳ ನವೀಕರಣ

ಕ್ಕಾಗಿ ಹೆಚ್ಚಿನ ಹಣವನ್ನು ತೊಡಗಿಸಿ ನೀರಾವರಿ ಅಣೆಕಟ್ಟುಗಳನ್ನು ಕಟ್ಟುವುದರ ಜೊತೆಗೆ, ತಮಿಳು ನಾಡಿನ ತಂಜಾವೂರು ಜಿಲ್ಲಾದಲ್ಲಿ ಆ ನಾಲೆಗಳನ್ನು ನವೀಕರಣ ಮಾಡಿ ನೀರನ್ನು ಹೆಚ್ಚಿಗೆ ರೀತಿಯಲ್ಲಿ ಅಚ್ಚುಕಟ್ಟುದಾರರಿಗೆ ಯಾವ ರೀತಿ ಒದಗಿಸಿ ಕೊಡುತ್ತಿದ್ದಾರೆ, ಅದೇ ರೀತಿಯಲ್ಲಿ ಇಲ್ಲಿಯೂ ಏನಾದರೂ ಒಂದು ಯೋಜನೆ ಮಾಡಿ, ವಿಶ್ವ ಬ್ಯಾಂಕ್‌ನಿಂದ ಹಣ ತಂದು, ಹಳೆಯ ನಾಲೆಗಳನ್ನು ನವೀಕರಿಸಿ, ಅಚ್ಚುಕಟ್ಟುದಾರರಿಗೆ ಆ ನೀರನ್ನು ಒದಗಿಸಿ, ಅವರ ನೀರಿನ ಬವಣೆಯನ್ನು ಪರಿಹರಿಸಬೇಕೆಂದು ತಮ್ಮ ಮೂಲಕ ಸರಕಾರದ ಗಮನಕ್ಕೆ ತರಬಯಸುತ್ತೇನೆ, ಮತ್ತು ಇದರ ಬಗ್ಗೆ ಹೆಚ್ಚಿನ ಗಮನ ವನ್ನು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುವುದರ ಜೊತೆಗೆ ನನ್ನ ಕ್ಷೇತ್ರದ ಕೆಲವು ಸಂಕಷ್ಟಗಳನ್ನು ಈ ಸಂದರ್ಭದಲಿ ತಿಳಿಸಿದರೆ ತಪ್ಪಾಗಲಾರದು ಎಂದು ನನ್ನ ಭಾವನೆ, ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆ ಸ್ಥಾಪನೆಯಾಗಿ ೧೯೮೨ ರಿಂದ ಕಬ್ಬನ್ನು ಅರೆಯಲಿಕ್ಕೆ ಪ್ರಾರಂಭ ಮಾಡಿದ ಮೇಲೆ, ಕೃಷ್ಣರಾಜಪೇಟೆ, ಹೆಗ್ಗಡದೇವನ ಕೋಟೆ, ಹೊಳೆನರಸೀಪುರ, ಈ ರಸ್ತೆಗಳಲ್ಲಿ ೧೬–೧೭ ಟನ್ ಕಬ್ಬನ್ನು ಲಾರಿಗಳ ಮೂಲಕ ತಂದು ಸಾಗಿಸುತ್ತಿರುವುದರಿಂದ ಇದ್ದಂತಹ ರಸ್ತೆಗಳೂ ಶಿಥಿಲವಾಗಿ ಹೋಗಿವೆ. ಸುಮಾರು ೨೦ ಸೇತುವೆಗಳು ಮುರಿದು ಹೋಗಿವೆ. ಇದನ್ನು ನಾನು ಈಗಾಗಲೇ ಮಾನ್ಯ ಮಂತ್ರಿ ಗಳವರ ಗಮನಕ್ಕೆ ತಂದಿದ್ದೇನೆ. ಸುಮಾರು ೨೦ ಸೇತುವೆಗಳ ದುರಸ್ತಿಗೆ ಬೇಕಾದಂತಹ ಒಂದು ಹಣದ ಸೌಲಭ್ಯವನ್ನು ನಮಗೆ ಒದಗಿಸಿ ಕೊಡಬೇಕೆಂದು ಮಂತ್ರಿವರ್ಯರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸಿ. ಈ ಬೇಡಿಕೆಗಳಿಗೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸು ತ್ತೇನೆ.

† ಶ್ರೀ ಬಿ.ಎಂ. ಇದ್ದಿನಬ್ಬ (ಉಳ್ಳಾಲ).—ಸನ್ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಲೋಕೋಪ ಯೋಗಿ ಕಾಮಗಾರಿ ಇಲಾಖೆಯ ಸಚಿವರು ತಂದಿರತಕ್ಕಂತಹ ಈ ಬೇಡಿಕೆಯನ್ನು ನಾನು ಅನೇಕ ಕಾರಣಗಳಿಗಾಗಿ ವಿರೋಧಿಸುತ್ತಾ ಕೆಲವು ಮಾತುಗಳನ್ನು ಆಡಲು ಇಚ್ಛೆಪಡುತ್ತೇನೆ. ಈ ಇಲಾಖೆಯ ಆಡಳಿತದ ವಿಚಾರದಲ್ಲಿ, ಅದೇ ರೀತಿಯಲ್ಲಿ ರಸ್ತೆ, ಕಟ್ಟಡ ಸೇತುವೆ, ನೀರಾವರಿ, ಈ ಎಲ್ಲಾ ವಿಚಾರ ಗಳಲ್ಲಿ ನಾನು ರಾಜ್ಯಕ್ಕೆ ಸಂಬಂಧಪಟ್ಟಂತೆ ವಿಚಾರದಲ್ಲಿ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ಏಕೆಂದರೆ, ನಮ್ಮ ಮಾನ್ಯ ಸದಸ್ಯರಾದಂತಹ, ವೀರಪ್ಪ ಮೊಯಿಲಿಯವರು, ಬಸವಲಿಂಗಪ್ಪನವರು, ಬಹಳ ಸುದೀರ್ಘವಾಗಿ ಮಾತನಾಡಿದ್ದಾರೆ. ಅವರೂ ಕೂಡಾ ಒಂದು ವಿಷಯ ವನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಒಂದು ದೇಶ ಅಥವಾ ಒಂದು ರಾಜ್ಯ ಬಹಳ ಉನ್ನತ ಮಟ್ಟದಲ್ಲಿ, ಉತ್ತುಂಗ ಶಿಖರಕ್ಕೆ ಹೋಗಬೇಕಾದರೆ, ಮತ್ತು ಈ ದೇಶದ ಜನತೆಯು ಜೀವನವನ್ನು ಮಾಡಬೇಕಾದರೆ, ಹಸಿರು ಕ್ರಾಂತಿ ಅಲ್ಲಿ ಹೆಚ್ಚಾಗಿ, ಬಹಳವಾಗಿ ಆಗಬೇಕೆನ್ನುವುದು, ಬಹಳ ಜನ ತಜ್ಞರು ಹೇಳಿರತಕ್ಕಂತಹ ಮಾತು. ಆ ರೀತಿಯಲ್ಲಿ ಹಸಿರು ಕ್ರಾಂತಿಯಾಗಬೇಕಾದರೆ ನೀರಾವರಿಗೆ ಮೊದಲನೇ ಪ್ರಾಶಸ್ತ್ಯವನ್ನು ಕೊಟ್ಟರೆ ಮಾತ್ರ ಸಾಧ್ಯ. ಇವೊತ್ತು ಪಂಜಾಬ್ ಇಷ್ಟೆಲ್ಲಾ ಮುಂದೆ ಬರಲಿಕ್ಕೆ ಕಾರಣ ಅಲ್ಲಿಯ ಬೇಸಾಯ ಮಾಡತಕ್ಕಂತಹ ಜನರಿಗೆ ಎಲ್ಲಾ ರೀತಿಯಲ್ಲಿ ಸಹಾಯ ಒದಗಿ ಬರತಕ್ಕಂತಹ ಒಂದು ವಾತಾವರಣ ಅಲ್ಲಿ ಇದ್ದುದರಿಂದ ಇವೊತ್ತು ಅವರು ಕೃಷಿಯಲ್ಲಿ ಹೆಚ್ಚು ಮುಂದೆ ಬಂದು, ಗೋಧಿ ಬೆಳೆಯುವುದರಲ್ಲಿ ಅದ್ಭುತ ಸಾಧನೆ ಮಾಡಿ, ಬರೇ ನಮ್ಮ ದೇಶಕ್ಕಷ್ಟೇ ಅಲ್ಲ, ಹೊರದೇಶಗಳಿಗೂ ಕಳುಹಿಸುವಂತಹ ಒಂದು ಶಕ್ತಿ ಬಂದಿದೆ. ಅದೇ ರೀತಿ ಎಲ್ಲಾ ಕಡೆಗಳಲ್ಲಿಯೂ ಬರಬೇಕಾದರೆ ನಾವು ನೀರಾವರಿಗೆ ಪ್ರಥಮ ಪ್ರಾಶಸ್ತ್ಯ ಕೊಡಬೇಕು. ಆದರೆ ನಾವು ಇವೊತ್ತು ನಮ್ಮ ನೀರಾವರಿಗೆ ಇಟ್ಟಿರುವಂತಹ ಹಣ ನಿಜವಾಗಿಯೂ ಬಹಳ ಕಡಿಮೆಯಾಗಿದೆ. ಇವೊತ್ತು ಅಕ್ಕಿಯಾಗಲೀ, ರಾಗಿಯಾಗಲೀ, ಜೋಳವಾಗಲೀ, ಗೋಧಿಯಾಗಲೀ, ಅವನ್ನು ಬೆಳೆದು, ಅದರ ಸಮೃದ್ಧತೆಯಿಂದ ರೈತರು ಉದ್ಧಾರವಾಗಿ, ಈ ದೇಶಕ್ಕೆ ಮತ್ತು ಊರಿಗೆ ಬೇಕಾದಂತಹ ಏರ್ಪಾಡನ್ನು ಮಾಡತಕ್ಕಂತಹ ಒಂದು ಕಾರ್ಯಕ್ರಮ ಇಲ್ಲದೇ ಹೋದರೆ ಈ ಒಂದು ಬರಗಾಲ ನಮ್ಮನ್ನು ಬಿಡುವುದಿಲ್ಲ. ಇವೊತ್ತು ಬಿಜಾಪುರ, ಗುಲ್ಬರ್ಗ, ಕೋಲಾರ, ಬೀದರ್, ಚಿತ್ರದುರ್ಗ, ಎಲ್ಲಾ ಕಡೆಗಳಲ್ಲಿಯೂ ಬರಗಾಲ ಬಂದಿದೆ. ಇಂತಹ ಸಮಯದಲ್ಲಿ ನಮ್ಮ ನೀರಾವರಿ ಯೋಜನೆಗಳು ಹೆಚ್ಚು ಆಗತಕ್ಕಂತಹ ಕೆಲಸ ಮುಂದುವರಿಯಬೇಕು. ಹಾಗೆ ಒಂದುವೇಳೆ ಮುಂದುವರಿಯದಿದ್ದರೆ, ನಮಗೆ ಬರಗಾಲದಿಂದ, ಅದರ ಅಪಾಯದಿಂದ ಪಾರಾಗಲಿಕ್ಕೆ ಸಾಧ್ಯವಾಗುವುದಿಲ್ಲ ಎಂಬ ಮಾತನ್ನು ಸಚಿವರೂ ಕೂಡಾ ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇದೇ ಸಂದರ್ಭದಲ್ಲಿ ನೀರಾವರಿ ಯೋಜನೆಗಳ ಬಗ್ಗೆ ಹೇಳುವುದಾದರೆ ತೆಲುಗು-ಗಂಗಾ ಯೋಜನೆಯ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಇಲ್ಲಿ ಚರ್ಚೆ ಮಾಡಿದ್ದಾರೆ. ಅದು ಕೂಡ ಒಂದು ಪ್ರಾಮುಖ್ಯವಾದ ವಿಷಯ. ಇದರ ಬಗ್ಗೆ ಕಳೆದ ಎರಡು ದಿವಸಗಳ ಹಿಂದೆ ಕಾಮಗಾರಿ ಇಲಾಖೆಯ ಮಂತ್ರಿಗಳಾದಂಥ ಶ್ರೀಮಾನ್ ದೇವೇಗೌಡರು ಬಹಳ ಒಳ್ಳೆಯ ಉತ್ತರವನ್ನು ಕೊಟ್ಟಿದ್ದಾರೆ. ಅವರು ಕೊಟ್ಟಂತಹ ಉತ್ತರದಿಂದ ಎಲ್ಲರಿಗೂ ಸಂತೋಷವಾಗಿದೆ. ಅವರು ಕಟ್ಟಕಡೆಯ ಮಾತನ್ನು ಹೇಳಿದ್ದಾರೆ. ಅವರು ಹೇಳಿರುವುದು ನಿಜವಾಗಿಯೂ ಕೂಡ ಅದೂ ನೀರಾವರಿ ಯೋಜನೆ ಕೆಲಸ ಬಹಳ ಕಷ್ಟದ ಕೆಲಸ. ಅದರ ಬೀಗದ ಕೈ ನಮ್ಮ ಹತ್ತಿರ ಇದೆ. ಎನ್ನುವ ರೀತಿಯಲ್ಲಿ ಮಾನ್ಯ ಮಂತ್ರಿಗಳು ಮಾತನಾಡಿದ್ದಾರೆ. ಬಹಳ ಸಂತೋಷ. ಆದರೆ ಆ ಬೀಗದ ಕೈ ಕಾಣದ ರೀತಿಯಲ್ಲಿ ಮಾಡಬಾರದೆಂದು ನನ್ನ ಅನಿಸಿಕೆ. ಇನ್ನು ನಾನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಎರಡು ವಿಷಯಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈ ಕಾಮಗಾರಿ ಇಲಾಖೆಯೇ ಬಹಳ ಕಷ್ಟಕರವಾದ ಇಲಾಖೆ. ಈ ಇಲಾಖೆಯ ಬಗ್ಗೆ ರಾಜಕೀಯ ಚತುರರಾದ, ರಾಜಕೀಯ ಧುರೀಣರಾದ ಶ್ರೀಮಾನ್ ರಾಜಗೋಪಾಲ್‌ಚಾರಿಯವರು ಮದ್ರಾಸ್ಸಿನಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ ಒಂದು ಮಾತನ್ನು ಹೇಳಿದ್ದರು, ಅದೇನೆಂದರೆ ಈ ಕಾಮಗಾರಿ ಇಲಾಖೆ ಎಲ್ಲಾ ಇಲಾಖೆಗಳಿಗಿಂತ ಮುಖ್ಯವಾದುದು ಮತ್ತು ಈ ಇಲಾಖೆಯೇ ನನ್ನ ಶತ್ರು ಎಂದು. ಈ ಇಲಾಖೆಯ ಎಲ್ಲಾ ವಿಚಾರಗಳನ್ನು ತಿಳಿದುಕೊಂಡ ಅವರು ಮದ್ರಾಸ್‌ನ ಮುಖ್ಯಮಂತ್ರಿಯಾಗಿದ್ದಾಗ ಈ ಮಾತನ್ನು ಹೇಳಿದ್ದರು. ಈ ಇಲಾಖೆಯಲ್ಲಿಯೇ ಲಂಚ ಈ ಇಲಾಖೆಯಲ್ಲಿಯೇ ಎಲ್ಲಾ ರೀತಿಯ ಭ್ರಷ್ಟಾಚಾರ. ಎಲ್ಲಾ ರೀತಿಯ ದುರಾಡಳಿತ ತುಂಬಿದೆ ಎಂದು ಅವರು ಹೇಳಿದ್ದರು. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಕೂಡ ಈ ಲೋಕೋಪಯೋಗಿ ಇಲಾಖೆಯಲ್ಲಿ ಪ್ರಸಿದ್ಧ ಹಾಗೂ ಮೇಧಾವಿಗಳಾದ ಶ್ರೀ ಚನ್ನಬಸಪ್ಪನವರು ಮಂತ್ರಿಗಳಾಗಿದ್ದರು. ಅದೇ ರೀತಿಯಲ್ಲಿ ಮಾನ್ಯ ದೇವೇಗೌಡರೂ ಸಹ ಒಳ್ಳೆಯ ಮೇಧಾವಿಗಳು, ಒಳ್ಳೆಯ ಶಕ್ತಿಯುತರು ಅವರು ಈ ಇಲಾಖೆಯನ್ನು ವಹಿಸಿಕೊಂಡಿದ್ದಾರೆ. ಆದರೆ ಇವತ್ತು ಈ ಇಲಾಖೆಗೆ ಸಿಕ್ಕಿರತಕ್ಕಂಥ ಹಣ ಏನೇನೂ ಸಾಲದು. ರಸ್ತೆ ರಿಪೇರಿ ಕೆಲಸ ಮಾಡಬೇಕಾಗುತ್ತದೆ. ಸೇತುವೆಗಳ ನಿರ್ಮಾಣ ಮಾಡಬೇಕಾಗುತ್ತದೆ. ಈ ಎಲ್ಲಾ ಕೆಲಸಗಳಿಗೆ ಕೊಟ್ಟಿರತಕ್ಕ ಹಣ ಏನೇನೂ ಸಾಲದು. ಇವರಿಗೆ ಒದಗಿಸಿಕೊಟ್ಟಿರುವ ಹಣವನ್ನು ನೋಡಿದರೆ ಭೀಮನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯನ್ನು ಕೊಟ್ಟ ಹಾಗೆ ಇದೆ. ಇದು ದೊಡ್ಡ ರಾಜ್ಯ. ಈ ರಾಜ್ಯದಲ್ಲಿ ರಸ್ತೆ ರಿಪೇರಿ ಕೆಲಸ ಮಾಡಬೇಕು. ಅನೇಕ ಸೇತುವೆಗಳನ್ನು ಕಟ್ಟಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಹಾಳು ಬಿದ್ದು ಹೋಗಿರುವ ರಸ್ತೆ ರಿಪೇರಿ ಕೆಲಸ ನಡೆಯಬೇಕು. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಎಷ್ಟು ವಾಹನಗಳು ಇವೆ, ಎಷ್ಟು ಲಾರಿಗಳು ಇವೆ, ಎಷ್ಟು ಆಟೋರಿಕ್ಷಾಗಳು ಇವೆ, ಎಷ್ಟು ವ್ಯಾನ್‌ಗಳು ಇವೆ. ಈ ವಾಹನಗಳ ಸಂಚಾರ ಒಂದು ರೀತಿಯಲ್ಲಿ ಗಿಜಗಿಜವೆಂದು ಸಂಚಾರ ಮಾಡುತ್ತಿರುವ ಸಂದರ್ಭದಲ್ಲಿ ಬೇಕಾದಷ್ಟು ರಸ್ತೆಗಳ ಕೆಲಸ ನಡೆಯಬೇಕಾಗಿದೆ. ಈ ಎಲ್ಲಾ ಕೆಲಸಗಳನ್ನು ಮಾಡಬೇಕಾದರೆ ಮುಖ್ಯವಾಗಿ ಹಣ ಬೇಕು. ಆದರೆ ಆ ಹಣವನ್ನೇ ಒದಗಿಸಿಲ್ಲ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವ ಸಂದರ್ಭದಲ್ಲಿ ರಸ್ತೆಗಳ ಬಗ್ಗೆ ಸೇತುವೆಗಳ ಬಗ್ಗೆ ಆಲೋಚನೆ ಮಾಡುವುದೇ ಬೇಡವೆನ್ನುವ ರೀತಿಯಲ್ಲಿ ಮಾತನಾಡಿದ್ದಾರೆ. ಇವತ್ತು ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿರುವ ರಸ್ತೆಗಳನ್ನು ನೋಡಿ ಜನರು ಬಹಳ ಬೇಸರ ಮಾಡಿಕೊಂಡಿದ್ದಾರೆ. ಇನ್ನು ನಮ್ಮ ಜಿಲ್ಲೆಯಲ್ಲಿ ದೊಡ್ಡ ನೀರಾವರಿಗಳು ಬಹಳ ಕಡಿಮೆ. ವರಾಹಿ ಯೋಜನೆ ಬಹಳ ಪ್ರಾಮುಖ್ಯವಾದುದು. ಅದನ್ನು ಬಿಟ್ಟರೆ ಬೇರೆ ಯಾವುದೂ ನಮ್ಮಲ್ಲಿ ಇಲ್ಲ. ನಮ್ಮಲ್ಲಿ ಸಣ್ಣ ನೀರಾವರಿಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು. ಕಾರಣ ನಮ್ಮಲ್ಲಿ ಯಾವ ದೊಡ್ಡ ನೀರಾವರಿ ಯೋಜನೆಗಳೂ ಇಲ್ಲ. ಮತ್ತೆ ನಮ್ಮಲ್ಲಿ ವೆಂಟೆಡ್ ಡ್ಯಾಮ್‌ಗಳನ್ನು ಕಟ್ಟಿಸಿಕೊಡಲು ಮಾನ್ಯ ಮಂತ್ರಿಗಳಾದ ದೇವೇಗೌಡರು ಮನಸ್ಸು ಮಾಡಬೇಕು. ಅಂತಹ ಒಂದು ಶಾಶ್ವತವಾದಂಥ ಕೆಲಸವನ್ನು ಮಾಡಿದರೆ ಮಾನ್ಯ ಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಯ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುತ್ತಾರೆ. ಅದರ ಒಂದು ಕೀರ್ತಿ ಕೂಡ ಮಾನ್ಯ ಮಂತ್ರಿಗಳಿಗೆ ಸಲ್ಲುತ್ತದೆ. ಈ ಕೆಲಸವನ್ನು ಮಾನ್ಯ ಮಂತ್ರಿಗಳು ಮಾಡಿ ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ಇನ್ನು ನನ್ನ ಕ್ಷೇತ್ರವಾದ ಉಲ್ಲಾಳ್‌ನಲ್ಲಿ ಕೆಲವು ಕಡೆ ಡ್ಯಾಮ್‌ಗಳು ಆಗಬೇಕು. ಕೆಲವು ಡ್ಯಾಮ್‌ಗಳಿಗೆ ಸರ್ಕಾರದ ಮಂಜೂರಾತಿ ಸಿಕ್ಕುವ ಹಂತದಲ್ಲಿ ಇದೆ. ಅದೇ ರೀತಿಯಲ್ಲಿ ನನ್ನ ಕ್ಷೇತ್ರದಲ್ಲಿ ಕೆಲವು ರಸ್ತೆಗಳು ಆಗಬೇಕು. ನನ್ನ ಕ್ಷೇತ್ರದಲ್ಲಿ ಪ್ರತಿಯೊಂದು ರಸ್ತೆ ಕೂಡ ಕೆಟ್ಟು ದೊಡ್ಡ ದೊಡ್ಡ ಗುಂಡಿಗಳು ಬಿದ್ದಿವೆ. ಮತ್ತೆ ನನ್ನ ಕ್ಷೇತ್ರದಲ್ಲಿ ಒಂದು ದರ್ಗಾ ಇದೆ. ಅಲ್ಲಿ ಸುಮಾರು ೪೦ ಸಾವಿರ ಜನ ಸೇರುತ್ತಾರೆ. ಸಾವಿರಾರು ಜನ ಪ್ರಯಾಣಿಕರು ಬರುತ್ತಾರೆ. ಅಲ್ಲಿ ಪ್ರತಿ ೫ ವರ್ಷಗಳಿಗೆ ಒಂದು ಸಾರಿ ಉರುಸ್ ನಡೆಯುತ್ತದೆ. ಅಲ್ಲಿಗೆ ಒಂದು ಸೇತುವೆ ನಿರ್ಮಾಣ ಕಾರ್ಯ ಮಂಜೂರಾಗಬೇಕಿದೆ. ಈ ಬಗ್ಗೆ ಉದಯವಾಣಿ

ಪತ್ರಿಕೆಯಲ್ಲಿ ಮತ್ತು ಮುಂಗಾರು ಪತ್ರಿಕೆಗಳಲ್ಲಿ ಅನೇಕ ಲೇಖನಗಳು ಬಂದಿವೆ. ಈ ವಿಚಾರವನ್ನು ಅಲ್ಲಿನ ಅಸಿಸ್ಟೆಂಟ್ ಇಂಜಿನೀಯರ್‌ರವರನ್ನು ಕೇಳಿದರೆ ಎಕ್ಸಿಕ್ಯೂಟೀವ್ ಇಂಜಿನೀಯರ್‌ರವರನ್ನು ಕೇಳಿ ಎಂದು ಹೇಳುತ್ತಾರೆ. ಎಕ್ಸಿಕ್ಯೂಟೀವ್ ಇಂಜಿನೀಯರ್‌ರವರನ್ನು ಕೇಳಿದರೆ ಅಲ್ಲಿನ ಜೂನಿಯರ್ ಇಂಜಿನೀಯರ್‌ರವರನ್ನು ಕೇಳಿ ಎಂದು ಹೇಳುತ್ತಾರೆ. ಅವರನ್ನು ಕೇಳಿದರೆ ನಮಗೆ ಪ್ರಾವಿಜನ್ ಇಲ್ಲ ಎಂದು ಹೇಳುತ್ತಾರೆ. ಮತ್ತೆ ಅಲ್ಲಿಗೆ ಸರಿಯಾದ ರಸ್ತೆ ಕೂಡ ಇಲ್ಲ. ಆ ರಸ್ತೆ ಸಂಪೂರ್ಣ ಮುಚ್ಚಿ ಹೋಗಿದೆ. ಅನೇಕ ಗುಂಡಿಗಳು ಬಿದ್ದಿವೆ. ಅಲ್ಲಿ ಬಸ್ಸುಗಳು ಸಂಚಾರ ಮಾಡುವಾಗ ಕೆಸರು ನೀರು ಚಿಮ್ಮುತ್ತದೆ. ಬಟ್ಟೆಗಳೆಲ್ಲಾ ಗಲೀಜು ಆಗುತ್ತದೆ. ಆಗ ಜನ ಬೇಸರ ಮಾಡಿಕೊಳ್ಳುತ್ತಾರೆ. ಆದ್ದರಿಂದ ದಯಮಾಡಿ ಮಾನ್ಯ ಮಂತ್ರಿಗಳು ಆ ರಸ್ತೆಯನ್ನು ರಿಪೇರಿ ಮಾಡಿಸಬೇಕು. ಇನ್ನು ಸಣ್ಣ ನೀರಾವರಿ ಮಂತ್ರಿಗಳಿಗೆ ಸಂಬಂಧಪಟ್ಟ ಹಾಗೆ ಪ್ರಸ್ತಾಪ ಮಾಡುವುದಾದರೆ ಮಾನ್ಯ ಸಣ್ಣ ನೀರಾವರಿ ಮಂತ್ರಿಗಳು, ಇದ್ದಾರೋ ಇಲ್ಲವೋ ಗೊತ್ತಿಲ್ಲ. ಅದನ್ನೂ ಕೂಡ ಮಾನ್ಯ ದೇವೇಗೌಡರು ಗಮನಿಸಬೇಕು. ನಮ್ಮ ಕರಾವಳಿ ಪ್ರದೇಶಗಳಲ್ಲಿ ಲೆಕ್ಕಕ್ಕೆ ಮಾತ್ರ ಮಳೆಬರುತ್ತದೆ. ಬಂದ ನೀರು ನಮ್ಮಲ್ಲಿ ಉಳಿಯುವುದಿಲ್ಲ. ಎಲ್ಲಾ ನೀರು ಸಮುದ್ರಕ್ಕೆ ಹೋಗಿ ಸೇರಿಕೊಳ್ಳುತ್ತದೆ. ಆದ್ದರಿಂದ ಈ ಕರಾವಳಿ ಪ್ರದೇಶದಲ್ಲಿ ಜನರಿಗೆ ಬೇಸಾಯ ಮಾಡಲು ಬಹಳ ಕಷ್ಟವಾಗಿದೆ. ಇದರಿಂದ ಕರಾವಳಿ ಪ್ರದೇಶ ನಾಶವಾಗುವಂತಹ ಪರಿಸ್ಥಿತಿಗೆ ಬಂದಿದೆ. ಆದ್ದರಿಂದ ಕರಾವಳಿ ಪ್ರದೇಶದಲ್ಲಿ ಉಪಯೋಗವಾಗುವಂತಹ ಏನಾದರೂ ಒಂದು ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಮಾಡಬೇಕು. ಇವತ್ತು ನದಿಗಳಿಂದ ನೀರನ್ನು ತೆಗೆದುಕೊಂಡು ಬೇಸಾಯ ಮಾಡುವುದನ್ನು ನಿಲ್ಲಿಸುವ ಪರಿಸ್ಥಿತಿ ಉಂಟು. ಕರಾವಳಿ ಪ್ರದೇಶಗಳಲ್ಲಿ ಜನ ಬೇಸಾಯ ಮಾಡಲು ಬಹಳ ತೊಂದರೆಯಾಗಿದೆ. ಆ ಒಂದು ವ್ಯವಸ್ಥೆಯನ್ನು ಸಹ ಮಾನ್ಯ ಮಂತ್ರಿಗಳು ಮಾಡಬೇಕು. ಇನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾನ್ಯ ಲೋಕೋಪಯೋಗಿ ಸಚಿವರು ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಲು ಪ್ರಯತ್ನ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ತಮ್ಮ ಇಲಾಖೆಯಲ್ಲಿ ಲಂಚವನ್ನು ತೆಗೆದುಹಾಕಲು ಪ್ರಯತ್ನ ಮಾಡುತ್ತಿದ್ದಾರೆ, ಅದು ಎಷ್ಟರಮಟ್ಟಿಗೆ ಸಫಲವಾಗುತ್ತದೋ ನೋಡಬೇಕು. ಇನ್ನು ನಮ್ಮ ಕರಾವಳಿ ಪ್ರದೇಶದಲ್ಲಿ ಇರತಕ್ಕಂಥ ರಸ್ತೆಗಳು ಏನಿವೆ ಅವುಗಳನ್ನು ರಿಪೇರಿ ಮಾಡಿಸಬೇಕು. ಮತ್ತು ಮಾರ್ಗದ ತಲೆಯಲ್ಲಿ ಒಂದು ಸೇತುವೆ ಮಂಜೂರಾಗಿ ಸಂಪೂರ್ಣವಾಗಿ ಆ ಕೆಲಸ ಮುಗಿದಿಲ್ಲ. ಅಲ್ಲಿ ಇನ್ನೊಂದು ಮುಖ್ಯವಾದ ಕೋಟೆಕಾರು ಮತ್ತು ಕಾಚಾರಸಲಕೆಗಳಲ್ಲಿ ಸೇತುವೆ ಆಗಬೇಕಾಗಿದೆ, ಸೇತುವೆ ಮಂಜೂರಾಗಿದ್ದರೂ ಸಹ ಕೆಲಸ ಪೂರ್ತಿಯಾಗಿಲ್ಲ. ಅಲ್ಲಿ ವಾಹನಗಳು ಹೋಗದೆ ಸುಮಾರು ೪ ವರ್ಷಗಳು ಆಯಿತು. ಈ ಬಗ್ಗೆ ಕೂಡ ಉದಯವಾಣಿ ಪತ್ರಿಕೆಯಲ್ಲಿ ಒಂದು ಲೇಖನ ಬಂದಿದೆ. ಇನ್ನು ಮಾನ್ಯ ಮಂತ್ರಿಗಳು ತಮ್ಮ ಇಲಾಖೆಯಲ್ಲಿ ಸುಮಾರು ೧೪ ಜನರನ್ನು ಅಮಾನತ್ತಿನಲ್ಲಿಟ್ಟಿದ್ದಾರೆ. ಆದರೆ ನಮ್ಮ ಜಿಲ್ಲೆಯಲ್ಲಿ ಕೂಡ ಇಬ್ಬರು ಇಂಜಿನೀಯರ್‌ಗಳನ್ನು ಅಮಾನತ್ತಿನಲ್ಲಿಟ್ಟಿದ್ದಾರೆ. ಇದುವರೆವಿಗೂ ನಮ್ಮ ಜಿಲ್ಲೆಯಲ್ಲಿ ಯಾರೂ ಆ ಕೆಲಸವನ್ನು ಮಾಡಿರಲಿಲ್ಲ. ಅಂತಹ ಒಳ್ಳೆಯ ಕೆಲಸವನ್ನು ಮಾನ್ಯ ಮಂತ್ರಿಗಳು ಮಾಡಿದ್ದಾರೆ. ಆಡಳಿತ ಯಂತ್ರ ಸರಿಯಾಗಿ ಕೆಲಸ ಮಾಡದಿದ್ದರೆ ಸರ್ಕಾರ ಎಷ್ಟೇ ಯೋಜನೆಗಳನ್ನು ರೂಪಿಸಿದರೂ ಅದರಿಂದ ಯಾವ ಪ್ರಯೋಜನವಾಗುವುದಿಲ್ಲ. ಆಡಳಿತ ಯಂತ್ರ ಸರಿಯಾಗಿ ಕೆಲಸ ಮಾಡಿದರೆ ಅದರ ಕೀರ್ತಿ ನಿಮಗೂ ನಮಗೂ ಎಲ್ಲರಿಗೂ ಬರುತ್ತದೆ. ಒಂದು ಬಾಳೆ ಗೊನೆಯಲ್ಲಿ ಒಂದು ಬಾಳೆಹಣ್ಣು ಕೊಳೆತು ಹೋಗಿದ್ದರೆ ತಕ್ಷಣ ಅದನ್ನು ಕಿತ್ತು ಬಿಸಾಕಬೇಕು. ಇಲ್ಲದಿದ್ದರೆ ಇಡೀ ಬಾಳೆ ಗೊನೆ ಕೊಳೆತು ಹೋಗುವಂತಹ ಸನ್ನಿವೇಶ ಬರಬಹುದು. ಆದ್ದರಿಂದ ಮೊದಲು ಕೊಳೆತ ಬಾಳೆಹಣ್ಣನ್ನು ತೆಗೆಯಬೇಕು. ಅದೇ ರೀತಿಯಲ್ಲಿ ಒಂದು ಬಾಳೆ ಹಣ್ಣು ಕೊಳೆತುಹೋದರೆ, ಅದು ಅಲ್ಲೇ ಇರಲಿ ಎಂದು ಬಿಟ್ಟರೆ, ಇಡೀ ಗೊನೆಯಲ್ಲಿರುವ ಬಾಳೆಹಣ್ಣೆಲ್ಲಾ ಪೂರ್ತಿಯಾಗಿ ಕೊಳೆತು ಹೋಗುತ್ತದೆ. ಆದುದರಿಂದ ಕೆಟ್ಟದ್ದು ಇದ್ದರೆ ಕೆಟ್ಟದ್ದು ಎಂದು ಹೇಳಬೇಕು, ಮತ್ತು ಅದನ್ನು ಸರಿ ಮಾಡಬೇಕು. ಈ ದೇಶ ಹಾಳಾಗುತ್ತದೆ, ಈ ದೇಶಕ್ಕೆ ಬಹಳ ತೊಂದರೆಯಾಗುತ್ತದೆ ಆದುದರಿಂದ ಆಡಳಿತ ಯಂತ್ರವನ್ನು ಚುರುಕುಗೊಳಿಸಲಿಕ್ಕೆ ಮಾನ್ಯ ಮಂತ್ರಿಗಳಾದ ದೇವೇಗೌಡರು ೧೬ ಎಂಜಿನಿಯರುಗಳನ್ನು ಸಸ್ಪೆಂಡ್ ಮಾಡಿದ್ದಾರೆ ಅವ್ಯವಹಾರ ಮಾಡಿದವರಿಗೆ ಶಿಕ್ಷೆ ಕೊಟ್ಟಿದ್ದಾರೆ. ತಾವೇ ಅಲ್ಲಿ ಹೋಗಿ ಸೂಕ್ಷ್ಮವಾಗಿ ಅವೆಲ್ಲವನ್ನೂ ಪರಿಶೀಲನೆ ಮಾಡಿ, ಅವರಿಗೆ ಶಿಕ್ಷೆ ಕೊಟ್ಟರು ಎಂದು ಪತ್ರಿಕೆಯಲ್ಲಿ ಬಂದಿದೆ. ಇದೇರೀತಿ ಕೆಲಸವನ್ನು ಮುಂದುವರಿಸಿದರೆ ಆಡಳಿತ ಯಂತ್ರ ಬದಲಾವಣೆಯಾಗಿ, ಮಾನ್ಯ ರಾಜಾಜಿಯವರು ಹೇಳಿದ ಹಾಗೆ, ನನ್ನ ಶತ್ರು ನಂಬರ್ ಒನ್ ಎಂದು ಹೇಳಿದ ಇಲಾಖೆಯಲ್ಲಿ ಮುಂದೆ ಬಂದು, ಈ ದೇಶದ ಈ ನಾಡಿನ, ಈ ರಾಜ್ಯದ ಜನತೆಗೆ ಹೆಚ್ಚಿನ ಸಹಾಯ ಮಾಡಲಿಕ್ಕೆ ಸಾಧ್ಯ ಆದೀತು ಮತ್ತು ನಿಮ್ಮ ಅನುಭವಕ್ಕೂ ಹೆಚ್ಚಿನ ಬೆಲೆ ದೊರಕೀತು ಎಂದು ಹೇಳಿ, ನಮ್ಮ ಉಳ್ಳಾಲ ಕ್ಷೇತ್ರವನ್ನು ತಾವು ದಯವಿಟ್ಟು ಪರಾಂಬರಿಸಬೇಕು, ನಮ್ಮ ಉಳ್ಳಾಲ ಕ್ಷೇತ್ರಕ್ಕೆ ತಾವು ಬಂದು ನೋಡಬೇಕು, ಅಲ್ಲಿ ಒಳ್ಳೆಯ

ದರ್ಗಾ ಇದೆ. ಒಳ್ಳೆಯ ಕರಾವಳಿ ಇದೆ, ಅದು ಬಹಳ ಒಳ್ಳೆಯ ಕರಾವಳಿ ಪ್ರದೇಶ ಎಂದು ಹೇಳುತ್ತಾ ಮಾತನಾಡಲು ಇಂತಹ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತಾ, ಕೊನೆಯದಾಗಿ ಒಂದೇ ಒಂದು ಮಾತನ್ನು ಹೇಳುತ್ತೇನೆ ನಮ್ಮಲ್ಲಿ ನೆರೆಹಾವಳಿ ಬಹಳ ಎಂದು ಹೇಳಿದೆ. ಬೇಂಗ್ರೆಯಿಂದ ಉಳ್ಳಾಲದವರೆಗೆ ಯಾವಾಗಲೂ ಕಡಲಿನ ಕೊರೆತದಿಂದ ಇಡೀ ಪ್ರದೇಶ ಕರಗಿ ಹೋಗುತ್ತಿದೆ. ಅದಕ್ಕೆ ಒಂದು ತಡೆಗೋಡೆ ಹಾಕಬೇಕೆಂದು ಬಹಳ ದಿವಸಗಳಿಂದ ಹೇಳುತ್ತಿದ್ದೇವೆ. ಪ್ರತಿವರ್ಷ ಸಮುದ್ರದ ಕೊರೆತದಿಂದ ಅನೇಕ ಜನ ಬಡವರ ಗುಡಿಸಲುಗಳು, ಅವರ ದನ ಎಲ್ಲಾ ನಾಶವಾಗಿ ಹೋಗಿದ್ದನ್ನು ನಾವು ಕಂಡಿದ್ದೇವೆ. ನನ್ನ ಕ್ಷೇತ್ರದ ಸಮೀಪ ನನ್ನ ಮನೆಯ ಸಮೀಪ, ಉಳ್ಳಾಲ ಬೇಂಗ್ರೆ ಕರಾವಳಿಯ ಉದ್ದಕ್ಕೂ ತಡೆಗೋಡೆ ಕಟ್ಟುವ ವಿಚಾರದಲ್ಲಿ ಕೂಡಾ ಕೇಂದ್ರ ಸರಕಾರದ ಸಹಾಯ ತೆಗೆದುಕೊಳ್ಳಿ, ಕೇಂದ್ರ ಸರಕಾರದ ಹತ್ತಿರ ಮಾತನಾಡಿಕೊಳ್ಳಿ, ಇದು ಒಂದು ಪ್ರಮುಖವಾದಂಥ ವಿಚಾರ ಇದನ್ನು ಮಾಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಚಂದ್ರಕಾಂತ್ ಗುರಪ್ಪ ಬೆಲ್ಲದ್ (ಧಾರವಾಡ).—ಮಾನ್ಯ ಅಧ್ಯಕ್ಷರೇ, ನಮ್ಮ ಲೋಕೋಪಯೋಗಿ ಮತ್ತು ನೀರಾವರಿ ಸಚಿವರಾದಂಥ ಶ್ರೀಮಾನ್ ದೇವೇಗೌಡರು ಇಟ್ಟಿರುವ ೧೯೮೫-೮೬ನೇ ಸಾಲಿನ ಆಯವ್ಯಯವನ್ನು ನಾನು ಭಾಗಶಃ ಕೆಲಸವನ್ನು ಒಪ್ಪಿಕೊಂಡು, ಕೆಲವು ಸಲಹೆಗಳನ್ನು ಹಾಗೂ ಕೆಲವು ವಿಚಾರಗಳನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ತಿಳಿಯಪಡಿಸುತ್ತೇನೆ. ಲೋಕೋಪಯೋಗಿ ಇಲಾಖೆಯಲ್ಲಿ ಬಹಳ ಮುಖ್ಯವಾದಂಥ ವಿಭಾಗ ಎಂದರೆ ನೀರಾವರಿ. ಪ್ರಮುಖವಾದಂಥ, ರಾಜ್ಯದ, ರಾಷ್ಟ್ರದ ಅಭಿವೃದ್ಧಿಗೆ ಆದ್ಯತೆಯನ್ನು ಕೊಡುವಂತಹ ಜನತೆಗೆ ಉದ್ಯೋಗವನ್ನು ಒದಗಿಸುವ ನಮ್ಮ ಕೃಷಿ ಮೂಲವಾದಂಥ ರಾಜ್ಯಕ್ಕೆ ಹೆಚ್ಚು ನೀರನ್ನು ಕೊಡುವುದು. ಅದಕ್ಕಾಗಿ ಹೆಚ್ಚಿನ ಆದ್ಯತೆಯನ್ನು ಕೊಡುವುದು ಈ ಇಲಾಖೆಯ ಮುಖ್ಯ ಕರ್ತವ್ಯವಾಗಿದೆ. ಅದರಲ್ಲೂ ಮುಖ್ಯವಾಗಿ ನಮ್ಮ ಮುಂದಿರುವಂತಹ ಪ್ರಮುಖ ನೀರಾವರಿ ಯೋಜನೆಗಳಾದ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳಿಗೆ ಸಾಕಷ್ಟು ಹಣವನ್ನು ತೊಡಗಿಸಿದ್ದರೂ ಸಹಿತ ಇನ್ನೂ ಅನೇಕ ಸಮೂಹಾತಳಿಯನ್ನು ಹೊಂದಿರುವಂತಹ ಪ್ರದೇಶಗಳಿಗೆ ಕಾಲುವೆಗಳ ಮೂಲಕ ನೀರನ್ನು ಒದಗಿಸುವ ಕೆಲಸ ಅಷ್ಟು ವೇಗವಾಗಿ ನಡೆಯುತ್ತಿಲ್ಲ. ಬಹಳ ದೊಡ್ಡ ಪ್ರಮಾಣದಲ್ಲಿ ಹಣವನ್ನು ಸರಕಾರ ತೊಡಗಿಸಿ, ಅದರ ಪ್ರಯೋಜನ ಪಡೆಯುವುದರ ಕಡೆಗೆ ಹಾಗೂ ಹಂತ ಹಂತವಾಗಿ, ನಿರ್ದಿಷ್ಟವಾದ ಅವಧಿಯಲ್ಲಿ ಕೆಲಸ ಮುಗಿಸುವ ಯೋಜನೆಯನ್ನು ಸರಕಾರ ಹಾಕಿಕೊಳ್ಳಬೇಕು. ಏಕೆಂದರೆ ಹೆಚ್ಚಿನ ಮೊತ್ತದ ಹಣವನ್ನು ಇದರಲ್ಲಿ ತೊಡಗಿಸಿದ ಮೇಲೆ ಅದರ ಪ್ರಯೋಜನ ತೀವ್ರವಾಗಿ ಸಿಗುವಂತಹ ದಿಸೆಯಲ್ಲಿ ಸರಕಾರ ಹೆಚ್ಚು ಆದ್ಯತೆಯನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ಇನ್ನು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಏನಿದೆ ಅದು ಇರುವುದು ಬರಗಾಲ ಸೀಮೆಯ ಪ್ರದೇಶದಲ್ಲಿ. ಅದು ಬಹಳ ಫಲವತ್ತಾದ ಭೂಮಿ ಇರುವಂತಹ ಪ್ರದೇಶ. ಆದರೂ ಹೆಚ್ಚು ಸಂಖ್ಯೆಯಲ್ಲಿರುವ ಅಲ್ಲಿಯ ಜನರಿಗೆ ಯಾವ ಕೂಲಿಯೂ ಸಹಿತ ಸಿಗದೆ ಬೇರೆ ಕಡೆಗೆ ವಲಸೆ ಹೋಗುವಂತಹ ಪರಿಸ್ಥಿತಿ ಬಂದಿದೆ ಈ ಪ್ರದೇಶದಲ್ಲಿರುವಂತಹ ಅಪ್ಪರ್ ಕೃಷ್ಣಾ ಯೋಜನೆಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಅದನ್ನೂ ಸಹಿತ ಶೀಘ್ರವಾಗಿ ಮುಗಿಸುವುದಕ್ಕಾಗಿ ಇದಕ್ಕೆ ಹೆಚ್ಚಿನ ಹಣವನ್ನು ತೊಡಗಿಸುವುದು ಬಹಳ ಮುಖ್ಯವಾಗಿದೆ. ಇದರ ಜೊತೆಗೆ ಸಮಗ್ರವಾಗಿ ರಾಜ್ಯದಲ್ಲಿರುವ ಬಹಳ ಮುಖ್ಯವಾದಂಥ ದೊಡ್ಡ ನೀರಾವರಿ ಯೋಜನೆಗಳಿಗೆ, ಎಲ್ಲಾ ಕಡೆಗೂ ಸಮಾನವಾದ ಆದ್ಯತೆಯನ್ನು ಕೊಡಬೇಕು. ಅದರಲ್ಲೂ ಮುಖ್ಯವಾಗಿ ಮಲೆನಾಡು ಭಾಗದಲ್ಲಿ ಹೆಚ್ಚಿನ ಪ್ರದೇಶ ನೀರಾವರಿಯಾಗುತ್ತದೆ, ಬಹಳ ದಿನಗಳ ಜನತೆಯ ಬೇಡಿಕೆ ಎಲ್ಲಿದೆ, ನೋಡಿ ಅಂತಹ ಪ್ರದೇಶಗಳಿಗೆ ಹೆಚ್ಚಿನ ಹಣವನ್ನು ಒದಗಿಸಿಕೊಡುವುದು ಅವಶ್ಯಕವಾಗಿದೆ. ಅದೂ ಅಲ್ಲದೆ ನಮ್ಮ ರಾಜ್ಯವನ್ನು ರಾಷ್ಟ್ರಗಳ ಜೊತೆಗೆ ಹೋಲಿಸಿದರೆ ನೀರಾವರಿಯ ಸದುಪಯೋಗವನ್ನು ನಾವು ಸಾಕಷ್ಟು ಮಾಡಿಕೊಂಡಿಲ್ಲ. ಇಲ್ಲಿ ಬೇಕಾದಷ್ಟು ನೀರಿನ ಅನುಕೂಲತೆಗಳು ಇದ್ದರೂ ಅದರ ಪ್ರಯೋಜನವನ್ನು ಹೆಚ್ಚಾಗಿ ಪಡೆಯುವುದಕ್ಕೆ ಆಗಿಲ್ಲ, ಅದು ಕೇವಲ ಈಗಿನ ತಪ್ಪಲ್ಲ, ಹಿಂದಿನಿಂದ ಬಂದಂಥ ದೋಷದಿಂದ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಈ ರೀತಿ ಆಗಿದೆ. ನಮ್ಮ ಸರಕಾರ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತಿದೆ. ಅದರಲ್ಲೂ ಕೂಡಾ ಮುಖ್ಯವಾಗಿ ಮಾನ್ಯ ದೇವೇಗೌಡರು ದಕ್ಷರಾದ ಮಂತ್ರಿಗಳು, ಅವರು ಇದರ ಬಗ್ಗೆ ಸಾಕಷ್ಟು ಗಮನ ಕೊಡಬೇಕು. ಹಿಂದಿನ ಅನೇಕ ಜನ ನಮ್ಮ ಶಾಸಕರು ಸದಸ್ಯರುಗಳು ಹೇಳಿದ ಹಾಗೆ ಅವರು ಸಾಕಷ್ಟು ಅನುಭವಿಗಳಿದ್ದರೂ ಕೂಡಾ ಅವರು ಏತಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು, ಈ ದಿಸೆಯಲ್ಲಿ ಹೆಚ್ಚಿನ ಸಂಪನ್ಮೂಲಗಳನ್ನು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸರಿಯಾಗಿ ಒದಗಿಸಿಕೊಳ್ಳಲಿಲ್ಲ ? ಈಗಲಾದರೂ ರಾಜ್ಯ ಸರ್ಕಾರ ತನ್ನ ಸಂಪನ್ಮೂಲಗಳನ್ನು ಗುರ್ತಿಸಿ ಹೆಚ್ಚಿನ ಹಣವನ್ನು ಒದಗಿಸಿ, ಶೀಘ್ರಗತಿಯಿಂದ ಯೋಜನೆಗಳನ್ನು ಅವಧಿಯ ಒಳಗೇ ಮುಗಿಸಲಿಕ್ಕೆ ಪ್ರಯತ್ನ ಮಾಡಬೇಕು. ಈಗ ನೀರಾವರಿಯನ್ನು ನದಿಗಳಿಂದ, ಹಳ್ಳಗಳಿಂದ ಮಾಡುತ್ತಿದ್ದಾರೆ. ಆದರೆ ಅದನ್ನು ಸರಿಯಾಗಿ ಬಳಸುತ್ತಿಲ್ಲ. ಈ ದಿವಸ ನಮಗೆ ಬಹಳ ದೊಡ್ಡ ಸಮಸ್ಯೆ ಎಂದರೆ, ಮಳೆ ಆಗದೆ ಇರುವುದು, ಹಾಗೂ ಕುಡಿಯುವ ನೀರಿನ ಸಮಸ್ಯೆ. ನಮ್ಮ ಇವತ್ತು ಮಾನ್ಯ ಮಂತ್ರಿಗಳಾದ ನಜೀರ್ ಸಾಹೇಬರು ಎಲ್ಲಾ ಕಡೆಗೆ ಬೋರ್‌ವೆಲ್‌ಗಳನ್ನು ತೆಗೆಸಿದ್ದಾರೆ. ಇಡೀ ರಾಷ್ಟ್ರದಲ್ಲಿ ಅತೀ ದೊಡ್ಡ ಪ್ರಮಾಣದಲ್ಲಿ ರಾಜ್ಯ ಸರಕಾರ ಬೋರ್‌ವೆಲ್‌ಗಳನ್ನು ತೆಗೆಸಿದೆ. ಆದರೆ ಅದೇ ಬೋರ್‌ವೆಲ್‌ಗಳಿಗೆ ನೀರು ಸಿಗದಂಥ ಪರಿಸ್ಥಿತಿ ಬಂದಿದೆ. ಇದಕ್ಕೆ ಮುಖ್ಯ ಕಾರಣ ಎಂದರೆ ಏನು ಜಲ ಸಂಪನ್ಮೂಲ ಭೂಮಿಯಲ್ಲಿರಬೇಕು ಇವತ್ತು ಅದರ ಕೊರತೆ ಕಂಡುಬರುತ್ತಿದೆ. ಅದಕ್ಕೆ ಹರಿದು ಹೋಗುವಂತಹ ನೀರು ಏನಿದೆ ಅದನ್ನು ತಡೆಗಟ್ಟುವಂತಹ ಯೋಜನೆಯನ್ನು ಈಗ ಸರ್ಕಾರ ಹೆಚ್ಚಿನ ಆದ್ಯತೆ ಕೊಟ್ಟು ಮಾಡಬೇಕಾಗಿದೆ. ಮಳೆಗಾಲ ಸರಿಯಾಗಿ ಆಗದೆ ಇದ್ದರೂ ಕೆಲವು ಸಾರಿ ಮಳೆ ಬಂದು ಹೆಚ್ಚಿನ ಪ್ರಮಾಣದ ನೀರು ನದಿ ಹಳ್ಳಗಳು ನಾಲೆಗಳಲ್ಲಿ ಬರದಿಂದ ಹರಿದು ಹೋಗುತ್ತದೆ. ಈ ರೀತಿ ಹರಿದು ಹೋಗತಕ್ಕಂಥ ನೀರನ್ನು ಅಲ್ಲಲ್ಲೇ ಎಂದರೆ ೫-೫ ಕಿಲೋಮೀಟರ್, ೬-೬ ಕಿಲೋಮೀಟರ್‌ಗಳಿಗೆ ಒಂದೊಂದು ಬಂಡ್‌ಗಳನ್ನು ಕಟ್ಟಿ ನೀರನ್ನು ತಡೆ ಹಿಡಿದು ಅದು ಭೂಮಿಯ ಒಳಗೆ ಆಳವಾಗಿ ಇಳಿದು, ಭೂಮಿಯಲ್ಲಿ ಜಲ ಸಂಪನ್ಮೂಲ ಹೆಚ್ಚಾಗುವ ಹಾಗೆ ಮಾಡಲು ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿದೆ. ಈಗಿರುವಂತಹ ಅನೇಕ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ನಮ್ಮ ಮಾನ್ಯ ಮಂತ್ರಿಗಳು ಕೊಡಬೇಕೆಂದು ಹೇಳಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಈಗಿರುವಂತಹ ಯೋಜನೆಗಳಲ್ಲಿ, ನಾಲೆಗಳು, ಕಾಲುವೆಗಳು ಏನಿದ್ದಾವೆ, ಈ ಕಾಲುವೆಗಳಲ್ಲಿ ಅನೇಕ ದೋಷಗಳು ಇವೆ. ಮೇಲ್ಮಟ್ಟದಲ್ಲಿರುವ ರೈತರು ಇದರ ಬಗ್ಗೆ ತಕರಾರುಗಳನ್ನು ಕೊಡುತ್ತಿದ್ದಾರೆ. ಆದುದರಿಂದ ನೀರಿನ ಸರಿಯಾದ ಬಳಕೆಯನ್ನು ಮಾಡಿಕೊಳ್ಳಲಿಕ್ಕೆ ಆತಂಕವಾಗಿದೆ. ಭೂಮಿಯನ್ನು ಸಮಪಾತಳಿ ಮಾಡುವ ದಿಸೆಯಲ್ಲಿ ಕೂಡಾ ಸಾಕಷ್ಟು ಕಾಳಜಿ ವಹಿಸಬೇಕಾಗಿದೆ. ಎಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ. ಈಗ ಕೆಲವು ದೊಡ್ಡ ನೀರಾವರಿ ಯೋಜನೆಗಳಲ್ಲಿ, ಸರಿಯಾದ ಕಾಲುವೆಗಳು ಇಲ್ಲದೆ, ಸರಿಯಾಗಿ ನೀರನ್ನು ಬಳಸಿಕೊಳ್ಳದೇ, ಭೂಮಿಯು ಜವಳಾಗಿ, ಬಂಜರಾಗಿ ಹಾಳಾಗತಕ್ಕ ಪರಿಸ್ಥಿತಿ ಬರುತ್ತಿದೆ. ಆದುದರಿಂದ ನೀರಿನ ಬಳಕೆಯನ್ನು ಸರಿಪಡಿಸಬೇಕು. ನೀರು ಸಾಕಷ್ಟು ಇದ್ದರೂ ಸರಿಯಾಗಿ ಬಳಸುವುದು ಸರಿಯಾಗಿ ವಿತರಣೆ ಮಾಡಿಕೊಳ್ಳುವುದು ಸರಿಯಾದ ನಾಲೆ ವ್ಯವಸ್ಥೆ ಮಾಡುವುದು ಇವೆಲ್ಲವನ್ನೂ ಹೆಚ್ಚು ದಕ್ಷತೆಯಿಂದ ಮಾಡಿಕೊಡಬೇಕು. ನಮ್ಮಲ್ಲಿ ರೈತರು ಇನ್ನೂ ನೀರಿನ ಬಳಕೆಯ ಮಟ್ಟಿಗೆ ಸಾಕಷ್ಟು ಪ್ರಜ್ಞತೆಯನ್ನು ಪಡೆದಿಲ್ಲ. ಭೂಮಿ ನಾಶವಾಗಿ, ಜವಳಾಗಿ ಬಂಜರಾದರೆ ಅದನ್ನು ಸರಿಪಡಿಸಲಿಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಹಣವನ್ನು ತೆರಬೇಕಾಗುತ್ತದೆ. ಈ ನೀರಾವರಿಯ ಸದುಪಯೋಗ ಆಗದೇ ಇರುವ ಅನೇಕ ನೀರಾವರಿ ಪ್ರದೇಶಗಳನ್ನು ನಾವು ನೋಡುತ್ತಿದ್ದೇವೆ. ಇದನ್ನು ತಡೆಗಟ್ಟುವುದರ ಕಡೆಗೆ ನಮ್ಮ ಮಾನ್ಯ ಮಂತ್ರಿಗಳು ಗಮನಹರಿಸಬೇಕು.

೩.೩೦ ಪಿ. ಎಂ.

ಇನ್ನು ನಮ್ಮ ರಾಜ್ಯ ಹಳ್ಳಿಗಾಡಿನ ರಾಜ್ಯ, ಗ್ರಾಮಾಂತರ ಪ್ರದೇಶದಿಂದ ಕೂಡಿದ ರಾಜ್ಯ. ಈ ರಾಜ್ಯದಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ, ಹೆಚ್ಚಿನ ಸಂಖ್ಯೆಯಲ್ಲಿ ಜನ ಕೃಷಿಯಲ್ಲಿ ತೊಡಗಿದ್ದಾರೆ. ಈ ಕೃಷಿಯಲ್ಲಿ ತೊಡಗಿರುವಂಥ ಜನರಿಗೆ ಹೆಚ್ಚಿನ ಉದ್ಯೋಗವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಇದರ ಜೊತೆಗೆ ಕಾಲು ದಾರಿಗಳು ಏನಿವೆ ಅವು ಬಹಳ ಪ್ರಾಮುಖ್ಯವಾದುವುಗಳು. ರಾಷ್ಟ್ರೀಯ ಹೆದ್ದಾರಿಗಳು ಹೇಗೆ ಮುಖ್ಯವೋ ಹಾಗೆಯೇ ಗ್ರಾಮದಿಂದ, ಗ್ರಾಮಕ್ಕೆ ಹೋಗತಕ್ಕ ರಸ್ತೆಗಳೂ ಅಷ್ಟೇ ಮುಖ್ಯವಾದುವುಗಳು. ಈ ರೀತಿ ಇರತಕ್ಕ ಹಳ್ಳಿ ರಸ್ತೆಗಳನ್ನು ಸರಿಪಡಿಸಬೇಕು. ಇವತ್ತಿನ ದಿವಸ ಎಷ್ಟೋ ಹಳ್ಳಿಗಳಿಗೆ ಸರಿಯಾದ ರಸ್ತೆಗಳು ಇಲ್ಲ. ಮಾರ್ಗ ಇಲ್ಲ ಎನ್ನುವುದನ್ನು ಅಂಕಿಅಂಶಗಳಿಂದ ನೋಡುತ್ತಿದ್ದೇವೆ. ರಸ್ತೆಗಳನ್ನು ಸರಿಯಾಗಿ ಮಾಡಬೇಕು. ಅವರ ಮೂಲಕ ರೈತ ತನ್ನ ಹಳ್ಳಿಗೆ ಹೋಗಿ ಉಳುಮೆ ಮಾಡಿ ಉತ್ಪಾದನೆ ಮಾಡುವಂಥ ಅವಕಾಶವನ್ನು ಮಾಡಿಕೊಡಬೇಕಾಗಿದೆ. ಅನೇಕ ಕಡೆ ಪಟ್ಟಣಗಳಲ್ಲಿ ಈಗಾಗಲೇ ಪಿ. ಡಬ್ಲ್ಯೂ. ಡಿ. ಕಟ್ಟಡಗಳ ಬಗ್ಗೆ ಸಾಕಷ್ಟು ತಕರಾರುಗಳು ಇವೆ. ಕಂಟ್ರಾಕ್ಟರು ಗಳಿಗೆ ಪೇಮೆಂಟ್ ಆಗುವವರೆಗೆ ಬಿಲ್ಡಿಂಗ್ ಇದ್ದು, ಪೇಮೆಂಟ್ ಮುಗಿದು ಕೆಲವೇ ದಿವಸಗಳಲ್ಲಿ ಬಿಲ್ಡಿಂಗ್ ಬಿದ್ದು ಹೋಗುವುದನ್ನು ನೋಡುತ್ತಿದ್ದೇವೆ. ನಾವು ಇಂದು ಕಟ್ಟಡಗಳಲ್ಲಿ ಇಂತಹ ಗುಣಮಟ್ಟವನ್ನು ಕಾಣುತ್ತಿದ್ದೇವೆ. ಈ ದೇಶದಲ್ಲಿ ಹೆಚ್ಚು ದಕ್ಷತೆಯನರೆ ಲೋಕೋಪಯೋಗಿ ಇಲಾಖೆ ವಹಿಸಬೇಕಾಗಿದೆ. ನಮಗೆ ಹತ್ತಿರದಿಂದ ಕಂಡುಬಂದ ದೋಷ ಎಂದು

ಯೋಜನಾಬದ್ಧವಾಗಿ ಕಾರ್ಯಗಳು ನಡೆದಿಲ್ಲ. ನಿಗದಿ ಪಡಿಸಿದ ಅವಧಿಯನ್ನು ಮೀರಿ, ಸರಿಯಾದ ದಿಶೆಯಲ್ಲಿ ಆಗದೇ ಇಲ್ಲಿಯವರೆಗೂ ಬಹಳ ದೊಡ್ಡ ಪ್ರಮಾಣದ ಹಣ ತೊಡಗಿಸಿದರೂ ಅದರಿಂದ ಪ್ರಯೋಜನ ಪಡೆದಿಲ್ಲ. ಎಲ್ಲಾ ಯೋಜನೆಗಳನ್ನೂ ನಿರ್ದಿಷ್ಟವಾದ ಅವಧಿಯಲ್ಲಿಯೇ ಮುಗಿಸಬೇಕು, ಹಾಗೂ ನಿರ್ದಿಷ್ಟವಾಗಿ ತೆಗೆದಿಟ್ಟ ಹಣದಿಂದಲೇ ಮುಗಿಸುವಂತಹ ದಕ್ಷತೆಯನ್ನು ಈ ಇಲಾಖೆ ವಹಿಸಬೇಕಾಗಿದೆ. ಅಧಿಕಾರಿಗಳು ಹಾಗೂ ಕೆಲವೊಂದು ಮುಖ್ಯವಾದ ಕಂಟ್ರ್ಯಾಕ್ಟರು ಇವತ್ತಿನ ದಿವಸ ದಿವಸ ಸಾಮಾನ್ಯ ಜನರ ಹಣವನ್ನು ದರೋಡೆ ಮಾಡುತ್ತಿದ್ದಾರೆ ಎನ್ನುವ ಆರೋಪ ಈ ಇಲಾಖೆ ಮೇಲಿದೆ. ಈ ಆರೋಪ ನಿವಾರಣೆಯಾಗಲು, ಸನ್ಮಾನ್ಯ ಮಂತ್ರಿಗಳು ಈ ಇಲಾಖೆಯ ಗುಣಮಟ್ಟವನ್ನು ಸರಿಯಾಗಿ ನೋಡಿಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಅದಲ್ಲದೇ ಇವತ್ತಿನ ದಿವಸ ಭೂಮಿಯನ್ನು ಸಮಪಾತಳಿ ಮಾಡುವುದರಿಂದ, ಎಲ್ಲಾ ನೀರಾವರಿ ಪ್ರದೇಶಕ್ಕೂ ನೀರು ಸರಿಯಾಗಿ ವಿತರಣೆಯಾಗುತ್ತದೆ. ಇದನ್ನೂ ಕೂಡ ಬಹಳ ದಕ್ಷತೆಯಿಂದ ನೋಡಿಕೊಳ್ಳಬೇಕಾಗಿದೆ. ಸಾಮಾನ್ಯ ಜನರ ಹಣ ಬಡರೈತರ ಹಣ ಏನಿದೆ ಅದು ಇವತ್ತಿನ ದಿವಸ ಇದರಲ್ಲಿ ವಿನಿಯೋಗವಾಗುತ್ತಿದೆ. ಈ ದಿಸೆಯಲ್ಲಿ ಈ ಇಲಾಖೆಗೆ ತೆಗೆದಿಟ್ಟಿರುವ ಹಣ ಕಡಿಮೆ ಇದೆ. ಈ ಹಣವನ್ನು ಹೆಚ್ಚಿಸಿ ಅದರಿಂದ ನೀರಾವರಿ ರಸ್ತೆಗಳು ಹೆದ್ದಾರಿಗಳು ಇವುಗಳಿಗೆ ಮಹತ್ವ ಕೊಟ್ಟು ಆದ್ಯತೆ ಕೊಟ್ಟು ಕೆಲಸ ನಡೆಸಬೇಕು. ಧಾರವಾಡ ಮತ್ತು ಹುಬ್ಬಳ್ಳಿಯಲ್ಲಿ ನ್ಯಾಷನಲ್ ಹೈವೆ ನಂ. ೪ ಬರುತ್ತದೆ. ಇವತ್ತಿನ ದಿವಸ ಬೆಂಗಳೂರು ನಂತರ ಎರಡನೇ ಮಹಾನಗರ ಈ ನಗರಗಳು. ಇವತ್ತಿನವರೆಗೆ ಈ ವಿಚಾರದಲ್ಲಿ ನ್ಯಾಷನಲ್ ಹೈ ವೇ ರೋಡಿಗೆ ಬೈ ಪಾಸ್ ರೋಡ್ ಆಗಿಲ್ಲ. ಈ ದಿಸೆಯಲ್ಲಿ ಮಾನ್ಯ ಮಂತ್ರಿಗಳು ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಬೈ ಪಾಸ್ ರೋಡ್‌ನ್ನು ಆದಷ್ಟು ತೀವ್ರವಾಗಿ ಮಾಡಿಸಬೇಕು. ಈಗ ಇರುವಂಥ ರಸ್ತೆಯಲ್ಲಿ ದಿನೇದಿನೇ ಅಪಘಾತಗಳು ಆಗುತ್ತಿವೆ. ನಗರ ಬೆಳೆಯುತ್ತಿದೆ. ಈ ದಿಸೆಯಲ್ಲಿ ಹೆಚ್ಚು ಆದ್ಯತೆಯನ್ನು ಕೊಟ್ಟು ನ್ಯಾಷನಲ್ ಹೈವೇಗೆ, ಬೈಪಾಸ್ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇವತ್ತಿನವರೆಗೆ ಅನೇಕ ಮಾನ್ಯ ಸದಸ್ಯರು ತಮ್ಮ ಸಲಹೆಗಳನ್ನು ಈ ಇಲಾಖೆಯ ಬಗ್ಗೆ ಕೊಟ್ಟಿದ್ದಾರೆ. ಗುಣಮಟ್ಟ ಮತ್ತು ಸರಿಯಾದ ಅವಧಿಯಲ್ಲಿ ಕೆಲಸ ಮುಗಿಯಬೇಕು, ತಾರತಮ್ಯ ಮಾಡದೆ ಅರ್ಹವಲ್ಲದ ಭಾಗಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡದೆ ಸಮಗ್ರ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಎಲ್ಲಾ ಜಿಲ್ಲೆ ಎಲ್ಲಾ ವಿಭಾಗಗಳನ್ನೂ ನೋಡಿ, ತಮ್ಮ ಹಣ ಕಾಯ್ದಿರಿಸಬೇಕಾಗಿದೆ. ನೀರಾವರಿ ಮತ್ತು ರೋಡು, ಬಿಲ್ಡಿಂಗ್ ಇವೆಲ್ಲಾ ಕೆಲಸಗಳನ್ನು ಆದ್ಯತೆ ಪ್ರಕಾರ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು ಈ ಇಲಾಖೆಯಲ್ಲಿ ದಕ್ಷತೆಯನ್ನು ಹೆಚ್ಚಿಸಬೇಕೆಂದೂ, ಜನತೆಯ ಆರೋಪ ಏನಿದೆ ಅದನ್ನು ಹೋಗಲಾಡಿಸುವ ದಿಸೆಯಲ್ಲಿ ಮಾನ್ಯ ಮಂತ್ರಿಗಳು ಲಕ್ಷ್ಯವಹಿಸಬೇಕೆಂದು ಹೇಳಿ, ಇಷ್ಟು ಮಾತನಾಡಲು ತಾವು ಅವಕಾಶ ಕೊಟ್ಟಿದ್ದಕ್ಕೆ ನನ್ನ ಕೃತಜ್ಞತೆಯನ್ನು ಅರ್ಪಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಡಿ. ಎ. ಚನ್ನಪ್ಪ (ಮಡಿಕೇರಿ).—ಮಾನ್ಯ ಅಧ್ಯಕ್ಷರೆ, ಇವತ್ತು ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗೆ ಸರ್ಕಾರದವರು ಏನು ಹಣ ಕೇಳಿದ್ದಾರೆ ಅದನ್ನು ವಿರೋಧಿಸಿ ನಾನು ಮಾತನಾಡುವುದಕ್ಕೆ ಬಯಸುತ್ತೇನೆ. ಯಾವುದಾದರೊಂದು ರಾಜ್ಯ ಅಭಿವೃದ್ಧಿಯಾಗಬೇಕಾದರೆ, ಮೊದಲು ರಸ್ತೆ, ಸೇತುವೆ, ಆಮೇಲೆ ಇರಿಗೇಷನ್ ಇವು ಮುಖ್ಯವಾದವುಗಳು. ಇವತ್ತು ನಾವು ರಸ್ತೆಗಳನ್ನು ಮತ್ತು ಸೇತುವೆಗಳನ್ನು ತೆಗೆದುಕೊಳ್ಳುವುದಾದರೆ, ಮಲೆನಾಡಿಗೆ ಒಂದು ತರಹದ ಆದ್ಯತೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಬಯಲು ಸೀಮೆಗೆ ಬೇರೆ ಇಟ್ಟುಕೊಳ್ಳಬೇಕಾಗುತ್ತದೆ ಈ ರೀತಿ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇ ಳಿ ಕೊ ಳ್ಳು ತ್ತೇ ನೆ. ಮಲೆನಾಡಿನಲ್ಲಿ ಸಾಧಾರಣವಾಗಿ ಆರು ತಿಂಗಳುಗಳ ಕಾಲ ಮಳೆ ಇರುತ್ತದೆ. ಈ ಆರು ತಿಂಗಳ ಕಾಲ ಮಳೆ ಇರುವ ಸಮಯದಲ್ಲಿ ಕಾಮಗಾರಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಉಳಿದ ಆರು ತಿಂಗಳಲ್ಲಿ ಮಾತ್ರ ಈ ಕಾಮಗಾರಿ ಕೆಲಸಗಳನ್ನು ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಮಲೆನಾಡಿನಲ್ಲಿ ಆಗತಕ್ಕ ಕೆಲಸಗಳು ಕುಂಟಿತಗೊಳ್ಳುತ್ತವೆ. ಮಲೆನಾಡು ಪ್ರದೇಶದ ಜನತೆಗೆ ರಸ್ತೆ, ಸೇತುವೆಗಳ ವ್ಯವಸ್ಥೆ ಬಹಳ ಕಡಿಮೆ. ಅಲ್ಲಿಯ ಜನ ಬಹಳ ಕಷ್ಟಕ್ಕೆ ಈಡಾಗುತ್ತಾರೆ. ಒಂದು ರಸ್ತೆಗೆ ಎರಡು ಮೂರು ಸಲ ಎಸ್ಟಿಮೇಟ್ ಮಾಡುವ ಪ್ರಸಂಗ ಬರುತ್ತಿದೆ. ರಸ್ತೆಗಳಿಗೆ ೧೦ ವರ್ಷ ಕಳೆದ ಮೇಲೆ ಪುನಃ ಟಾರ್ ಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆ. ರಸ್ತೆಗೆ ಮೆಟಲಿಂಗ್ ಮಾಡಿ ಎಷ್ಟೋ ವರ್ಷಗಳು ಕಳೆದ ಮೇಲೆ ಟಾರ್ ಹಾಕುತ್ತಾರೆ. ಇದರಿಂದಾಗಿ ರಸ್ತೆಗಳು ಬಹಳ ಕಾಲ ಉಳಿಯುವುದಿಲ್ಲ. ಈ ಒಂದು ಪ್ರಸಂಗ ನಿವಾರಣೆಯಾಗಬೇಕಾದರೆ, ಮೆಟಲಿಂಗ್ ಮಾಡಿದ ಕೂಡಲೇ

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಟಾರ್ ಹಾಕುವ ವ್ಯವಸ್ಥೆಯನ್ನು ಮಾಡಿದರೆ, ಈ ರಸ್ತೆಗಳು ಮಲೆನಾಡು ಏರಿಯಾದಲ್ಲಿ ಉಳಿಯುತ್ತವೆ. ಇಲ್ಲದೇ ಹೋದರೆ ಉಳಿಯುವುದಿಲ್ಲ. ಮತ್ತು ೨-೩ ಸಾರಿ ಎಸ್ಟಿಮೇಟ್ ಮಾಡುವುದನ್ನು ನಿಲ್ಲಿಸುವ ಪ್ರಯತ್ನ ಮಾಡಬೇಕು. ಹೀಗೆ ಮಲೆನಾಡು ಪ್ರದೇಶದಲ್ಲಿ ಬಹಳಷ್ಟು ಕಡೆ ರಸ್ತೆಗಳು ಇಲ್ಲ. ವಿಲೇಜ್ ಕಮ್ಯೂನಿಕೇಷನ್ ರೋಡ್ ಮಾಡದೆ ಇರುವುದರಿಂದ ಇವತ್ತು ರೈತರು ಬೆಳೆದ ಆಹಾರ ಪದಾರ್ಥಗಳನ್ನು ಮಾರುಕಟ್ಟೆಗೆ ತರತಕ್ಕ ವ್ಯವಸ್ಥೆ ಇಲ್ಲ. ರಸ್ತೆ ಇಲ್ಲದ ಕಾರಣ ವಾಹನಗಳು ಹೋಗುವುಕ್ಕಾಗುವುದಿಲ್ಲ. ಆದ್ದರಿಂದ ಮಲೆನಾಡು ಪ್ರದೇಶದ ಜನರಿಗೆ ಹೆಚ್ಚಿನ ಸೌಲಭ್ಯ ಕಲ್ಪಿಸಿಕೊಡುವುದನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ. ಮಲೆನಾಡು ಪ್ರದೇಶದಲ್ಲಿ ಬಿಲ್ಡಿಂಗ್ ಸರಿಯಾಗಿ ಕಟ್ಟವಿದ್ದರೆ, ಒಂದೆರಡು ಮಳೆಗಾಲದಲ್ಲಿಯೇ ಬಿದ್ದು ಹೋಗುತ್ತವೆ. ಎಷ್ಟೋ ಬಿಲ್ಡಿಂಗ್‌ಗಳು, ಶಾಲಾ ಬಿಲ್ಡಿಂಗ್‌ಗಳು ಮಳೆಗಾಲದಲ್ಲಿ ಬಿದ್ದು ಹೋಗುತ್ತವೆ, ಇದಕ್ಕೆ ಕಾರಣವೇನೆಂದರೆ, ಇಂಜಿನಿಯರುಗಳು ಮತ್ತು ಕಂಟ್ರಾಕ್ಟರುಗಳು ಸರಿಯಾದ ಪ್ರಮಾಣದಲ್ಲಿ ಸಿಮೆಂಟ್ ಮತ್ತಿತರ ಸಾಮಗ್ರಿಗಳನ್ನು ಉಪಯೋಗಿಸದಿರುವುದೇ ಎಂದು ಹೇಳಬಯಸುತ್ತೇನೆ. ಇದನ್ನು ಸರ್ಕಾರದ ಗಮನಕ್ಕೆ ತೆಗೆದುಕೊಳ್ಳಬೇಕು. ಮಲೆನಾಡಿನಲ್ಲಿ ಕಟ್ಟತಕ್ಕ ಬಿಲ್ಡಿಂಗ್‌ಗಳನ್ನು ಭದ್ರತೆಯಿಂದ ಕಟ್ಟಬೇಕೆಂದು ಹೇಳಬಯಸುತ್ತೇನೆ. ಅಷ್ಟೆ ಅಲ್ಲ, ಸರ್ಕಾರದ ನಿಲುವಿನ ಪ್ರಕಾರ ಪ್ರತಿ ವರ್ಷ ರೇಟ್ ಏರಿಕೊಂಡು ಹೋಗುತ್ತದೆ. ಸುಮಾರು ೧೦ ಪರ್ಸೆಂಟ್, ೨೦ ಪರ್ಸೆಂಟ್, ೩೦ ಪರ್ಸೆಂಟ್ ಹೆಚ್ಚಿಸಿಕೊಂಡು ಹೋಗುತ್ತಿದ್ದಾರೆ. ಇದರಲ್ಲಿ ಕಂಟ್ರಾಕ್ಟರುಗಳಿಗೆ ಇಷ್ಟು ಪರ್ಸೆಂಟೇಜ್, ಬಾಕಿಯವರಿಗೆ ಇಷ್ಟು ಪರ್ಸೆಂಟೇಜ್ ಹೋಗುವುದರಿಂದ, ಎಸ್ಟಿಮೇಟ್ ಮಾಡಿದ ಹಣದಲ್ಲಿ ಕೊರತೆ ಉಂಟಾಗುತ್ತದೆ.

ಈಗಾಗಲೇ ಮಲೆನಾಡು ಏರಿಯಾದಲ್ಲಿ ಕಟ್ಟಿರುವ ಕಟ್ಟಡಗಳು ಯಾವ ರೀತಿಯಾಗಿವೆ ಎನ್ನುವುದು ನಮಗೆ ಗೊತ್ತಿದೆ. ಉದಾಹರಣೆಗೆ ಹೇಳುವುದಾದರೆ ಮಡಕೇರಿಯಲ್ಲಿ ಹೋದವರ್ಷ ಕಟ್ಟಿದಂಥಾ ಒಂದು ಬಸ್‌ಸ್ಟ್ಯಾಂಡ್ ಈ ವರ್ಷ ಸರಿಯಾಗಿ ನಿಲ್ಲಲಿಕ್ಕೆ ಸಾಧ್ಯತೆಯೇ ಇಲ್ಲ. ಇದರಿಂದ ಆ ಜನತಗೆ ಬಹಳ ತೊಂದರೆಯಾಗಿದೆ. ಕಟ್ಟಿದಂಥಾ ಕಟ್ಟಡಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ಸುಭದ್ರವಾಗಿ ಕಟ್ಟಬೇಕು ಎಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಮಲೆನಾಡಿನ ಪ್ರದೇಶದ ಇರಿಗೇಷನ್ ಬಗ್ಗೆ ಹೇಳುವುದಾದರೆ ನಮ್ಮ ಭಾಗದಲ್ಲಿ ಹೆಚ್ಚು ಹೊಳೆಗಳು ಇಲ್ಲ, ಸಣ್ಣ ಸಣ್ಣ ತೊರೆಗಳನ್ನು ಕಟ್ಟಿ ಆ ಮುಖಾಂತರ ಸಣ್ಣ ಸಣ್ಣ ನೀರಾವರಿಗಳನ್ನು ಮಾಡಿದರೆ ಅದರಿಂದ ಅಲ್ಲಿನ ಜನತೆಗೆ ಪ್ರಯೋಜನವಾಗುತ್ತದೆ. ಈಗ ಈ ಸಣ್ಣ ನೀರಾವರಿ ಬಾಬಿಗೆ ಇಟ್ಟಿರತಕ್ಕಂಥಾ ಹಣ ಅಲ್ಪವಾಗಿದೆ, ಅದನ್ನು ಹೆಚ್ಚಿಸಬೇಕೆಂದು ಹೇಳುತ್ತೇನೆ. ನಮ್ಮ ಭಾಗದಲ್ಲಿ ಸಣ್ಣ ಸಣ್ಣ ನೀರಾವರಿ ಕೆಲಸಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಮಾನ್ಯ ಮಂತ್ರಿಯವರನ್ನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಮಲೆನಾಡಿನ ಪ್ರದೇಶದಲ್ಲಿ ಬೇಕಾದಷ್ಟು ಇರಿಗೇಷನ್ ಟ್ಯಾಂಕ್ಸ್ ಮಾಡಬಹುದು. ಮಾಡಿದರೆ ಬಹಳ ಅನುಕೂಲವಾಗುತ್ತದೆ. ನೂರಾರು ವರ್ಷಗಳಿಂದ ಇರತಕ್ಕಂಥಾ ದೊಡ್ಡ ದೊಡ್ಡ ಟ್ಯಾಂಕ್‌ಗಳನ್ನು ರಿಪೇರಿ ಮಾಡಿದರೆ ಹೆಚ್ಚಿನ ಅನುಕೂಲವಾಗುತ್ತದೆ. ಅವನ್ನು ರಿಪೇರಿ ಮಾಡುವುದಕ್ಕೆ ಹೋಗುವುದಿಲ್ಲ, ಅಲ್ಲದೆ ಹೊಸ ಟ್ಯಾಂಕ್‌ಗಳನ್ನೂ ಸಹ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ವೇಳೆ ಹೊಸ ಟ್ಯಾಂಕ್‌ಗಳನ್ನು ಮಾಡಿದರೂ ಕೂಡ ಅದು ೨-೩ ವರ್ಷದಲ್ಲೇ ಹಾಳಾಗಿ ಯಾವ ಪ್ರಯೋಜನಕ್ಕೂ ಬರುವುದಿಲ್ಲ. ನಾನು ನಿಜವಾಗಿಯೂ ಹೇಳಬೇಕಾದರೆ ಯಾವುದೇ ವಿಷಯದಲ್ಲಾಗಲಿ ಕ್ರಮಬದ್ಧವಾದ ಒಂದು ಆಡಳಿತವನ್ನು ಮಾಡಬೇಕು. ಕ್ರಮಬದ್ಧವಾಗಿ ಆಡಳಿತ ಮಾಡಿ ಎಲ್ಲಾ ವ್ಯವಸ್ಥೆಯನ್ನೂ ಒಳ್ಳೆಯ ರೀತಿಯಲ್ಲಿ ತಂದರೆ ಖಂಡಿತವಾಗಿಯೂ ನಮ್ಮ ದೇಶ ಉದ್ಧಾರವಾಗುತ್ತದೆ. ಅಭಿವೃದ್ಧಿ ಆಗಲಿಕ್ಕೆ ಸಾಧ್ಯ. ಅದನ್ನು ಮನಸ್ಸಿಗೆ ಹಚ್ಚಿಕೊಳ್ಳುತ್ತಾ ಇಲ್ಲ. ನಮ್ಮ ದೇಶ ಇಂಥ ಪರಿಸ್ಥಿತಿಗೆ ಬಂದಿದೆ. ತಮಗೆ ಹೇಳಬೇಕಾದರೆ ಎಲ್ಲಿ ಟ್ಯಾಂಕ್ ಕಟ್ಟಬೇಕೋ ಅಲ್ಲಿ ಕಟ್ಟುತ್ತಾ ಇಲ್ಲ, ಯಾವುದೋ ಒಂದು ಇನ್‌ಫ್ಲೂಯನ್ಸ್‌ನಿಂದ ಟ್ಯಾಂಕನ್ನು ಕಟ್ಟುತ್ತಾರೆ. ಅಲ್ಲಿ ನೀರೇ ಬರುವುದಿಲ್ಲ. ಎಲ್ಲಿ ನೀರುತ್ತದೆ, ಯಾವ ಏರಿಯಾವನ್ನು ಡೆವಲಪ್ ಮಾಡಬೇಕೋ ಅಲ್ಲಿ ಕೆಲಸ ಮಾಡುವುದಿಲ್ಲ. ನೀರು ಇಲ್ಲದೇ ಇರುವ ಕಡೆ ಟ್ಯಾಂಕ್ ಕಟ್ಟುತ್ತಾರೆ, ಅಲ್ಲಿ ನೋಡಿದರೆ ನೀರೆ ಬತ್ತಿ ಹೋಗಿರುತ್ತದೆ. ಇಂಥಾದ್ದಕ್ಕೆ ಬಹಳಷ್ಟು ಹಣವನ್ನು ಖರ್ಚು ಮಾಡಿ ನಷ್ಟ ಮಾಡಿಕೊಳ್ಳುತ್ತಾರೆ. ಯಾವ ಏರಿಯಾ ಡೆವೆಲಪ್ ಆಗುತ್ತದೆ ಅಂಥಾ ಕಡೆ ಸರ್ಕಾರದವರು ಗಮನಹರಿಸಿ ಕೆಲಸ ಮಾಡಬೇಕು ಇಲ್ಲದೇ ಹೋದರೆ ದೇಶವನ್ನು ಒಳ್ಳೆಯ ರೀತಿಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವೇ ಇಲ್ಲ. ತಮಗೆ ಈ ಸಂದರ್ಭದಲ್ಲಿ ಒಂದು ಉದಾಹರಣೆ ಹೇಳುತ್ತೇನೆ ಇವರಲ್ಲಿ ರಾಜಕೀಯ ಬೆಳೆಸುತ್ತಾರೆಂದು ಹೇಳಿದರೆ ತಪ್ಪಾಗಲಾರದು. ನಮ್ಮ ಕೊಡಗಿನ ಒಂದು ಕೆಲಸದ ಬಗ್ಗೆ ಹೇಳುವುದಾದರೆ ಮಾನ್ಯ

ಜೀವಿಜಯ ಅವರು ತಪ್ಪು ತಿಳಿದುಕೊಳ್ಳಬಾರದು ' ಸೋಮವಾರಪೇಟೆ ತಾಲ್ಲೂಕಿನಲ್ಲಿ ಸರ್ಕಾರದವರು ಯಾವ ರೀತಿಯಾಗಿ ಅದಕ್ಕೆ ಪ್ರಾಮುಖ್ಯತೆಕೊಟ್ಟು ಕೆಲಸ ಮಾಡುತ್ತಾರೋ ಅದೇ ರೀತಿಯಾಗಿ ಮಡಕೇರಿ ಭಾಗದಲ್ಲೂ ಕೂಡ ಆದ್ಯತೆ ಕೊಟ್ಟು ಕೆಲಸ ಮಾಡಬೇಕು. ಒಂದೊಂದು ಕಡೆ ಒಂದೊಂದು ರೀತಿ ಮಾಡಬಾರದು. ರಾಜಕೀಯ ಬೆಳಸಬಾರದು.

ಶ್ರೀ ಬಿ.ಎ. ಜೀವಿಜಯ.—ಅವರ ಕಾಲದಲ್ಲೇ ವಿರಾಜಪೇಟೆ, ಮಡಕೇರಿ, ಭಾಗದಲ್ಲಿ ಕೇವಲ ೧–೧½ ಕೋಟಿರೂಪಾಯಿ ಕಾಮಗಾರಿ ಕೆಲಸಗಳನ್ನು ಮಾಡಿಸಿದ್ದು. ಜನತಾ ಸರ್ಕಾರ ಬಂದಮೇಲೆ 4½ ಕೋಟಿ ರೂಪಾಯಿ ಅಲ್ಲಿ ಖರ್ಚು ಮಾಡಿದ್ದೇವೆ. ಮಾನ್ಯ ಸದಸ್ಯರು ತಾರತಮ್ಯ ತೋರಿಸುತ್ತಾರೆ ಅಂತ ಏನು ಹೇಳುತ್ತಾರೆ, ಅದು ಸತ್ಯಕ್ಕೆ ದೂರವಾದ ಮಾತು.

ಶ್ರೀ ಡಿ.ಎ. ಚಿನ್ನಪ್ಪ.—ನಾನು ತಾರತಮ್ಯ ಅನ್ನುವ ಭಾವನೆಯಿಂದ ಏನೂ ಹೇಳಲಿಲ್ಲ ಸರ್ಕಾರ ಸೋಮವಾರ ಪೇಟೆಗೆ ಎಷ್ಟು ಪ್ರಾಮುಖ್ಯತೆ ಕೊಟ್ಟಿದೆಯೋ ಅಷ್ಟೇ ಪ್ರಾಮುಖ್ಯತೆ ಬೇರೆ ಕಡೆಯೂ ಕೊಡಬೇಕು. ಎಂದು ಹೇಳಿದೆ. ಅವರಿಗೆ ಜಾಸ್ತಿ ಕೊಟ್ಟಿದೆ ಇವರಿಗೆ ಕಡಿಮೆ ಕೊಟ್ಟಿದೆ ಎನ್ನುವುದನ್ನು ಬರೀ ಲೆಕ್ಕದಲ್ಲಿ ಹೇಳಬಹುದು. ಈಗ ನಮ್ಮಲ್ಲಿ ೨ ಲಕ್ಷ ೪೦ ಸಾವಿರ ರೂಪಾಯಿ ಖರ್ಚು ಮಾಡಿ ಆಸ್ಪತ್ರೆ ಕಟ್ಟುತ್ತಾ ಇದ್ದಾರೆ ಮಡಕೇರಿಯಲ್ಲಿ ಕಟ್ಟತಕ್ಕಂಥ ಹಾಸ್ಪಿಟಲ್ ಏನು ಇದೆ ಅದು ಇಡೀ ಕೊಡಗಿಗೆ ಮಡಕೇರಿಯನ್ನೂ ಸೇರಿಸಿ ಕಟ್ಟತಕ್ಕಂಥಾ ಹಾಸ್ಪಿಟಲ್‌ಗೆ ೪ ಕೋಟಿ ರೂಪಾಯಿ ಖರ್ಚಾಗುತ್ತದೆ. ತಾವು ಇತರೆ ಕೆಲಸ ಕಾರ್ಯಗಳನ್ನು ಎಲ್ಲೆಲ್ಲಿಗೆ ಎಷ್ಟೆಷ್ಟು ಖರ್ಚು ಮಾಡಿದ್ದೀರಿ ಅನ್ನುವುದನ್ನು ನೋಡಿದರೆ ಗೊತ್ತಾಗುತ್ತದೆ. ನಾನು ಈ ಬಗ್ಗೆ ಒಂದು ಉದಾಹರಣೆ ಕೊಟ್ಟೆ ಅಷ್ಟೆ, ಬರೀ ಕೊಡಗಿನ ವಿಷಯ ಅಲ್ಲ. ಎಲ್ಲಾ ಕಡೆಗೂ ಸರ್ಕಾರದವರೂ ಸರಿಸಮಾನಾಗಿ ಹಂಚತಕ್ಕಂಥ ಒಂದು ವ್ಯವಸ್ಥೆ ಮಾಡಬೇಕು ಒಂದೊಂದು ಕಡೆ ಒಂದೊಂದು ತರಹ ಮಾಡಬಾರದು ಅಂತ ಹೇಳಿದ್ದು.

ಶ್ರೀ ಬಿ. ಎ. ಜೀವಿಜಯ.—ನೀವು ಪ್ರಯತ್ನ ಪಡಬೇಕಾಗಿತ್ತು. ಪ್ರಯತ್ನ ಮಾಡದೇ ಹೋದರೆ ಹೇಗೆ ಆಗುತ್ತದೆ.

ಶ್ರೀ ಡಿ.ಎ. ಚಿನ್ನಪ್ಪ.—ನಾನು ಈ ಬಗ್ಗೆ ಎಷ್ಟರಮಟ್ಟಿಗೆ ಪ್ರಯತ್ನ ಪಟ್ಟಿದ್ದೆ ಎನ್ನುವುದು ಅವರಿಗೂ ಗೊತ್ತಿದೆ. ಆದರೆ ಅದು ಸಾಲದು. ನೀವಾದರೂ ಕೂಡ ನಮ್ಮ ಭಾಗದ ನೀರಾವರಿ ಕೆಲಸಗಳನ್ನು ತೆಗೆದುಕೊಳ್ಳುವ ಹಾಗೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ..

ಇನ್ನು ನಮ್ಮಲ್ಲಿ ಹಾರಂಗಿ ಪ್ರಾಜೆಕ್ಟ್ ಏನು ಇದೆ ಅದನ್ನು ತೆಗೆದುಕೊಂಡು ಕೆಲಸ ಮಾಡಿದರೆ ಇನ್ನೂ ೫ ಸಾವಿರ ಎಕರೆಗೆ ನೀರು ಕೊಡಬಹುದು. ಈಗ ಏನಾಗಿದೆ ಎಂದರೆ ಈಗ ನಮ್ಮ ಕೊಡಗಿಗೆ ಎರಡನೇ ಬೆಳೆ ಮಾಡುವುದಕ್ಕೆ ಅಲ್ಲಿಂದ ನೀರು ಕೊಡುತ್ತಾ ಇಲ್ಲ. ತಾವು ಎರಡನೇ ಬೆಳೆಗೆ ನೀರನ್ನು ಕೊಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮಲ್ಲೇ ಹುಟ್ಟಿ ಹರಿಯುವಂಥಾ ಕಾವೇರಿ ನೀರು ಏನು ಇದೆ ಅದರಿಂದ ನಮಗೆ ಸ್ವಲ್ಪವಾದರೂ ಪ್ರಯೋಜನವಾಗಬೇಕು. ಈಗ ಪ್ರಯೋಜನವಾಗುತ್ತಾ ಇಲ್ಲ. ಆದುದರಿಂದ ಈಗ ನಾನು ಮೊದಲೇ ಹೇಳಿದ ಹಾಗೆ ಈ ಹಾರಂಗಿ ಪ್ರಾಜೆಕ್ಟಿನಿಂದ ಎರಡನೇ ಬೆಳೆಗೆ ನೀರು ಕೊಡಿಸುವ ಹಾಗೆ ಮಾಡಿದರೆ ಸುಮಾರು ೪ ಸಾವಿರ ಎಕರೆಗೆ ಪ್ರಯೋಜನವಾಗುತ್ತದೆ. ಆ ರೀತಿ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಭಾಗದಲ್ಲಿರುವ ತಲಕಾವೇರಿ ಏನು ಇದೆ ಅದು ಒಂದು ಪ್ರಸಿದ್ಧವಾದ ಸ್ಥಳ ? ಅಲ್ಲಿಗೆ ಹೋಗುವ ರಸ್ತೆ ನೋಡಿದರೆ ಯಾವ ಮನುಷ್ಯನೂ ಹೋಗುವುದಕ್ಕಾಗುವುದಿಲ್ಲ. ದೊಡ್ಡ ದೊಡ್ಡ ಬಸ್ಸುಗಳೂ ಸಹ ಹೋಗುವುದಕ್ಕಾಗುವುದಿಲ್ಲ. ಅಲ್ಲಿಗೆ ಯಾರಾದರೂ ಯಾತ್ರಿಕರು ಹೋಗಬೇಕಾದರೆ ನಡೆದುಕೊಂಡು ಹೋಗ ಬೇಕಾಗುತ್ತದೆ. ಆ ರಸ್ತೆಯನ್ನು ದೊಡ್ಡದು ಮಾಡಿ, ನ್ಯಾಷನಲ್ ಹೈವೇ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. ಹಾಗೆ ಮಾಡುವುದರಿಂದ ನಮಗೆ ಉತ್ಪತ್ತಿಯೂ ಬರುತ್ತದೆ. ಇನ್ನೂ ಹೆಚ್ಚು ಯಾತ್ರಿಕರೂ ಸಹ ಹೋಗುತ್ತಾರೆ. ತಲಕಾವೇರಿ ನದಿಯಲ್ಲಿ ಎಲ್ಲರೂ ಹೋಗಿ ಪುಣ್ಯ ಸ್ನಾನ ಮಾಡುತ್ತಾರೆ. ಹೀಗಿರುವಾಗ ಅಲ್ಲಿಗೆ ಹೋಗುವ ಯಾತ್ರಿಕರ ಅನುಕೂಲಕ್ಕಾಗಿ ಸರಿಯಾಗಿ ರಸ್ತೆ ಮಾಡದೇ ಹೋದರೆ ಬರಿ ಕೊಡಗಿಗೆ ಮಾತ್ರವಲ್ಲ. ಇಡೀ ಕರ್ನಾಟಕಕ್ಕೆ ಅನ್ಯಾಯವಾಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಅಲ್ಲಿಗೆ ಹೆಚ್ಚಾಗಿ ತಮಿಳ್‌ನಾಡಿನಿಂದ ಯಾತ್ರಿಕರುಬರುತ್ತಾರೆ. ಆದುದರಿಂದ ಆ ರಸ್ತೆಯನ್ನು ನ್ಯಾಷನಲ್ ಹೈವೇ

ಆಗಿ ಪರಿವರ್ತನೆ ಮಾಡಬೇಕು. ಜೊತೆಗೆ ಸಣ್ಣ ಸಣ್ಣ ಸೇತುವೆಗಳನ್ನು ದೊಡ್ಡದನ್ನಾಗಿ ಮಾಡಬೇಕು. ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಹೇಳಬೇಕಾದರೆ ಕರ್ನಾಟಕದಲ್ಲಿ ಸರಿಯಾಗಿ ಅಭಿವೃದ್ಧಿಯಾಗಬೇಕಾದರೆ ಹೆಚ್ಚಿನ ಹಣವನ್ನು ಪಿ.ಡಬ್ಲ್ಯೂ.ಡಿ. ಯವರು ಇರಿಗೇಷನ್‌ಗೆ ಕೊಟ್ಟರೆ ಮಾತ್ರ ಈ ಕೆಲಸ ಆಗಲಿಕ್ಕೆ ಸಾಧ್ಯ. ತೆಗೆದುಕೊಂಡಂತ ಕೆಲಸಗಳನ್ನು ನಿಗದಿಯಾದ ಟೈಂ ಪ್ರಕಾರ ಸಮಯಕ್ಕೆ ಸರಿಯಾಗಿ ಮುಗಿಸಬೇಕು. ಎಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಹತ್ತಾರು ವರ್ಷಗಳಿಂದಲೂ ಕೂಡ ಮುಗಿಯದೇ ಇರತಕ್ಕಂಥ ಕೆಲಸಗಳು ಇವೆ. ಅವೊತ್ತಿನ ದಿವಸ ೧೦ ಲಕ್ಷ ರೂಪಾಯಿನ ಅಂದಾಜಿನಲ್ಲಿ ಆಗುತ್ತಿದ್ದ ಕೆಲಸ ಈವೊತ್ತು ಅದೇ ಕೆಲಸ ಮಾಡಿದರೆ ಒಂದು ಕೋಟಿ ರೂಪಾಯಿನವರೆಗೆ ಹೋಗುತ್ತದೆ. ಆದುದರಿಂದ ತೆಗೆದುಕೊಂಡಂಥ ಕೆಲಸವನ್ನು ಆದಷ್ಟು ಬೇಗ ಮುಗಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ನಾನು ಒತ್ತಾಯ ಮಾಡಿ, ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ॥ ಬಿ.ಎಂ. ತಿಪ್ಪೇಸ್ವಾಮಿ (ಬರಮಸಾಗರ).—ಮಾನ್ಯ ಅಧ್ಯಕ್ಷರೇ, ಈ ದಿವಸ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ಸ್ ಬೇಡಿಕೆಗಳ ಬಗ್ಗೆ ಕೆಲವು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ಎಲ್ಲಾ ಮಿತ್ರರೂ ಹೇಳಿದ ಹಾಗೆ ನೀರಾವರಿ ರೋಡ್ಸ್, ಬಿಲ್ಡಿಂಗ್ಸ್, ಡ್ರೈನೇಜ್ ನ್ಯಾವಿಗೇಷನ್ ಮತ್ತು ಇನ್ನೂ ಕೆಲವು ಐಟಂಸ್ ಈವೊತ್ತಿನ ಬೇಡಿಕೆಯಲ್ಲಿ ಇದೆ. ನನ್ನಲ್ಲಿ ಕಾಮಗಾರಿ ಇಲಾಖೆಯ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದೇ ಹೋದರೆ ಅದರ ವಿಚಾರದಲ್ಲಿ ಕೆಲವಾರು ವಿಷಯಗಳನ್ನು ನಾನು ತಿಳಿದುಕೊಂಡಿದ್ದೇನೆ. ನೀರಾವರಿ ಬಗ್ಗೆ ಹೇಳುವುದಾದರೆ ಸರ್ಪ್ಲಸ್ ವಾಟರ್ ಮತ್ತು ಅಂಡರ್ ಗ್ರೌಂಡ್ ವಾಟರನ್ನು ಸರಿಯಾಗಿ ಉಪಯೋಗಿಸಿಕೊಂಡಿದ್ದರೆ ನಮ್ಮ ದೇಶದ ಸಂಪತ್ತನ್ನು ಹೆಚ್ಚಿಸಬಹುದಾಗಿತ್ತು ಎಂದು ತಿಳಿದುಕೊಂಡಿದ್ದರೂ ಸಹ ಈ ಸರ್ಪ್ಲಸ್ ವಾಟರ್ ಅನ್ನು ಉಪಯೋಗಿಸಿಕೊಳ್ಳುವುದಕ್ಕೆ ನಮಗೆ ಅವಕಾಶವಾಗಲಿಲ್ಲ, ಕಾರಣ ದುಡ್ಡು ಇಲ್ಲದೇ ಇರುವುದರಿಂದ. ಇನ್ನು ಅಂಡರ್ ಗ್ರೌಂಡ್ ವಾಟರ್ ಬಗ್ಗೆ ಏನು ಯೋಚನೆ ಮಾಡಿದ್ದಾರೆ ? ಇದರ ಬಗ್ಗೆ ನಾನು ಹೆಚ್ಚು ಮಾತನಾಡಲಿಕ್ಕೆ ಇಷ್ಟಪಡುವುದಿಲ್ಲ ನಾನು ಈವಾಗ ಬರೇ ಕಮ್ಯೂನಿಕೇಷನ್ ಮತ್ತು ಬಿಲ್ಡಿಂಗ್ಸ್ ಬಗ್ಗೆ ಮಾತ್ರ ಹೇಳುತ್ತೇನೆ. ನಾನು ರಾಯಚೂರಿನ ಒಂದು ಪಿ.ಡಬ್ಲ್ಯೂ. ಡಿ. ಕ್ವಾರ್ಟರ್ಸ್‌ಗೆ ಹೋದಾಗ ಅಲ್ಲಿ ಒಂದು ಮನೆ ಸೋರುತ್ತಾ ಇತ್ತು. ಅದರಲ್ಲಿ ಯಾರು ಇರುವುದೆಂದರೆ ನಮ್ಮ ಸ್ನೇಹಿತರು ಡಾಕ್ಟರ್. ಇದೇನು ಸೋರುತ್ತಾ ಇದೆಯಲ್ಲಾ ಅಂತ ಕೇಳಿದರೆ ಮಳೆ ಬಂದಿದೆ ಅದಕ್ಕೆ ಸೋರುತ್ತದೆ, ಬೇಸಿಗೆ ಕಾಲದಲ್ಲಿ ಮಾತ್ರ ಯಾವ ಬಿಲ್ಡಿಂಗ್ ಸಹ ಸೋರುತ್ತಾ ಇಲ್ಲ ಎಂದು ಹೇಳಿದರು. ಇವತ್ತು ಇಲಾಖೆಯವರು ಯಾವ ಕೆಲಸವನ್ನೇ ನೋಡಲಿ ಅದನ್ನು ತೆಗೆದುಕೊಂಡರೆ ಶ್ರದ್ಧೆಯಿಂದ ಮಾಡುತ್ತಾ ಇರುವುದು ಎಲ್ಲೂ ಸಹ ಕಾಣುತ್ತಾ ಇಲ್ಲ. ಇನ್ನು ಇದರ ಬಗ್ಗೆ ಹೆಚ್ಚಿಗೆ ಮಾತನಾಡಿದರೆ ಪ್ರಯೋಜನವಿಲ್ಲ. ನನಗೆ ಸಂಬಂಧಪಟ್ಟದ್ದು ಇದು. ಈ ಕಮ್ಯುನಿಕೇಷನ್ ಬಗ್ಗೆ ಒಂದೇ ಒಂದು ವಿಷಯನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. In the Report of the Working Group on the Development of Scheduled Casts and Scheduled Tribes during the Seventh Five Year Plan, (i.e., 1985–90), it has been stated thus:—

"**Link Roads.**—It is generally noticed that the Scheduled Castes localities have kutcha roads without proper arrangement for drainage. They are prone to have stagnant water during rainy season. This is responsible for not only high incedence of diseases like Malaria and Fileria but also further deterioration of the already unhygenic etmosphere in the Scheduled Castes localities. It is therefore imperative that Pucca streets should be constructed in the Scheduled Castes colonies and localities and they should be connected with the main village or the nearest road through link roads, so that the fruits of the development should not be denied to them.

In the village which has already been linked with the main road or nearest road to Scheduled Castes localities unconnected link roads leading to these localities should be constructed on priority basis.

In any case, by the end of Seventh Five year Plan, the link road should be constructed under NREP also".

ಸ್ಪೆಷಲ್ ಕಾಂಪೋನೆಂಟ್ ಸ್ಕೀಮಿನ ಬಗ್ಗೆ ನಾನು ಗುಲ್ಬರ್ಗ ಡಿವಿಜನ್ ೪ ಜಿಲ್ಲೆಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್ ವೆಲ್‌ಫೇರ್ ಕಮಿಟಿ ಛೇರ್ಮನ್ನಾಗಿ ಪ್ರವಾಸ ಮಾಡುವಾಗ ವಿಚಾರ ಮಾಡಿದ್ದೇನೆ. Regarding approach roads to Harijan wadies, during the year 1983-84, a new Scheme is launched to construct the approach roads to Harijan Wadis under the Special Component plan. The amount spent during the year 1983-84 was Rs. 2.10 Crores, during 1984-85 Rs. 2.15 Crores; and during 1985-86 Rs. 2,50 Crores is estemated. They have constructed 110 kms roads during 1983-84, 190 kms during 1984-85 and the distance during 1985-86 is not mentioned. I have gone to the villages where these Harijan wadas roads are constructed. The main road or straight roads which connects to the village go up to the village border only and the Harijan Colony is not touched. So. the link road means, straight roads going to the village; at the entrance of the village, the road stops. For that, they have spent Rs. 2 lakhs or Rs. 1.5 lakhs, like that.

I have told in the Party meeting also that in Karnataka, the question of link road does not arise, because these Harijan Wada roads and these link roads were the outcome of interior U.P., Bihar, parts of Orissa where when a Harijan girl is married, for the first time she is sent to her husband's house in a bullock cort and the jets and Takur's could not tolerate a Harijan girl being travelled in a bullock cart and therefore thesr roads were narrow strips and they just wanted them to walk and for that the Central Government wanted that these roads should widened, made pacca roads and they have given the specifications, They have said that the measurements, cement, jelly and sand etc., to be used will be in proportion to what they usually used for the main national highway roads. The Harijan wadi roads are badly in need for repairs in Northern India. In Karnataka, Andhra and in South India, I don't think any village is detatched from the main road particularly Harijan wadas. Under these circumstances, we have spent Rs. 6.75 Crores during the last three years for the construction of these link roads in the name of Special Component Scheme. How can this will help the Harijans? The main purpose of this Special Component Scheme is to improve the economic conditions of the Harijans, to improve the health of Harijans, to improve the nutrition of the Harijans and by creating link roads

nd main roads or a road from the main road to the Harijan wadi, how can this will help the health of the SCs/STs? Therefore it has been budgetted, it has been executed and now we have spent already Rs. 6.75 Crores on these Harijan wada roads or link roads. I would request the Hon'ble Public Works Minister to look into this. I don't mind of spending Special Component Plan money but it should not be in the name of SCs, and let it be for general issue. In the name of SCs this amount i.e., Rs. 6.75 Crores has been spent and I have gone to some villages where they have constructed bridges on the main road & they have constructed main roads under Special Component Scheme and I asked one Executive Engineer, "What is this you have done". ಯಾವುದರಲ್ಲೂ ದುಡ್ಡು ಸಿಕ್ಕಲಿಲ್ಲ ಅದಕ್ಕೆ ಇದರಲ್ಲಿ ಹಾಕಿದ್ದೇವೆ ಎಂದು ಹೇಳಿದರು. This is the way, the special money under the Special Component Plan is being spent. I will be very much appreciated if this is taken into consideration and see that the Harijan localities are improved, drainage is improved, and roads are made in the Harijan colonies it self not the main straight roads. I feel there is a lacuna on the part of the people and the Government also should look into this and verify. I have seen only one division i.e., four districts and I have gone to four places where Harijan wada roads are constructed. Kindly look into this one also.

SRI B. BASAVALINGAPPA.- To help his argument, I would like to say that this year, the Central Government's contribution is Rs, 10.45 Crores for this purpose on which he is now speaking. Therefore, you just continue your argument. Rs. 10.45 Crores is provided.

DR. B.M. THIPPESWAMY.— I had a discussion with Sri H. Hanumanthappa, M.P., of Ckitradurga, one of the members of Harijan wada Roads Committee of Parliament in the D.C's Office, the other day, He said it is a national programme and the State Government has nothing to do with it and so we have to carry it out. Then, I told him, "I know the Harijan wadas in Bihar and the condition of the roads there and when it is applicable in northern India particularly in Bihar or U.P. why it cannot be applicable in Karnataka or Andhra." I think necessary adjustment will have to be made in this regard.

With these words, I thank the Chair and conclude my speech.

೪-೨೦ ಪಿ. ಎಂ.

†ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೆ, ಈ ಲೋಕೋಪಯೋಗಿ ಇಲಾಖೆ ಬಹಳ ಮುಖ್ಯವಾದಂಥ, ಇಲಾಖೆ ಎನ್ನುವುದನ್ನು ನಾವು ಒತ್ತಿ ಹೇಳಲೇಬೇಕಾದ ಪ್ರಮೇಯ ಇಲ್ಲ. ರಾಜ್ಯದ ಜನತೆಯ ಜೀವನಮಟ್ಟವನ್ನು ಉತ್ತಮಗೊಳಿಸಬೇಕಾದರೆ ಅದರಲ್ಲೂ ಮುಖ್ಯವಾಗಿ ರೈತ ಸಮುದಾಯದ ಜೀವನಮಟ್ಟವನ್ನು ಉತ್ತಮಗೊಳಿಸಬೇಕಾದರೆ ಲೋಕೋಪಯೋಗಿ ಇಲಾಖೆ ಕೆಲಸ ಮತ್ತು ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡುವುದು ಬಹಳ ಮುಖ್ಯ. ಆದ್ದರಿಂದ ಅತೀ ದೊಡ್ಡ ಪ್ರಮಾಣದಲ್ಲಿ ಈ ಬಗ್ಗೆ ಆದ್ಯತೆ ಕೊಡಬೇಕು. ಇದರ ಜೊತೆಗೆ ವಿದ್ಯುಚ್ಛಕ್ತಿಗೂ ಆದ್ಯತೆ ಕೊಡಬೇಕೆನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನನಗೆ ತಿಳಿದಮಟ್ಟಿಗೆ ಅನೇಕ ವರ್ಷಗಳಿಂದ ಈ ವಿಚಾರಗಳ ಬಗ್ಗೆ ವಿಧಾನ ಸಭೆಯಲ್ಲಿ, ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಿದೆ. ಯಾರು ಯಾರು ಈ ಯೋಜನೆಗಳನ್ನು ತಯಾರು ಮಾಡುತ್ತಾರೆ, ಧೋರಣೆಗಳನ್ನು, ನೀತಿ ನಿರೂಪಣೆ ಮಾಡುತ್ತಾರೆ, ಅವರೆಲ್ಲರೂ ಈ ಅಂಶವನ್ನು ಒಪ್ಪಿಕೊಂಡಿದ್ದಾರೆ. ಮುಖ್ಯವಾಗಿ ನೀರಾವರಿ ಯೋಜನೆಗಳು, ಲೋಕೋಪಯೋಗಿ ಇಲಾಖೆಯಲ್ಲಿ ಆಗತಕ್ಕ ಕೆಲಸ, ವಿದ್ಯುಚ್ಛಕ್ತಿ ಇವೆಲ್ಲಕ್ಕೂ ದೊಡ್ಡ ಪ್ರಮಾಣದಲ್ಲಿ ಆದ್ಯತೆ ಕೊಡಬೇಕೆಂದು ಹೇಳುವುದನ್ನು ಪ್ರತಿಯೊಬ್ಬರೂ ಒಪ್ಪಿಕೊಳ್ಳುತ್ತಾರೆ. ಪ್ರಶ್ನೆ ಏನು ಅಂದರೆ ನಮ್ಮ ರಾಜ್ಯದಲ್ಲಿ ಕಾರ್ಯ ಎಷ್ಟು ದೂರ ಆಗಿದೆ ಎಂಬುದು. ಜನತಾ ಪಕ್ಷದ ಸರ್ಕಾರ ಬಂದಮೇಲೆ ಮಾನ್ಯ ದೇವೇಗೌಡರು ಅಧಿಕಾರ ವಹಿಸಿಕೊಂಡಮೇಲೆ ಅದು ಎಷ್ಟು ದೂರ ಜಾರಿಗೆ ಬಂದಿದೆ ಅದು ಮುಖ್ಯವಾದ ಅಂಶ. ಬೇರೆ ವಿಷಯಗಳ ಬಗ್ಗೆ ನಮ್ಮ ಮಾನ್ಯ ಮೊಯ್ಲಿಯವರು ಪ್ರಸ್ತಾಪ ಮಾಡಿದ್ದಾರೆ. ಅನೇಕ ಅಂಕಿಅಂಶಗಳನ್ನೂ ಕೂಡ ಕೊಟ್ಟಿದ್ದಾರೆ. ಅದೇ ಅಂಕಿ ಅಂಶಗಳನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ, ಮಾನ್ಯ ದೇವೇಗೌಡರು ಲೋಕೋಪಯೋಗಿ ಇಲಾಖೆ ಅಧಿಕಾರ ವಹಿಸಿಕೊಂಡಮೇಲೆ ಚುರುಕುಗೊಳಿಸಲಿಕ್ಕೆ ಪ್ರಯತ್ನಪಟ್ಟಿದ್ದಾರೆಂದು ಒಪ್ಪಿಕೊಂಡರೂ ಸಹ ಎಷ್ಟು ದೂರ ಕಾರ್ಯಗತ ಮಾಡಬೇಕಾಗಿತ್ತೋ ಅಷ್ಟು ದೂರ ಕಾರ್ಯಗತ ಮಾಡುವುದರಲ್ಲಿ ವೈಫಲ್ಯತೆಯನ್ನು ಪ್ರದರ್ಶಿಸಿದ್ದಾರೆ. ಅದರ ಬಗ್ಗೆ ನಾನು ಕೆಲವೊಂದು ಅಂಕಿ ಅಂಶಗಳನ್ನು ಕೊಡಬೇಕಾಗುತ್ತದೆ ಅದನ್ನು ನಾನು ಕೊಡುತ್ತೇನೆ. ಈ ಕಡೆಯ ಕಾಂಗ್ರೆಸ್ ಮಿತ್ರರು ಏನಾದರೂ ಹೇಳಿದರೆ, ನಿಮಗಿಂತಲೂ ನಾವು ಜಾಸ್ತಿ ಮಾಡಿದ್ದೇವೆಂದು ಉತ್ತರ ಹೇಳುತ್ತೀರಿ. ಇಲ್ಲ ನಾವು ಜಾಸ್ತಿ ಮಾಡಿದ್ದೇವೆಂದು ಇವರು ವಾದ ಮಾಡುತ್ತಾರೆ. ಇದರಿಂದ ನಮಗೆ ಏನಾಗಿದೆ ಅಂದರೆ ನಿಜಾಂಶ ಕಂಡುಹಿಡಿಯುವುದೇ ತೊಂದರೆಯಾಗಿದೆ. ೧೯೭೧ನೇ ಇಸವಿಯಲ್ಲಿ ಇದ್ದಂಥ ಪರಿಸ್ಥಿತಿ ೧೯೮೩-೮೪ರಲ್ಲಿ ಇರಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಅದೇ ಆಧಾರದ ಮೇಲೆ ತುಲನೆ ಮಾಡಲಿಕ್ಕೆ ಸಾಧ್ಯವಿಲ್ಲ, ಇವತ್ತಿನ ಬೆಲೆಗಳು ನಾಳೆ ಇರುವುದಿಲ್ಲ. ಮೂಲಭೂತವಾಗಿ ಎಷ್ಟು ದೂರ ಇರಿಗೇಷನ್ ಪೊಟೆನ್‌ಷಿಯಲ್ ಕ್ರಿಯೇಟ್ ಮಾಡಬೇಕಾಗಿತ್ತು, ಎಷ್ಟು ದೂರ ಯುಟಿಲೈಸ್ ಮಾಡಿದ್ದೀರಿ ಎಂಬುದನ್ನು ಲೆಕ್ಕಾಚಾರ ಹಾಕಿದರೆ ಅದರಲ್ಲಿ ಬಹಳ ವ್ಯತ್ಯಾಸ ಕಂಡು ಬರುವುದಿಲ್ಲ. ಆಗಿನ ಕಾಲಕ್ಕೂ ಈಗಿನ ಕಾಲಕ್ಕೂ ವ್ಯತ್ಯಾಸವೇನೂ ಕಂಡುಬರುವುದಿಲ್ಲ ಎಂದು ನನ್ನ ಅಭಿಪ್ರಾಯ. ಮೊದಲನೆಯ ಅಂಶ ಅಂದರೆ ಈ ಯೋಜನೆಗಳಿಗೆ ಎಷ್ಟು ಹಣ ಇಟ್ಟಿದ್ದೀರಿ. ಅದು ಮುಖ್ಯವಾದ ಅಂಶ. ಅದರಲ್ಲಿ ನೀವು ಹಿಂದಿನದಕ್ಕಿಂತಲೂ ಜಾಸ್ತಿ ಇಟ್ಟಿದ್ದೇವೆ ಎನ್ನುವ ಅಭಿಪ್ರಾಯವನ್ನು ಕಳೆದ ಅಸೆಂಬ್ಲಿಯಲ್ಲಿ ಹೇಳಿದ್ದೀರಿ. ಕಳೆದ ಅಸೆಂಬ್ಲಿ ಭಾಷಣ ನೋಡಿದರೆ, ಮೈನರ್ ಇರಿಗೇಷನ್‌ಗೆ ಆಗಲಿ, ಮೇಜರ್ ಇರಿಗೇಷನ್‌ಗೆ ಆಗಲಿ, ನಾವು ಪ್ರತಿ ವರ್ಷ ಹಿಂದಿನದಕ್ಕಿಂತಲೂ ಜಾಸ್ತಿ ಇಡುತ್ತಿದ್ದೇವೆಂದು ಹೇಳಿದ್ದೀರಿ. ನೀವು ಕೊಟ್ಟಿರತಕ್ಕ ಅಂಕಿಅಂಶಗಳ ಪ್ರಕಾರ ಅದು ಕಂಡು ಬರುವುದಿಲ್ಲ. ಇದು ೧೯೮೫-೮೬ರ ಪರ್‌ಫಾರ್ಮೆನ್ಸ್ ಬಜೆಟ್ ನೋಡಿದರೆ ಅರ್ಥವಾಗುತ್ತದೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಹಳ ಮುಖ್ಯವಾದ ಯೋಜನೆ, ಈ ಬಗ್ಗೆ ಬೇಕಾದಷ್ಟು ಸಾರಿ ಹೇಳುತ್ತಲೇ ಬರುತ್ತಿದ್ದೇವೆ. ಅದರಲ್ಲಿ ಅಲೋಕೇಷನ್ ಎಷ್ಟಿದೆ? ೧೯೮೩-೮೪ರಲ್ಲಿ ಪ್ಲಾನ್‌ನಲ್ಲಿ ೨,೨೨೧.೭೪ ಲಕ್ಷ ರೂಪಾಯಿ ನಾನ್‌ಪ್ಲಾನ್‌ನಲ್ಲಿ ೨೦.೩೭ ಲಕ್ಷ ರೂಪಾಯಿ ಇದೆ. ರಿವೈಸ್ಡ್ ಎಸ್ಟಿಮೇಟ್ ೧೯೮೪-೮೫ರಲ್ಲಿ ಪ್ಲಾನ್ಡ್ ೨,೬೧೧.೦೦ಲಕ್ಷ ರೂಪಾಯಿ. ನಾನ್ ಪ್ಲಾನ್ಡ್‌ನಲ್ಲಿ ೨೬.೩೪ ಲಕ್ಷ ರೂಪಾಯಿ ಇದೆ. ಈ ವರ್ಷ ಪ್ಲಾನ್ಡ್‌ನಲ್ಲಿ ೨,೨೭೫.೦೦ ಲಕ್ಷ ರೂಪಾಯಿ ನಾನ್‌ಪ್ಲಾನ್ಡ್‌ನಲ್ಲಿ ೨೫.೪೯ ಲಕ್ಷರೂಪಾಯಿ. ಅಂದರೆ ಒಟ್ಟು ಈ ವರ್ಷ ಸುಮಾರು ೨.೩೦೦ ಲಕ್ಷ ರೂಪಾಯಿ ಆಗಿದೆ. ಇದು ಕಡಿಮೆಯಾಗಿದೆಯೇ ವಿನಹ ಜಾಸ್ತಿಯಾಗಿಲ್ಲ ಎಂಬುದು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ನೋಡಿದರೆ ಗೊತ್ತಾಗುತ್ತದೆ. ಕಳೆದ ವರ್ಷ ೨.೬೩೭ ಲಕ್ಷ ರೂಪಾಯಿ ಇದ್ದುದು, ಈ ವರ್ಷ ೨,೩೦೦ ಲಕ್ಷ ರೂಪಾಯಿ ಅಂದರೆ ಸುಮಾರು ೩೩೭ ಲಕ್ಷ ರೂಪಾಯಿ ಇಳಿಸಿದ್ದೀರಿ. ಇನ್ನು ಘಟಪ್ರಭಾ ಪ್ರಾಜೆಕ್ಟ್ ೩ನೇ ಸ್ಟೇಜ್‌ನಲ್ಲಿ ಏನಾಗಿದೆ ಎಂದರೆ ಬೇರೆ ವ್ಯತ್ಯಾಸ ಏನೂ ಇಲ್ಲವೇ ಇಲ್ಲ. ೧೯೮೩-೮೪ರ ಪ್ಲಾನ್ ೫೫೮.೯೪ ಲಕ್ಷ ರೂಪಾಯಿ ಇದೆ, ನಾನ್‌ಪ್ಲಾನ್ ೧೫೭.೩೯ ಲಕ್ಷ ರೂಪಾಯಿ ಇದೆ. ರಿವೈಸ್ಡ್ ಎಸ್ಟಿಮೇಟ್ ೧೯೮೪-೮೫ ಪ್ಲಾನ್ ೯೫೦.೦೦ ಲಕ್ಷ ರೂಪಾಯಿ ಇದೆ. ನಾನ್‌ಪ್ಲಾನ್ಡ್ ೨೦೬.೯೦ ಲಕ್ಷ ರೂಪಾಯಿ ಇದೆ. ಬಜೆಟ್

ಎಸ್ಟಿಮೇಟ್ ೧೯೮೫-೮೬ ಪ್ಲಾನ್ಸ್ ೯೫೦.೦೦ ಲಕ್ಷ ರೂಪಾಯಿ ಇದೆ. ನಾನ್‌ಪ್ಲಾನ್ಸ್ ೨೫೧.೭೨ ಲಕ್ಷ ರೂಪಾಯಿ ಇದೆ. ಅಂದರೆ ೧೯೮೪-೮೫ರಲ್ಲಿ ರಿವೈಸ್ಡ್ ಎಸ್ಟಿಮೇಟ್ ಎಷ್ಟಿದೆಯೋ ೧೯೮೫-೮೬ರ ಬಡ್ಜೆಟ್ ಎಸ್ಟಿಮೇಟ್ ಕೂಡ ಅಷ್ಟೇ ಇದೆ ನಾನ್‌ಪ್ಲಾನ್ಸ್‌ನಲ್ಲಿ ಸ್ವಲ್ಪ ವ್ಯತ್ಯಾಸ ಇದೆ. ಒಟ್ಟು ನೋಡಿದರೂ ಅಷ್ಟೇನೂ ಜಾಸ್ತಿ ಇದರಲ್ಲಿ ಕಾಣುವುದಿಲ್ಲ. ಅದೇರೀತಿ ಬೇರೆ ಯೋಜನೆಗಳನ್ನು ತೆಗೆದುಕೊಂಡರೆ ನೀವು ಹಿಂದೆ ಭಾಷಣದಲ್ಲಿ ಏನು ಹೇಳಿದ್ದೀರಿ ಆ ರೀತಿ ಹಣ ಒದಗಿಸಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಲೇಬೇಕಾಗಿದೆ. ಇದು ನೀವು ಕೊಟ್ಟಿರತಕ್ಕ ಪರ್‌ಫಾರ್‌ಮೆನ್ಸ್ ಬಡ್ಜೆಟ್ ಅಂಕಿಅಂಶದ ಪ್ರಕಾರವೇ ಸಾಬೀತು ಆಗುತ್ತದೆ. ಹಿಂದೆ ಮಾನ್ಯ ದೇವೇಗೌಡರು ಭಾಷಣ ಮಾಡುವಾಗ ಹೇಳಿದಂಥ ವಿಚಾರಗಳೆಲ್ಲಾ ಪ್ರಜಾವಾಣಿ ಕನ್ನಡಪ್ರಭ, ಪತ್ರಿಕೆಗಳಲ್ಲಿ ಬಂದಿದೆ. ಅದು ಬಡ್ಜೆಟ್ ಭಾಷಣದಲ್ಲಿಯೂ ಬಂದಿದೆ. ೧೯೮೪ರ ಜೂನ್ ಎಂಡ್ ಒಳಗಡೆ ತಾವು ೫೦ ಸಹಸ್ರ ಎಕರೆ ಇರಿಗೇಷನ್ ಪೊಟೆನ್‌ಷಿಯಲ್ ಜಾಸ್ತಿ ಮಾಡುತ್ತೇವೆಂದು ಹೇಳಿದ್ದಿರಿ, ಅದನ್ನು ಮಾಡಲಿಕ್ಕೆ ಆಗಿದೆಯೋ ? ಅದರ ಬಗ್ಗೆ ಮಾನ್ಯ ಲೋಕೋಪಯೋಗಿ ಖಾತೆ ಮಂತ್ರಿಗಳು ಉತ್ತರ ಹೇಳಬೇಕು. ನನಗೆ ತಿಳಿದಮಟ್ಟಿಗೆ ಆಗಿಲ್ಲ. ಇರಿಗೇಷನ್ ಪೊಟೆನ್‌ಷಿಯಲ್ ಯುಟಿಲೈಜೇಷನ್ ವಿಚಾರಕ್ಕೆ ಆಮೇಲೆ ಬರೋಣ. ನೀವು ಕೊಟ್ಟಂತಹ ಭರವಸೆ ಕಾರ್ಯಗತವಾಗಿಲ್ಲ. ಇದು ಅಪ್ಪರ್ ಕೃಷ್ಣಾ, ಬೇರೆ ಪ್ರಾಜೆಕ್ಟ್‌ಗಳನ್ನು ನೋಡಿದರೆ ಗೊತ್ತಾಗುತ್ತದೆ. ಇದೇ ಸಂದರ್ಭದಲ್ಲಿ ತಮ್ಮ ೧೯೮೪-೮೫ರ ರಿಪೋರ್ಟಿನಲ್ಲಿ ಏನು ಕೊಟ್ಟಿದ್ದೀರಿ ಎನ್ನುವುದನ್ನು ಹೇಳುತ್ತೇನೆ. ಸ್ಟೇಟ್‌ಮೆಂಟ್ ಷೋಯಿಂಗ್ ಫೈನಾನ್‌ಷಿಯಲ್ ಅಂಡ್ ಫಿಸಿಕಲ್ ಪ್ರೋಗ್ರಾಮ್ ಅಂಡ್ ಪ್ರೋಗ್ರೆಸ್ ಡ್ಯೂರಿಂಗ್ ೧೯೮೪-೮೫ ಅಂಡರ್ ಇಂಪಾರ್‌ಟೆಂಟ್ ಸ್ಕೀಮ್ ಎಂದು ಹೇಳಿದ್ದೀರಿ. ಅದರಲ್ಲಿ ಪ್ರೋಗ್ರಾಮ್ ಮತ್ತು ಪ್ರೋಗ್ರೆಸ್ ಹೇಳಿದ್ದೀರಿ. ಫೀಲ್ಡ್ ಇರಿಗೇಷನ್ ಚಾನಲ್ ಬಗ್ಗೆ ಒಂದೊಂದು ಯೋಜನೆಗಳ ವಿವರಗಳನ್ನು ಕೊಟ್ಟಿದ್ದೀರಿ, ಅದರಲ್ಲಿ ಅಪ್ಪರ್ ಕೃಷ್ಣಾ, ಮಲಪ್ರಭ, ಘಟಪ್ರಭ, ಕಾವೇರಿ, ತುಂಗಭದ್ರ, ಭದ್ರಾ ರಿಸರ್‌ವಾಯರ್ ಕೊಟ್ಟಿದ್ದೀರಿ. ಇದರಲ್ಲಿ ಫೈನಾನ್‌ಷಿಯಲ್ ಪ್ರೋಗ್ರಾಮ್ ಮತ್ತು ಹಣ ಖರ್ಚು ಮಾಡಿರುವುದು ತೆಗೆದುಕೊಂಡರೆ ಜಾಸ್ತಿಯಾಗಿದೆ, ಅದು ಜಾಸ್ತಿಯಾಗಲೇಬೇಕು. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಹಣ ಖರ್ಚು ಮಾಡಿರುವುದರಿಂದ ಫಿಸಿಕಲ್ ಟಾರ್‌ಗೆಟ್ ಜಾಸ್ತಿಯಾಗಿದೆ ಎಂದು ಹೇಳಿ ಆ ತೀರ್ಮಾನಕ್ಕೆ ಬರಲು ಸಾಧ್ಯವಾಗುವುದಿಲ್ಲ. ಈಗ ತಾವು ಇಲ್ಲಿ ಕೊಟ್ಟಿರತಕ್ಕ ಸ್ಟೇಟ್‌ಮೆಂಟ್‌ನಲ್ಲಿ ಯಾವ ಯಾವ ಪ್ರಾಜೆಕ್ಟ್‌ನಲ್ಲಿ ಎಷ್ಟೆಷ್ಟು ಹೆಕ್ಟೇರ್ಸ್ ಎನ್ನುವುದನ್ನು ಹೇಳಿದ್ದೀರಿ. ಆ ಪ್ರಕಾರ ನೋಡಿದರೆ ಅಪ್ಪರ್ ಕೃಷ್ಣ ೧೮,೪೦೦ ಪ್ರೋಗ್ರಾಮ್‌ನಲ್ಲಿ, ೧೭,೮೭೮ ಪ್ರೋಗ್ರೆಸ್ ಇದೆ. ಮಲಪ್ರಭಾ ಅಂಡ್ ಘಟಪ್ರಭಾ ೧೪,೨೨೦ ಪ್ರೋಗ್ರಾಮ್. ೭,೭೧೮ ಪ್ರೋಗ್ರೆಸ್, ಕಾವೇರಿ ಬೇಸಿನ್ ೧೪,೦೦೦ ಪ್ರೋಗ್ರಾಮ್ ೧೦,೩೩೦ ಪ್ರೋಗ್ರೆಸ್, ತುಂಗಭದ್ರ ೨,೦೨೦ ಪ್ರೋಗ್ರಾಮ್, ೨,೩೫೮ ಪ್ರೋಗ್ರೆಸ್. ಭದ್ರಾ ರಿಸರ್ ವಾಯರ್ ೮೦೫ ಪ್ರೋಗ್ರಾಮ್, ೨೦೬ ಪ್ರೋಗ್ರೆಸ್. ಎಲ್ಲಾ ಒಟ್ಟು ಟೋಟಲ್ ತೆಗೆದುಕೊಂಡರೆ ೪೯,೪೨೫ ಹೆಕ್ಟೇರ್ಸ್ ಪ್ರೋಗ್ರಾಮ್, ೩೯,೦೬೦ ಹೆಕ್ಟೇರ್ಸ್ ಪ್ರೋಗ್ರೆಸ್ ಇದೆ. ಈ ರೀತಿ ಪ್ರತಿಯೊಂದರಲ್ಲೂ ನಿಮ್ಮ ಪ್ರೋಗ್ರಾಂ ಎಷ್ಟಿದೆ ಅದರಲ್ಲಿ ನಿಮ್ಮ ಟಾರ್ಜೆಟ್ ಮುಟ್ಟುವುದಕ್ಕೆ ಬಹಳ ಕಷ್ಟವಾಗಿದೆ. ಅದನ್ನೆಲ್ಲಾ ನಾನು ಓದುವುದಕ್ಕೆ ಹೋಗುವುದಿಲ್ಲ. ನೀವು ಕೊಟ್ಟಿರತಕ್ಕ ಅಂಕಿಅಂಶಗಳ ಆಧಾರದ ಮೇಲೆ ನಿಮ್ಮ ಗುರಿಗೂ-ಸಾಧನೆಗೂ ಬಹಳ ವ್ಯತ್ಯಾಸವಿದೆ. ಅಚೀವ್‌ಮೆಂಟ್ಸ್ ಏನು ಆಗಿಲ್ಲ ಅಷ್ಟು ಮಾತ್ರ ಹೇಳುತ್ತಿದ್ದೇನೆ. ಅದೇರೀತಿ ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ, ಇದು ಬಹಳ ಮುಖ್ಯವಾದ ವಿಷಯ.

ಅಧ್ಯಕ್ಷರು.—ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಶುರುಮಾಡಿ ಈಗಾಗಲೇ ೧೦ ನಿಮಿಷಗಳಾಗಿವೆ. ನಿಮ್ಮ ಪಕ್ಷದವರಿಗೆ ಜಾಸ್ತಿ ಸಮಯವನ್ನು ಕೊಡಲಾಗಿದೆ. ತಾವು ಎರಡು ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರು ಬಹಳ ಕಟ್ಟುನಿಟ್ಟಾಗಿ ಹೋಗುತ್ತಿದ್ದೀರಿ ಬಹಳ ಸಂತೋಷ. ಅವರು ಪಾರ್ಟಿಯ ಲೀಡರ್ ಇದ್ದಾರೆ ಅವರಿಗೆ ಮಾತನಾಡಲಿಕ್ಕೆ ಜಾಸ್ತಿ ಸಮಯ ಕೊಡಿ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಹಿರಿಯ ಸದಸ್ಯರಿದ್ದೀರಿ, ತಾವು ಈ ರೀತಿ ಹೇಳಿದರೆ ಹೇಗೆ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರು ನಾನು ಹೇಳುವ ಮಾತನ್ನು ಸ್ವಲ್ಪ ಕೇಳಿ, ಆಮೇಲೆ ನಿಮ್ಮ ಮಾತು ಕೇಳುತ್ತೇನೆ. ಅವರು ಪಕ್ಷದ ಲೀಡರ್ ಇದ್ದಾರೆ, ಅವರಿಗೆ ದಯಮಾಡಿ ಹೆಚ್ಚು ಅವಕಾಶ ಕೊಡಿ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಐದು ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಎ.ಎಸ್. ಕೃಷ್ಣನ್.—ನಾನು ಅಂಕಿಅಂಶಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. In the background papers given by the Economic Planning Council for Karnataka page no. 249 you have given particulars of slippages in the construction of major irrigation projects, year of commencement, original target, project cost, original, latest, total irrigation potentitial and potential likely at the end of the 6th plan, ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಚಿಂತನ ಚಿಲುಮೆ/ಪ್ರಕಾರ ಅದು ಯಾವಾಗ ಶುರುವಾಯಿತು ? ನಿಮ್ಮ ಟೋಟಲ್ ಪೊಟೆನ್ಶಿಯಲ್ ಏನಾಯಿತು ? ಆರನೇ ಯೋಜನೆಯಲ್ಲಿ ಒಂದಕ್ಕೊಂದು ಕಡಿಮೆಯಾಗುತ್ತಾ ಇದೆ. ನಿಮ್ಮ ಟಾರ್ಜೆಟ್ ಅನ್ನು ರೀಚ್ ಮಾಡುವುದಕ್ಕೆ ಆಗಿಲ್ಲ ವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ನಿಮ್ಮ ಇರಿಗೇಷನ್ ಪೊಟೆನ್ಶಿಯಲ್ ಏನಿದೆ ಅದನ್ನು ರೀಚ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅಚೀವ್‌ಮೆಂಟ್ಸ್ ಕೂಡ ಆಗಿಲ್ಲ ಎನ್ನುವುದು ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಪ್ರಾಜೆಕ್ಟ್ ಕಾಸ್ಟ್ ಜಾಸ್ತಿಯಾಗುತ್ತಾ ಇದೆ.

	ಒರಿಜನಲ್ ಕಾಸ್ಟ್ (ಕೋಟಿ ರೂ.ಗಳಲ್ಲಿ)	ಲೇಟೆಸ್ಟ್ ಕಾಸ್ಟ್ (ಕೋಟಿ ರೂ.ಗಳಲ್ಲಿ)
ತುಂಗಭದ್ರಾ	೨೭.೫೫	೬೮.೯೯
ಮಲಪ್ರಭಾ	೨೦.೦೦	೨೩೬.೨೬
ಘಟಪ್ರಭಾ	೯೦.೫೪	೧೬೭.೦೭
ಅಪ್ಪರ್ ಕೃಷ್ಣಾ	೫೮.೨೦	೧೦೩೯.೭೧
ಭದ್ರಾ	೮.೧೮	೫೯.೦೦
ಕಾರಂಜ	೯.೯೦	೫೧.೫೩

ಈ ರೀತಿ ಕಾಸ್ಟ್ ಜಾಸ್ತಿಯಾಗುತ್ತಾ ಇದೆ. ಅದರ ಜೊತೆಗೆ ನಿಮ್ಮ ಗುರಿಗೂ-ಸಾಧನೆಗೂ ವ್ಯತ್ಯಾಸ ವಾಗುತ್ತಿದೆ. ಇದು ನೀವು ಕೊಟ್ಟಿರತಕ್ಕ ಅಂಕಿಅಂಶಗಳಿಂದ ಗೊತ್ತಾಗುತ್ತಿದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಒಂದು ಯೋಜನೆಗನುಗುಣವಾಗಿ ಕಾರ್ಯಗತ ಮಾಡುತ್ತಿದ್ದೀರಾ ಅಂದರೆ ಮಾಡುತ್ತಿಲ್ಲ ಎನ್ನುವುದು ಗೊತ್ತಾಗುತ್ತದೆ. ಏತಕ್ಕೆ ಮಾಡಲಿಲ್ಲ ಎನ್ನುವ ಪ್ರಶ್ನೆ ಬಂದಾಗ, ಅದಕ್ಕೆ ಉತ್ತರ ಬರುತ್ತದೆ ನಮಗೆ ಹಣ ಇಲ್ಲ ಆದಕ್ಕೆ ಮಾಡುವುದಕ್ಕೆ ಆಗಿಲ್ಲವೆಂದು ಹೇಳುತ್ತಿದ್ದೀರಿ. ಅಷ್ಟು ಹಣವನ್ನು ಒದಗಿಸಿಕೊಳ್ಳುವುದಕ್ಕೆ ಆಗಿಲ್ಲ, ಅದು ಒಂದೇ ಕಾರಣ ಅಲ್ಲ. ಇದಕ್ಕೆ ಬೇರೆ ಕಾರಣಗಳೂ ಇವೆ. ಮೊದಲನೆಯ ಕಾರಣ ನೀವು ಕೊಟ್ಟಿರುವ ಅಂಕಿಅಂಶಗಳು ಸರಿಯಾಗಿ ಇವೆಯೇ? ಎನ್ನುವುದು ಮೊದಲನೆಯ ಪ್ರಶ್ನೆ. ನಿಮ್ಮಲ್ಲಿ ಎರಡು ತರಹ ಅಂಕಿಅಂಶಗಳಿವೆ. ಡಿಪಾರ್ಟ್‌ಮೆಂಟ್ ಆಫ್ ಎಕನಾಮಿಕ್ಸ್ ಅಂಡ್ ಸ್ಟಾಟಿಸ್ಟಿಕ್ಸ್ ಮತ್ತು ಇರಿಗೇಷನ್ ಡಿಪಾರ್ಟ್‌ಮೆಂಟ್ ಅಂಕಿಅಂಶ ಗಳಿಗೂ ವ್ಯತ್ಯಾಸವಿದೆ. ಎರಡು ಅಂಕಿಅಂಶಗಳಿಗೂ ಸಂಬಂಧವಿಲ್ಲ. ಅದರ ಬಗ್ಗೆ ತಾವು ಯೋಚನೆ ಮಾಡಬೇಕು.

ಗ್ರಾಸ್ ಇರಿಗೇಷನ್ ಯುಟಿಲೈಸೇಷನ್	ಫಸ್ಟ್‌ಪ್ಲಾನ್ ೧೯೫೫-೫೬	ಸೆಕೆಂಡ್‌ಪ್ಲಾನ್ ೧೯೬೦-೬೧	ಥರ್ಡ್‌ಪ್ಲಾನ್ ೧೯೬೫-೬೬	ಫೋರ್ತ್‌ಪ್ಲಾನ್ ೧೯೭೩-೭೪	೧೯೭೯-೮೦
(ಐಪಿ)	೮.೫೫	೯.೭೭	೧೨.೨೩	೧೪.೬೪	೧೯.೬೭
ಗ್ರಾಸ್ ಇರಿಗೇಷನ್ ಯುಟಿಲೈಸೇಷನ್ (ಡಿಇಎಸ್)	೭.೨೬	೯.೭೬	೧೦.೩೮	೧೪.೨೨	೧೬.೮೯

The Extent of Irrigation in Karnataka (Area in lakh hectares) ಡಿಪಾರ್ಟ್‌ಮೆಂಟ್ ಆಫ್ ಎಕಾನಮಿಕ್ಸ್ ಅಂಡ್ ಸ್ಟಾಟಿಸ್ಟಿಕ್ಸ್ ಮತ್ತು ಇರಿಗೇಷನ್ ಡಿಪಾರ್ಟ್

ಮೆಂಟ್ ಒಬ್ಬರು ಕಡಿಮೆ ಮಾಡಿದ್ದಾರೆ, ಇನ್ನೊಬ್ಬರು ಜಾಸ್ತಿ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸರಿಯಾಗಿ ಉತ್ತರ ಕೊಡಬೇಕು. ನೀವು ಕೊಟ್ಟಿರುವ ಅಂಕಿಅಂಶಗಳು ನಿಮಗೆ ಹೊರೆ, ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಇನ್ನೊಂದು ಮುಖ್ಯವಾದ ಅಂಶವನ್ನು ಹೇಳಬೇಕಾಗಿದೆ. ಬೇರೆ ಅಂಶಗಳೂ ಇವೆ. ಡಿಸೈನ್ ಮತ್ತು ಕ್ವಾಲಿಟಿ, ಇವರು ಡಿಸೈನ್ ಅನ್ನು ಬದಲಾವಣೆ ಮಾಡಿದ್ದಾರೆ. ಬೇಕೆಂದೇ ಚೇಂಜ್ ಮಾಡಿರತಕ್ಕ ಆಪಾದನೆಗಳಿವೆ. ಜನತಾ ಪಕ್ಷದವರು ಅಧಿಕಾರಕ್ಕೆ ಬಂದಮೇಲೆ ಮಾಡಿದ್ದಾರೆ, ಕಾಂಗ್ರೆಸ್ ಪಕ್ಷದವರೂ ಮಾಡಿದ್ದಾರೆ ಅದು ಬೇರೆ. ನನ್ನ ಪ್ರಶ್ನೆ ಏನೆಂದರೆ ಡಿಸೈನ್ ಬದಲಾವಣೆ ಮಾಡುವುದು, incorrect river hydrology, ಅದೇರೀತಿ invalid assumptions about cropping patterns ಇದು ಎಲ್ಲಾ ಇದೆ. ಅದರ ಬಗ್ಗೆ ಒಂದೇ ಒಂದು ಸಣ್ಣ ಪ್ಯಾರಾ ಓದುತ್ತೇನೆ. ಅದರ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ.

"A recent World Bank assessment of the execution delays in major irrigation projects in India has also commented on the inadequacies of project design. Projects have been designed on the basis of inadequate data, incorrect river hydrology, poor soil surveys, invalid assumptions about cropping patterns and water demand, untested premises about conveyance efficiency and inadequate topographical maps which make it physically impossible for water to reach large areas. It has also been observed that much greater design emphasis needs to be given to the minor distribution network. 'An error of 30 cm. in the water level in the main canal has little effect on project performance. An error of half this amount in the minor system brings disaster for the area—it can easily put half the command out of service. Yet, paradoxically the most intensive attention is paid to the main system, with layout and construction of the minor system entrusted to the most junior staff who have no training in the problems of the minor network."

These are the observations of the World Bank. It has assessed our projects in our State. It is not just a question of money, not funds alone. All these aspects must be taken care of. Unfortunately, it has not been taken care. How far you have taken care of it now ? You must be prepared to tell it. ಭ್ರಷ್ಟಾಚಾರದ ಬಗ್ಗೆ ಹಲವಾರು ಜನ ಸದಸ್ಯರು ಮಾತನಾಡಿದ್ದಾರೆ. ನಾನು ನಿಮ್ಮ ಹತ್ತಿರ ವೈಯಕ್ತಿಕವಾಗಿ ಮಾತನಾಡಬಹುದು. ಆದರೆ ಇವತ್ತಿನ ದಿವಸ ಅದನ್ನೆಲ್ಲಾ ಹೇಳುವುದಕ್ಕೆ ಸಮಯವಿಲ್ಲ. ಇವತ್ತಿನ ದಿವಸ ತಮಗೆ ಹೇಳಬೇಕಾದರೆ ಪತ್ರಿಕೆಯಲ್ಲಿ ಬಂದಿರುವ ವಿಚಾರವನ್ನು ತಾವು ಓದಿದ್ದೀರಿ ಎಂದು ತಿಳಿದುಕೊಂಡಿದ್ದೇನೆ. ವರಾಹಿ ಹೈಡಲ್ ಪ್ರಾಜೆಕ್ಟ್ ಬಗ್ಗೆ ಬೇಕಾದಷ್ಟು ಆಪಾದನೆ ಮಾಡಿದ್ದಾರೆ. ಮುಖ್ಯ ಅಧಿಕಾರಿಗಳ ಬಗ್ಗೆ ಹಲವಾರು ಆಪಾದನೆಗಳು ಇದೆ. ಅಷ್ಟೇ ಅಲ್ಲ, ಇಂಡೈರೆಕ್ಟಾಗಿ ತಮ್ಮ ಮೇಲೂ (ದೇವೆ ಗೌಡರ ಬಗ್ಗೆ) ಇದೆ. ಆದರೆ ತಮ್ಮ ಬಗ್ಗೆ ನಾನು ಸಂಶಯ ಇಟ್ಟುಕೊಂಡಿಲ್ಲ.

ಶ್ರೀ ಎಚ್.ಡಿ. ದೇವೇಗೌಡ.—ಅದು ನನ್ನ ವ್ಯಾಪ್ತಿಗೆ ಬರುವುದೇ ಇಲ್ಲ. ಅದು ಅವರ ಪ್ರಾಜೆಕ್ಟ್.

ಶ್ರೀ ಎಂ.ಎಸ್. ಕೃಷ್ಣನ್. ನನಗನ್ನಿಸುತ್ತದೆ, ಹಿಂದೆಲ್ಲಾ ಒಟ್ಟಿಗೆ ಇತ್ತಲ್ಲ ಆಗ ಯಾರೋ ಮಾಡಿದ ಪಾಪಕ್ಕೆ ತಮ್ಮ ಮೇಲೆ ಅಪಾದನೆ ಹೊರಿಸುತಿದ್ದಾರೋ ಏನೋ ಗೊತ್ತಿಲ್ಲ. ಒಟ್ಟಿನಲ್ಲಿ ಕರಪ್‌ಷನ್ ಇದೆ ಎಂಬುದನ್ನು ಒಪ್ಪಿಕೊಳ್ಳುತ್ತೀರಿ ತಾನೆ. ಅದನ್ನು ನಿರ್ಮೂಲನ ಮಾಡುವುದಕ್ಕೆ ಏನು ಮಾಡಿದ್ದೀರಿ ಎಂಬ ಪ್ರಶ್ನೆ ಬರುತ್ತದೆ. ಕೆಲವರನ್ನು ಸಸ್ಪೆಂಡ್ ಮಾಡಿದ್ದೀರಿ. ಕೆಲವರನ್ನು ಡಿಸ್‌ಮಿಸ್ ಮಾಡಿ ಮನೆಗೆ ಕಳುಹಿಸಿದ್ದೀರಿ. ಒಳ್ಳೆಯದು. ಆದರೆ ಇನ್ನೂ ಬೇಕಾದಷ್ಟು ಜನ ಇದ್ದಾರೆ. ನಾನು ಕೆಟ್ಟ ಶಬ್ದವನ್ನು ಉಪಯೋಗ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಇನ್ನೂ ಇದ್ದಾರೆ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಜೊತೆಗೆ ತಾವು ಆಡಳಿತವನ್ನು ಸ್ಟ್ರೀಮ್‌ಲೈನ್ ಮಾಡಬೇಕು. ಸಬ್–ಡಿವಿಷನ್ ರೀ–ಆರ್ಗನೈಸ್ ಮಾಡಬೇಕಾಗುತ್ತದೋ ಏನೋ ಎಂಬುದನ್ನು ಯೋಚನೆ ಮಾಡಿ. ನಾನು ಅದರ ಬಗ್ಗೆ ಬರೆದುಕೊಂಡು ಬಂದಿದ್ದೆ. ನನಗೆ ಹೆಚ್ಚಿಗೆ ಹೇಳುವುದಕ್ಕೆ ವೇಳೆ ಇಲ್ಲ.

ಅಧ್ಯಕ್ಷರು.—ಅದನ್ನೆಲ್ಲಾ ಆಮೇಲೆ ಪಕ್ಕದಲ್ಲಿ ಕುಳಿತು ಹೇಳಿರಿ. ಈಗ ದಯವಿಟ್ಟು ಮುಗಿಸಿ ಬಿಡಿ. ಸಹಕಾರ ಕೊಡಿ.

SHRI M.S. KRISHNAN.—Re-exmination of procedures in taking up work. in continuing it also about the contractors ಇದರ ಬಗ್ಗೆ ಇನ್ನೂ ಏಷ್ಟೋ ವಿಷಯಗಳನ್ನು ಹೇಳಬೇಕಾಗಿತ್ತು. ಆದರೆ ಕಾಲಾವಕಾಶ ಇಲ್ಲ ಎಂದು ಹೇಳುತ್ತಿದ್ದೀರಿ. ಇನ್ನು ರಸ್ತೆಗಳ ಬಗ್ಗೆ ಹೇಳಬೇಕಾದರೆ ಇದರಲ್ಲಿ ಏನಾಗುತ್ತದೆಂದರೆ ನಿಮಗೆ ಗೊತ್ತಿರುವ ಹಾಗೆ ಜೆಲ್ಲಿ ಹಾಕಿರುತ್ತಾರೆ. ಆಮೇಲೆ ಮೆಷರ್‌ಮೆಂಟ್ ಮಾಡಬೇಕಾಗುತ್ತದೆ. ಅದಕ್ಕೆ ಬೇಕಾದ ಇನ್‌ಪುಟ್ಸ್ ಒದಗಿಸಿದರೆ ಬೇಗ ಬೇಗ ಕೆಲಸ ನಡೆಯುತ್ತದೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ನಾವು ಹೋದಾಗ ನೋಡಿದ್ದೇವೆ. ಕೆಲಸಗಳು ಡಿಲೇ ಆಗುತ್ತಿದೆ ಈಗ. ಇದರಿಂದ ಅನೇಕ ತೊಂದರೆಗಳಾಗುತ್ತದೆ. ಆದ್ದರಿಂದ ತಾವು ಇದರ ಬಗ್ಗೆ ಗಮನ ಹರಿಸಬೇಕು. ಒಂದು ಮಾತು ಹೇಳಬೇಕೆಂದರೆ........

ಅಧ್ಯಕ್ಷರು.—ಕೃಷ್ಣನ್ ಅವರೇ, ಹೇಳುವುದೇನಿದ್ದರೂ ಪಕ್ಕದಲ್ಲಿ ಕುಳಿತು ಹೇಳಿ.

ಶ್ರೀ ಎಂ.ಎಸ್. ಕೃಷ್ಣನ್.—೫ ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು.—ಸಾಧ್ಯವಿಲ್ಲ. ಇನ್ನೂ ೧೫ ಜನರಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಮುಗಿಸುತ್ತೇನೆ.

ಅಧ್ಯಕ್ಷರು.—ದಯವಿಟ್ಟು ಕೇಳಿ. ನಿಮ್ಮ ಪಾರ್ಟಿಯಲ್ಲಿ ೨೦ ನಿಮಿಷ ಮಾತನಾಡಿದ್ದಾರೆ. ನೀವೇನೋ ಚೆನ್ನಾಗಿ ಮಾತನಾಡುತ್ತೀರಿ ಎಂದು ೧೦ ನಿಮಿಷ ಕೊಟ್ಟಿದ್ದೇನೆ. ದಯವಿಟ್ಟು ಕುಳಿತು ಕೊಂಡು ಬಿಡಿ.

ಶ್ರೀ ಎಂ. ಎಸ್ ಕೃಷ್ಣನ್.—ಮಾತನಾಡಿ ಕುಳಿತುಕೊಂಡುಬಿಡುತ್ತೇನೆ. ಇನ್ನು ಎರಡು ಮೂರು ಅಂಶಗಳಿವೆ. "ಕಾಡಾ" ಬಗ್ಗೆ ಹೇಳುವುದಾದರೆ ೫ ಕಾಡಾಗಳನ್ನು ಮಾಡಿದ್ದೀರಿ, ಆದರೆ ಅವರು ಕೆಲಸವನ್ನೇ ಸರಿಯಾಗಿ ಮಾಡಿಲ್ಲ ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ. ನೀವು ಹೇಳಿರು ವಂಥ ಅಬ್ಜೆಕ್ಟಿವ್ಸ್‌ಗೂ ಕಾಡಾದಲ್ಲಿ ನಡೆದಿರುವುದಕ್ಕೂ ಸಂಬಂಧವೇ ಇಲ್ಲ. ಕೆಲಸಗಳು ಕಾರ್ಯ ಗತವಾಗುತಿಲ್ಲ. ನೀವು ಹಣ ಕೊಟ್ಟರೂ ಕಾರ್ಯಗತವಾಗುತ್ತಿಲ್ಲ. ಆದ್ದರಿಂದ ಕೆಲಸಗಳು ಕಾರ್ಯ ಗತವಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ರೋಡುಗಳ ಬಗ್ಗೆ ಮಾತನಾಡುವುದಾದರೆ ನ್ಯಾಷನಲ್ ಹೈವೇಸ್‌ನ್ನು ಡಬಲ್ ರೋಡ್ ಮಾಡಬೇಕು, ಮತ್ತು ಅಗಲ ಮಾಡಬೇಕು. ವಾಹನ ಗಳು ಓಡಾಡುವುದಕ್ಕೆ ವಿಶಾಲವಾಗಿರಬೇಕು. ಬೆಂಗಳೂರು–ಮೈಸೂರು ಹೆದ್ದಾರಿಯನ್ನೂ ಡಬ್ಬಲ್ ರೋಡು ಮಾಡಬೇಕು. ಮೂರನೆಯದು ಹರಿಜನವಾಡ ರೋಡ್‌ಗಳ ಬಗ್ಗೆ ಹೆಚ್ಚು ಗಮನ ಕೊಡ ಬೇಕು. ಇದಕ್ಕೆ ಕೇಂದ್ರ ಸರ್ಕಾರದವರು ಹಣ ಕೊಡುತ್ತಾರೆ. ೨.೨ ಕೋಟಿ ರೂಪಾಯಿಗಳನ್ನು ನೀವು ಕೊಟ್ಟಿದ್ದೀರಿ. ರಿಪೋರ್ಟಿನಲ್ಲಿ ಅದನ್ನು ಹೇಳಿದ್ದೀರಿ. ನನಗನ್ನಿಸುತ್ತದೆ ಇದಕ್ಕೆ ತಾವು ಜಾಸ್ತಿ ಅಲಾಟ್ ಮಾಡಬೇಕು. ಕಡೆಯದಾಗಿ ಇರಿಗೇಷನ್ ಗ್ಯಾಂಗ್ ವರ್ಕರ್ಸನ್ನು ಮರೆಯಬೇಡಿ. ಅವರ ಬಗ್ಗೆ ಇಲ್ಲ ಎನ್ನಬೇಡಿ. ಅವರಿಗೆ ಹೇಗೆ ಅನುಕೂಲ ಮಾಡಿಕೊಡಬೇಕು ಎಂಬುದನ್ನು ನೋಡಿ. ಸಾವಿರಾರು ಜನ ಇದ್ದಾರೆ. ಅವರನ್ನು ಬೀದಿಪಾಲು ಮಾಡಬೇಡಿ. ಕೆಲವರನ್ನು ಬೀದಿಪಾಲು ಮಾಡಿದ್ದೀರಿ ೧೯೮೨ರಲ್ಲಿ ಬಂದಮೇಲೆ. ಆದರೆ ಆರೀತಿ ಮಾಡಕೂಡದು ಎಂದು ಒತ್ತಾಯಪೂರ್ವಕ

ವಾಗಿ ಕೇಳಿಕೊಳ್ಳುತ್ತೇನೆ. ಕೆಲವರು ಮೆರವಣಿಗೆಯಲ್ಲಿ ಬಂದು ಮನವಿ ಅರ್ಪಿಸಿದ್ದಾರೆ. ತಾವೂ ಸ್ವೀಕರಿಸಿದ್ದೀರಿ. ಸಂತೋಷ. ಆದರೆ ಮುಂದಿನ ಕ್ರಮ ತೆಗೆದುಕೊಂಡು ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವೀರಯ್ಯ ಸ್ವಾಮಿ (ಚಿಂಚೋಳಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಕಾಮಗಾರಿ ಮತ್ತು ನೀರಾವರಿ ಇಲಾಖೆಯ ಮಂತ್ರಿಗಳ ಬೇಡಿಕೆಯ ಮೇಲೆ ನಮ್ಮ ನಾಯಕರಾದ ಬಸವಲಿಂಗಪ್ಪ ನವರು, ಮತ್ತು ವೀರಪ್ಪ ಮೊಯಿಲಿಯವರು ಹೇಳಿರತಕ್ಕ ಅರ್ಥಪೂರ್ಣವಾದ ಮಾತುಗಳಿಗೆ ಸಪೋರ್ಟ್ ಮಾಡುತ್ತಾ ಈ ಬೇಡಿಕೆಗಳಿಗೆ ನನ್ನ ವಿರೋಧವನ್ನು ಸೂಚಿಸುತ್ತೇನೆ. ಮಾನ್ಯ ಕಾಮ ಗಾರಿ ಮತ್ತು ನೀರಾವರಿ ಇಲಾಖೆಯ ಮಂತ್ರಿಗಳು ಕರ್ನಾಟಕದಲ್ಲಿ ಇಲ್ಲಿಯವರೆಗೆ ಏನಿದ್ದರು ಅದೇ ರೀತಿ ಜನತಾ ಪಕ್ಷದ ಮಂತ್ರಿಗಳೂ ಸಹ ನಮ್ಮ ಭಾಗಕ್ಕೆ ಮಲತಾಯಿ ಧೋರಣೆಯನ್ನು ತೋರಿಸಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹೈದರಾಬಾದ್ ಕರ್ನಾಟಕದ ಭಾಗ ಪ್ರತಿ ಸಲವೂ ಯಾರ ದೃಷ್ಟಿಗೂ ಬೀಳುವುದಿಲ್ಲ. ನಮ್ಮ ಭಾಗದಲ್ಲಿರತಕ್ಕ ಮುಖ್ಯವಾದ ರಸ್ತೆಗಳು ಹಾಗೂ ನೀರಾವರಿ ಯೋಜನೆಗಳು ಬಹಳಷ್ಟು ಕಡೆಗಣಿಸಲ್ಪಟ್ಟಿವೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಚುನಾವಣಾ ಪ್ರಚಾರಕ್ಕೆ ಹೋದಾಗ ನಮ್ಮ ರಸ್ತೆಗಳನ್ನು ನೋಡಿರಬಹುದು. ಆದರೆ ಬಹುಶಃ ಅವರು ಕಾರಿನಲ್ಲಿ ಹೋದಾಗ ಅದರ ಪರಿಸ್ಥಿತಿ ಸರಿಯಾಗಿ ತಿಳಿಯುವುದಿಲ್ಲ. ಜೀಪಿನಲ್ಲಿ ಸ್ವಲ್ಪ ಓಡಾಡಿದರೆ ರಸ್ತೆಗಳ ಬಗ್ಗೆ ಅನುಭವವಾಗುತ್ತದೆ. ಮಾನ್ಯ ಮಂತ್ರಿಗಳು ಅಲ್ಲಿ ಬರುವುದಕ್ಕೆ ಸಾಧ್ಯವಿಲ್ಲದಿದ್ದರೂ ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ಜಿಲ್ಲೆಯ ಎಲ್ಲ ತಾಲ್ಲೂಕಿನ ರಸ್ತೆಗಳಲ್ಲೂ ಒಂದೆರಡು ಸಲ ಹೋಗಿ ಬರತಕ್ಕ ಉಪಕಾರ ಮಾಡಿದರೆ ಅದರ ಕಟು ಅನುಭವವಾಗುತ್ತದೆ. ನಮ್ಮ ಭಾಗದಲ್ಲಿ ಸ್ಟೇಟ್ ಹೈವೇಸ್‌ಗಳು ಯಾವ ರೀತಿ ಇದೆ ಎಂದರೆ ಬರಗಾಲದಲ್ಲಿ ಹಾಕಿದಂಥ ಎನ್.ಆರ್.ಇ.ಪಿ. ರಸ್ತೆಗಳಿರುತ್ತದಲ್ಲ ಹಳೆಯದು ಆ ಮಟ್ಟಕ್ಕೆ ಬಂದಂಥ ರಸ್ತೆಗಳಾಗಿವೆ. ಬೆಂಗಳೂರಿನಿಂದ ಬೀದರ್‌ಗೆ ೭೦೦ ಕಿಲೋಮೀಟರ್ ಉದ್ದವಾದ ರಸ್ತೆ ಇದೆ. ಈ ರಸ್ತೆ ಬೆಂಗಳೂರಿನಿಂದ ಬಳ್ಳಾರಿಯವರೆಗೆ ಸರಿಯಾಗಿದೆ. ಆದರೆ ಬಳ್ಳಾರಿಯಿಂದ ಬೀದರ್‌ವರೆಗೆ ಬಹಳ ಕೆಟ್ಟ ರೀತಿಯಲ್ಲಿ ಇದೆ. ಹಿಂದೆ ವೀರೇಂದ್ರ ಪಾಟೀಲರು ಈ ರಸ್ತೆಯನ್ನು ನ್ಯಾಷನಲ್ ಹೈವೇ ಆಗಿ ಮಾಡಬೇಕೆಂದು ಪ್ರೊಪೋಸಲ್ ಇಟ್ಟು ಕೊಂಡಿದ್ದರು. ಅದರಂತೆ ದಯವಿಟ್ಟು ಸರ್ಕಾರದವರು ಇದನ್ನು ನ್ಯಾಷನಲ್ ಹೈವೇ ಆಗಿ ತೆಗೆದು ಕೊಳ್ಳುವಂತೆ ಪ್ರೊಪೋಸಲ್ ಕಳುಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಇದಕ್ಕೆ ಹೆಚ್ಚಿನ ಸಂಪನ್ಮೂಲ ಒದಗಿಸಿ ರಿಪೇರಿ ಕಾರ್ಯವನ್ನು ಆದಷ್ಟು ಬೇಗ ಮಾಡಿಸಬೇಕು. ಮುಖ್ಯವಾಗಿ ನಮ್ಮ ಭಾಗದ ರಸ್ತೆಗಳಿಗೆ ಬಜೆಟ್‌ನಲ್ಲಿ ಹಣ ಕೊಟ್ಟಿಲ್ಲ. ದುರ್ದೈವ ಎಂದರೆ ಇಂಟೀರಿಯಂ ಬಜೆಟ್‌ನಲ್ಲಿ ಇದ್ದ ಹಣ ಸಹ ಫೈನಲ್ ಬಜೆಟ್‌ನಲ್ಲಿ ತೆಗೆದಿದ್ದಾರೆ. ಕಾರಣ ತಿಳಿಯುತ್ತಿಲ್ಲ. ನನ್ನ ಕ್ಷೇತ್ರ ಚಿಂಚೋಳಿಯಲ್ಲಿ ಬೀದರ್‌ನಿಂದ ಚಿಂಚೋಳಿಗೆ ಸ್ಟೇಟ್ ಹೈವೇ ಇದೆ. ಅದಕ್ಕೆ ಟಾರ್ ಸಹ ಹಾಕಿಲ್ಲ. ೧೨ ಲಕ್ಷ ರೂಪಾಯಿಗಳನ್ನು ಇಂಟೀರಿಯಂ ಬಜೆಟ್‌ನಲ್ಲಿ ಇದ್ದುದನ್ನು ತೆಗೆದು ಹಾಕಿದ್ದಾರೆ. ಇದೊಂದು ಸ್ಟೇಟ್ ಹೈವೇ ಮಾತ್ರ ಟಾರ್ ಆಗಲಾರದೆ ಉಳಿದಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಿ ಈ ರಸ್ತೆಗೆ ಟಾರ್ ಹಾಕಿಸಿ ಸರಿಯಾಗಿ ಮಾಡಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ಬ್ಲ್ಯಾಕ್ ಕಾಟನ್ ಸಾಯಿಲ್ ಇದೆ. ಆದ್ದರಿಂದ ನಮ್ಮ ಕಡೆ ರಸ್ತೆಗಳಿಗೆ ಇಲ್ಲಿ ಕೊಡುವಷ್ಟು ಹಣವನ್ನು ಕೊಟ್ಟರೆ ಸಾಕಾಗವುದಿಲ್ಲ. ಅಲ್ಲಿ ರಸ್ತೆಗಳು ಬೇಗ ಕೆಟ್ಟು ಹೋಗುತ್ತವೆ. ಆದ್ದರಿಂದ ಅಲ್ಲಿಗೆ ಹೆಚ್ಚು ಹಣ ಕೊಡ ಬೇಕು. ನಮ್ಮ ಭಾಗದಲ್ಲಿ ೧೦–೧೫ ವರ್ಷದ ಹಿಂದೆ ಟಾರ್ ರೋಡ್ ಆಗಿದ್ದು ಇಲ್ಲಿಯವರೆಗೆ ರೀಕಾರ್ಪೆಟ್ ಮಾಡಿಲ್ಲ. ಅದಕ್ಕೆ ಕಾರಣ ಗೊತ್ತಾಗುತ್ತಿಲ್ಲ. ಈ ಭಾಗದಲ್ಲಿರತಕ್ಕ ರಸ್ತೆಗಳಿಗೆ ನಾಲ್ಕೈದು ಬಾರಿ ರೀಕಾರ್ಪೆಟ್ ಮಾಡಿದರೂ ನಮ್ಮ ಕಡೆ ಮಾಡಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಇದನೆ ಕಡೆ ಗಮನ ಹರಿಸಿ ರಸ್ತೆಗಳಿಗೆ ರೀಕಾರ್ಪೆಟ್ ಮಾಡತಕ್ಕ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ಎನ್.ಆರ್. ಲಕ್ಷ್ಮಯ್ಯ.—೧೨ ವರ್ಷಗಳ ಹಿಂದೆ ಅಂದರೆ......

ಅಧ್ಯಕ್ಷರು.—ಮಧ್ಯೆ ಇಂಟರ್‌ಫಿಯರ್ ಮಾಡಬೇಡಿ.

ಶ್ರೀ ಎನ್.ಆರ್. ಲಕ್ಷ್ಮಯ್ಯ.—ಈ ಸರ್ಕಾರ ಬಂದು ಎರಡು ವರ್ಷ ೪ ತಿಂಗಳಾಗಿದೆ. ಆದರೆ ೧೨ ವರ್ಷದಿಂದ ರಿಪೇರಿಯಾಗಿಲ್ಲ ಎಂದರೆ ಅದಕ್ಕೆ ಯಾರು ಕಾರಣ ?

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

೪-೩೦ ಪಿ. ಎಂ.

ಶ್ರೀ ಎಂ. ವೀರಯ್ಯ ಸ್ವಾಮಿ.—ಮಾನ್ಯ ಸದಸ್ಯರು ಹೇಳಿದಂತೆ ನಮ್ಮ ಸರ್ಕಾರ ಮಾಡಿತ್ತು ಎಂದು ಅವರು ಮಾಡಬೇಕೆಂದು ಇಲ್ಲ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾರೆ ಚಿಂಚೋಳಿಯಲ್ಲಿ...............

ಅಧ್ಯಕ್ಷರು.—ಅವರು ಹೊಸ ಸದಸ್ಯರಿದ್ದಾರೆ. ಅವರಿಗೇಕೆ ಮಧ್ಯೆ ತೊಂದರೆ ಮಾಡುತ್ತೀರಿ? ಹಳಬರಿಗೆ ಮಾಡಿದರೆ ಸರಿಯಾಗಿ ಉತ್ತರಿಸುತ್ತಾರೆ. ಅವರಿಗೆ ಯಾರೂ ಮಧ್ಯದಲ್ಲಿ ತೊಂದರೆ ಮಾಡಬೇಡಿ.

ಶ್ರೀ ಎಂ. ವೀರಯ್ಯ ಸ್ವಾಮಿ: ಕೆಲಸಗಳು ಆಗದೆ ಇರುವ ಸ್ಥಿತಿ ಇದೆ. ಅದನ್ನು ನೀವು ಮಾಡಿಲ್ಲ, ನಾವೇಕೆ ಮಾಡಬೇಕು ಎಂದು ಅಲ್ಲ. ಗಾಂಧಿವಾದ ಹೇಳುವವರು ಒಂದೇ ದೃಷ್ಟಿಯಿಂದ ನೋಡಿ. ನಮ್ಮ ಭಾಗದ ಹಿಂದುಳಿದಿರುವಿಕೆ, ನೀರಾವರಿ ಯೋಜನೆಗಳು, ರಸ್ತೆಗಳ ಬಗ್ಗೆ ತಾವು ಲಕ್ಷ್ಯ ಕೊಟ್ಟು ತಮ್ಮ ಭಾಗದಲ್ಲಿ ಯಾವ ರೀತಿ ಆಗಬೇಕೆಂದು ನಿರೀಕ್ಷೆ ಮಾಡುತ್ತೀರೋ ಅದೇ ರೀತಿ ನಮ್ಮಲ್ಲಿ ಕೂಡ ಆಗುವಂತೆ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಭಾಗದಲ್ಲಿರತಕ್ಕ ಕಾರಂಜ ಮತ್ತಿತರ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಇಟ್ಟಿಲ್ಲ. ಒಂದು ವೇಳೆ ಆ ಯೋಜನೆಗಳು ಮೊದಲೇ ನಿರ್ದಿಷ್ಟಪಡಿಸಿದ ಸಮಯದಲ್ಲಿ ಆಗಿದ್ದರೆ ಬಹಳಷ್ಟು ಹಣ ಉಳಿತಾಯವಾಗುತ್ತಿತ್ತು ಮತ್ತು ಸಾಕಷ್ಟು ಭಾಗಕ್ಕೆ ನೀರು ದೊರೆಯುವ ಅವಕಾಶವಾಗುತ್ತಿತ್ತು. ಮುಲ್ಲಾಮರಿ ಪ್ರಾಜೆಕ್ಟ್ ಬಗ್ಗೆ ಹೇಳಬೇಕಾದರೆ, ಆ ಯೋಜನೆಗೆ ಒರಿಜಿನಲ್ ಎಸ್ಟಿಮೇಟ್ ಪ್ರಕಾರ ೩ ಕೋಟಿ ೭೦ ಲಕ್ಷ ರೂಪಾಯಿ ಸಾಕಾಗಿತ್ತು. ಆದರೆ ಈಗಿನ ಅಂದಾಜು ಪ್ರಕಾರ ೨೧ ಕೋಟಿ ರೂಪಾಯಿ ಬೇಕಾಗುತ್ತಿದೆ. ಈ ಯೋಜನೆ ೧೯೮೦ರಲ್ಲೇ ಮುಕ್ತಾಯವಾಗಬೇಕಾಗಿತ್ತು. ಆದರೆ ಇನ್ನೂ ಪ್ರಾರಂಭದ ದಿಸೆಯಲ್ಲೇ ಇದೆ. ಈಗಲಾದರೂ ಹೆಚ್ಚಿನ ಹಣ ಒದಗಿಸಿ ಯೋಜನೆಯ ಕೆಲಸವನ್ನು ಕೈಗೊಂಡರೆ ಅದರಿಂದ ೧೬ ಸಾವಿರ ಹೆಕ್ಟೇರ್ ಭೂಮಿಗೆ ನೀರಾವರಿಯಾಗುತ್ತದೆ. ಆದರಿಂದ ನಮ್ಮ ರೈತರಿಗೆ ಬಹಳ ಅನುಕೂಲವಾಗುತ್ತದೆ. ಇದೇ ರೀತಿ ರಸ್ತೆಗಳು ಮತ್ತಿತರ ಕೆಲಸಗಳಿಗೆ ಹೆಚ್ಚಿನ ಹಣ ಒದಗಿಸಬೇಕೆಂದು ಹೇಳುತ್ತೇನೆ, ಹೈದರಾಬಾದ್ ಕರ್ನಾಟಕ ಭಾಗದ ರಸ್ತೆಗಳಿಗೆ ಹೆಚ್ಚಿನ ಹಣ ಕೊಡಬೇಕೆಂದು ಮತ್ತೊಮ್ಮೆ ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ, ನೀರಾವರಿ ಹಾಗೂ ಕಟ್ಟಡಗಳ ಇಲಾಖೆಯ ಬೇಡಿಕೆಗಳನ್ನು ಬೆಂಬಲಿಸುತ್ತಾ ಕೇವಲ ೫ ನಿಮಿಷದಲ್ಲಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಲೋಕೋಪಯೋಗಿ, ಇಲಾಖೆಯನ್ನು ಇತ್ತೀಚಿಗೆ ಲೋಕೋಪಯೋಗಿ, ಇರಿಗೇಷನ್, ಮೈನರ್ ಇರಿಗೇಷನ್, ಎಂದು ವರ್ಗೀಕರಣ ಮಾಡಿ ಇತ್ತೀಚಿನ ವರ್ಷಗಳಲ್ಲಿ ಮಾನ್ಯ ದೇವೇಗೌಡರು ಏನು ಕ್ರಮ ತೆಗೆದುಕೊಂಡಿದ್ದಾರೆ ಇದರಿಂದ ಎಲ್ಲ ಇಲಾಖೆಗಳಲ್ಲಿ ಕಾರ್ಯದಕ್ಷತೆ ಹೆಚ್ಚಿದೆ ಇದು ಇಷ್ಟೆ ಹೆಚ್ಚಿದರೆ ಸಾಲದು. ಇನ್ನೂ ಹೆಚ್ಚಬೇಕಾಗಿದೆ. ಈ ನಾಲ್ಕೂ ವಿಭಾಗಗಳನ್ನು ದೇವೇಗೌಡರು ನೋಡಿಕೊಳ್ಳುತ್ತಾರೆಂಬ ಭರವಸೆ ಇದೆ. ಈ ಸಂರ್ಭದಲ್ಲಿ ಲೋಕೋಪಯೋಗಿ ಸಚಿವರಿಗೆ ನನ್ನ ಒಂದು ಸಲಹೆ ಏನೆಂದರೆ, ಕಳೆದ ೨೫-೩೦ ವರ್ಷಗಳಿಂದ ಮಹಾರಾಷ್ಟ್ರದವರು ಹೇಗೆ ರಸ್ತೆ ಮತ್ತು ಕಟ್ಟಡಗಳ ಕೆಲಸಗಳನ್ನು ಬದಿಗೊತ್ತಿ ನೀರಾವರಿಗಾಗಿ ಆದ್ಯತೆ ಕೊಟ್ಟರೋ ಅದೇ ರೀತಿ ನಾವೂ ಮಾಡಿದರೆ ಕರ್ನಾಟಕ ನೀರಾವರಿ ಕ್ಷೇತ್ರದಲ್ಲಿ ಮುಂದುವರಿಯುತ್ತದೆಂದು ಹೇಳಬಯಸುತ್ತೇನೆ. ಈಗ ನಮ್ಮಲ್ಲಿ ಬೇರೆ ಬೇರೆ ರೀತಿಯ ನೀರಾವರಿ ಯೋಜನೆಗಳು ಇವೆ. ಘಟಪ್ರಭ, ಮಲಪ್ರಭದಂಥಹ ಅನೇಕ ಯೋಜನೆಗಳು ಇವೆ. ನಮ್ಮಲ್ಲಿ ಬೇಕಾದಷ್ಟು ನೀರಿದೆ. ಆದರೆ ಅದರಲ್ಲಿ ಹೆಚ್ಚಿನ ಭಾಗ ಸೋರಿ ಹೋಗುತ್ತದೆ ಈ ಸೋರಿ ಹೋಗುವ ನೀರನ್ನು ಹಿಡಿದಿಟ್ಟರೆ ಇನ್ನೂ ಲಕ್ಷಾಂತರ ಎಕರೆಗೆ ನೀರಾವರಿ ಮಾಡಲು ಸಾಧ್ಯವಿದೆ. ನಾನು ಘಟಪ್ರಭಾ ಎಡದಂಡೆ ಪ್ರದೇಶದಿಂದ ಬಂದವನು, ಎಡದಂಡೆ ಕಾಲುವೆ ಸಂಘದ ಅಧ್ಯಕ್ಷ ಘಟಪ್ರಭಾ ಎಡದಂಡೆ ಕಾಲುವೆಯನ್ನು ೪೪ ಕಿ. ಮೀ. ನಿಂದ ೭೭ ಕಿ. ಮೀ. ವರೆಗೆ ಲೈನಿಂಗ್ ಮಾಡಿದರೆ ಇನ್ನೂ ಒಂದು ಲಕ್ಷ ಎಕರೆಗೆ ನೀರಾವರಿ ಮಾಡಲು ಸಾಧ್ಯವಿದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾನು ಬಂದಿರುವುದು ಘಟಪ್ರಭದ ಕೊನೆಯ ಕ್ಷೇತ್ರದಿಂದ. ಈ

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕ್ಷೇತ್ರಕ್ಕೆ ನೀರು ಸಿಗಬೇಕೆಂದು ಅನೇಕ ವರ್ಷಗಳಿಂದ ಹೋರಾಡುತ್ತಿದ್ದೇವೆ. ಸರ್ಕಾರಕ್ಕೆ ಎಷ್ಟೇ ಖರ್ಚಾದರೂ ಚಿಂತೆ ಇಲ್ಲ. ಈ ಕೆಲಸವನ್ನು ಮೊದಲು ಕೈಗೊಳ್ಳಬೇಕೆಂದು ಹೇಳುತ್ತೇನೆ. ನಾನು ಯಾವಾಗಲ್ ಅವರನ್ನು ಕೂಡ ಕರೆದುಕೊಂಡು ಹೋಗಿ ೩೦೦ ಕಿಲೋಮೀಟರ್ ಪ್ರವಾಸ ಮಾಡಿದ್ದೇನೆ. ಒಬ್ಬ ಮಂತ್ರಿ ಇಡೀ ಕಾಲುವೆಗುಂಟ ಹೋದದ್ದು ಇತಿಹಾಸದಲ್ಲಿ ಇದೇ ಪ್ರಥಮ ಸಲ ಎಂದು ಹೆಮ್ಮೆಯಿಂದ ಹೇಳುತ್ತಿದ್ದೇನೆ. ಅವರು ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ, ೫ ಕೋಟಿ ರೂಪಾಯಿ ಮೌಲ್ಯದ ಕೆಲಸವನ್ನು ಹಂತಹಂತವಾಗಿ ಮುಗಿಸಿದರೆ ಇನ್ನೂ ಒಂದು ಲಕ್ಷ ಎಕರೆಗೆ ನೀರು ಕೊಡುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ. ಅವರು ಕಾಡಾ ಛೇರ್ಮನ್ ಕೂಡ ಆಗಿದ್ದರು. ಅವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬಂತಾಗಿದೆ. ಮಾನ್ಯ ದೇವೇಗೌಡರು ನೀರು ಕೊಡುವ ಯೋಜನೆಗಳನ್ನು ಕೈಗೊಳ್ಳುತ್ತೇವೆಂದು ಹೇಳಿದ್ದಾರೆ. ಆದರೆ ಇವತ್ತು ಎಷ್ಟೋ ಕಡೆಗಳಲ್ಲಿ ಅದರಲ್ಲೂ ಘಟಪ್ರಭದಂತಹ ಪ್ರದೇಶಗಳಲ್ಲಿ ನೀರು ಸಿಗುತ್ತಿಲ್ಲ. ಮುಧೋಳ್ ತಾಲ್ಲೂಕಿನಲ್ಲಿ ನನಗೆ ೫ ಎಕರೆ ನೀರಾವರಿ ಜಮೀನು ಇದೆ. ನಾನು ಎಂದೂ ಘಟಪ್ರಭಾ ಕಾಲುವೆಯಿಂದ ನೀರು ತೆಗೆದುಕೊಂಡಿಲ್ಲ. ಆದರೂ ನೀರು ಕಂದಾಯ ಕೊಡಬೇಕೆಂದು ನೋಟೀಸ್ ಬರುತ್ತದೆ. ಯಾರಿಗೆ ನೀರು ಲಭ್ಯವಿಲ್ಲ ಅಂಥವರ ಮೇಲೆ ನೀರು ಕಂದಾಯ ಹಾಕಬಾರದೆಂದು ಆಜ್ಞೆ ಹೊರಡಿಸಿ ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಅನೇಕ ಕಡೆ ಕಾಲುವೆಗಳಲ್ಲಿ ಕಳಪೆ ಕೆಲಸ ನಡೆದಿದೆ. ಅದನ್ನು ಈಗಿನವರು ಮಾಡಿದರು ಅಥವಾ ಹಿಂದಿನವರು ಮಾಡಿದರು ಎಂದು ದೋಷಾರೋಪಣೆ ಮಾಡುವುದಕ್ಕೆ ಹೋಗುವುದಿಲ್ಲ. ನೀರಾವರಿ ಇಲಾಖೆಯಲ್ಲಿ ಯಾವುದೇ ಕೆಲಸವಾಗಲಿ ಅದರ ಬಗ್ಗೆ ಮೇಲ್ವಿಚಾರಣೆ ನಡೆಸದೆ ಕ್ವಾಲಿಟಿ ಕಂಟ್ರೋಲ್ ಹಿಂದೆ ಸರಿದಿದೆ. ಹಿಂದೆ ಲೋಕೋಪಯೋಗಿ ಇಲಾಖೆಯ ಬಗ್ಗೆ ಅನೇಕ ಸದಸ್ಯರು ಹೇಳುತ್ತಿದ್ದರು, ಅಲ್ಲಿ ಲಂಚ ತಿನ್ನದವನೇ ಪಾಪಿ ಎಂದು. ಅಲ್ಲಿನ ನೌಕರರು ಅನೇಕರು ಬಂಗಲೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಬಹುಶಃ ಅಂಥ ಒಂದು ಪರಿಸ್ಥಿತಿ ದೇವೇಗೌಡರ ಕಾಲದಲ್ಲಿ ಇಲ್ಲವೆಂದು ತಿಳಿದುಕೊಂಡಿದ್ದೇನೆ. ಅನೇಕ ಭ್ರಷ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ. ಅನೇಕ ಅಧಿಕಾರಿಗಳಿಗೆ ಯಾವ ದಾರಿ ಹಿಡಿಯಬೇಕೆಂದು ಹೇಳಲಾಗಿದೆ. ಇಷ್ಟೇ ಆದರೆ ಸಾಲದು, ಇನ್ನೂ ಹೆಚ್ಚು ಹೆಚ್ಚಾಗಿ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಎಚ್ಚರಿಕೆ ಕೊಡಬೇಕು. ನಮ್ಮ ಜಿಲ್ಲೆಯ ಬಗ್ಗೆ ಹೇಳುವುದಾದರೆ ನಮ್ಮಲ್ಲಿ ೪ ನದಿಗಳಿವೆ. ಈ ನದಿಗಳ ನೀರನ್ನು ಜುಲೈನಿಂದ ಅಕ್ಟೋಬರ್‌ವರೆಗೆ ಉಪಯೋಗ ಮಾಡಿ ಸಾಕಷ್ಟು ನೀರಾವರಿ ಮಾಡಲಿಕ್ಕೆ ಸಾಧ್ಯತೆ ಇದೆ. ಈ ಒಂದು ಕೆಲಸವನ್ನು ಮಾಡಬೇಕೆಂದು ಮಾನ್ಯ ದೇವೇಗೌಡರಿಗೆ ಮತ್ತು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ, ಕೃಷ್ಣ, ಭೀಮ, ಘಟಪ್ರಭ, ಮಲಪ್ರಭ ಎಂಬ ೪ ದೊಡ್ಡ ನದಿಗಳು ಹರಿಯುವ ಜಿಲ್ಲೆ ನಮ್ಮದು. ಈ ನಾಲ್ಕು ನದಿಗಳಲ್ಲಿ ಏನು ನೀರು ಹರಿಯುತ್ತದೆ ಇದರ ಸಂಪೂರ್ಣ ಉಪಯೋಗ ಮಾಡಿದರೆ ೪-೫ ಜಿಲ್ಲೆಗಳಲ್ಲಿ ಬರಗಾಲವನ್ನು ಎದುರಿಸುವ ಪರಿಸ್ಥಿತಿ ಬರುವುದಿಲ್ಲ. ಇದರ ಬಗ್ಗೆ ಮುಖ್ಯ ಮಂತ್ರಿಗಳಿಗೆ ಸಹ ಹೇಳಿದ್ದೇನೆ. ಮಾನ್ಯ ದೇವೇಗೌಡರು ನಮ್ಮ ಜಿಲ್ಲೆಯ ಮೇಲೆ ಕಣ್ಣು ಹರಿಸಬೇಕೆಂದು ಮತ್ತೊಂಮ್ಮೆ ಪ್ರಾರ್ಥಿಸುತ್ತೇನೆ. ಕಬಿನಿ ಮತ್ತು ಹೇಮಾವತಿ ಯೋಜನೆಗಳಿಗೆ ಹೆಚ್ಚು ಖರ್ಚು ಮಾಡುತ್ತಾರೆಂದು ಹಿರಿಯ ಸದಸ್ಯರಾದ ಬಾಪೂಗೌಡರು ಸರ್ಕಾರದ ಮೇಲೆ ಆರೋಪ ಮಾಡಿದ್ದಾರೆ. ಒಂದು ಪಕ್ಷ ನಾವು ಮಾಡಿದ್ದರೆ ಆ ಮಾತು ಬೇರೆಯಾಗಿತ್ತು. ಹಳೇ ಮೈಸೂರಿಗೆ ಒಂದು ನೀತಿ, ಉತ್ತರ ಪ್ರದೇಶಕ್ಕೆ ಒಂದು ನೀತಿ ಮಾಡುವುದಾದರೆ ನಾವು ಚಳುವಳಿ ಮಾಡಬೇಕಾದ ಪರಿಸ್ಥಿತಿ ಬಂದೀತು. ಹಳೇ ಮೈಸೂರಿನ ಕೃಷ್ಣ ಮೇಲ್ದಂಡೆ ಯೋಜನೆಯಿಂದ ೧೦ ದಶಲಕ್ಷ ಎಕರೆಗೆ ನೀರುಣಿಸಬೇಕೆಂಬ ಮಹಾದಾಕಾಂಕ್ಷೆ ಸರ್ಕಾರದಲ್ಲಿದೆ ಎಂದು ದೇವೇಗೌಡರು ಹೇಳಿದ್ದಾರೆ. ಕೆಲಸ ಮಂದಗತಿಯಲ್ಲಿ ನಡೆದರೆ ಯಾವುದೇ ಕೆಲಸ ಆಗುವುದಿಲ್ಲ ೧೯೫೯ನೇ ಇಸವಿಯಲ್ಲಿ ನಾನು ವಿದ್ಯಾರ್ಥಿಯಾಗಿದ್ದಾಗ, ಬಿಜಾಪುರದಲ್ಲಿ ದೊಡ್ಡ ಚಳುವಳಿ ಮಾಡಲಾಯಿತು. ದಿವಂಗತ ಲಾಲ್ ಬಹದೂರ್ ಶಾಸ್ತ್ರಿಯವರು ಮತ್ತಿತರರು ಬಿಜಾಪುರಕ್ಕೆ ಬಂದಿದ್ದಾಗ ಚಳುವಳಿ ಮಾಡಿದ ಫಲ ಕೃಷ್ಣಾ ಮೇಲ್ದಂಡೆ ಯೋಜನೆ ಆಯಿತು. ಚಳುವಳಿ ಮಾಡಿದಾಗ ನನಗೆ ೧೪ ವರ್ಷ ವಯಸ್ಸು. ಈಗ ನನಗೆ ೪೮ ವರ್ಷ ವಯಸ್ಸಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆ ನಾನು ಇರುವಾಗ ಆಗುತ್ತದೋ ಇಲ್ಲವೋ ಗೊತ್ತಿಲ್ಲ. ಅದರ ಪೂರ್ಣ ಕೆಲಸವಂತೂ ಮುಗಿಯುವುದಿಲ್ಲ. ಅಲ್ಲಿಯತನಕ ನಾನು ಇರುವುದಿಲ್ಲ. ನನ್ನ ಸಂತತಿಯವರು ಕೃಷ್ಣಾ ಮೇಲ್ದಂಡೆ ಯೋಜನೆ ನೀರಿನಿಂದ ಮುಳುಗಡೆಯಾಗುತ್ತಾರೆ. ಇದೇ ರೀತಿ ಸರ್ಕಾರ ನಿಧಾನದಿಂದ ಕೆಲಸ ಮಾಡುವುದಾದರೆ, ಬಿಜಾಪುರ ಇಂಡಿ, ಸಿಂಧಗಿ ಮತ್ತಿತರ ತಾಲ್ಲೂಕಿನವರು ಆಲಮಟ್ಟಿ ಜಲಾಶಯದಲ್ಲಿ ನಿಲ್ಲುವ ಹಿಮ್ಮುಖ ನೀರನ್ನು ಉಪಯೋಗಿಸಿಕೊಂಡು ನೀರಾವರಿ ಮಾಡುವ ಉದ್ದೇಶ ಇದೆ. ಏತ ನೀರಾವರಿ ಯೋಜನೆಗಾಗಿ ಗಂಗಾಧರ ಕೊರಳ್ಳಿಯವರು ಉಪವಾಸ ಮಾಡಿದ್ದರು. ಬಿಜಾಪುರದ ಸ್ವಾತಂತ್ರ್ಯಯೋಧರು ಮುಳವಾಡಿ ಏತ ಯೋಜನೆಯನ್ನು ಮಾಡಿಯೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಕಂಡು

ಮಾತನಾಡಿ ತಮ್ಮ ಬೇಡಿಕೆಯನ್ನು ಸಲ್ಲಿಸಿದ್ದಾರೆ. ಕಡಿಮೆ ಖರ್ಚಿನಲ್ಲಿ ಆಗತಕ್ಕ ಯೋಜನೆ ಅದು ಆಗಿದೆ ಮಧ್ಯವಿಟ್ಟು ಅದನ್ನು ಬೇಗ ಮುಗಿಸಬೇಕು.

ಇನ್ನು ರಸ್ತೆಯ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ಗುತ್ತನಗೇರಿ–ಹುನಗುಂದ ಎಂಬಲ್ಲಿ ಇರತಕ್ಕ ರಾಷ್ಟ್ರೀಯ ಹೆದ್ದಾರಿ ಅಲ್ಲಿ ಕಾಂಕ್ರೀಟ್ ರಸ್ತೆಯನ್ನು ಮಾಡಿದ್ದಾರೆ. ಆ ರಸ್ತೆಯನ್ನು ಮಾಡಿ ಬಹಳ ವರ್ಷಗಳಾದರೂ ಬಹುದು. ಅದು ಯಾವುದೇ ರೀತಿಯ ರಿಪೇರಿಗೆ ಸಹ ಬರುತ್ತಿಲ್ಲ. ಡಾಂಬರ್ ರಸ್ತೆ ಮಾಡುವುದರಿಂದ ಖರ್ಚು ಸಹ ಜಾಸ್ತಿ ಬರುತ್ತದೆ. ನನ್ನ ಅಭಿಪ್ರಾಯವಿದೆ. ಡಾಂಬರ್ ರಸ್ತೆ ಮತ್ತು ಕಾಂಕ್ರೀಟ್ ರಸ್ತೆ ಇವೆರಡಕ್ಕೂ ಏನು ಕಾಸ್ಟ್ ಆಗುತ್ತದೆ ಅದನ್ನು ಯೋಚನೆ ಮಾಡಿ ಕೆಲಸ ಮಾಡಬೇಕು. ಖರ್ಚು ಲೆಕ್ಕ ಹಾಕಿದರೆ ಕಾಂಕ್ರೀಟ್ ರಸ್ತೆ ಮಾಡಲಿಕ್ಕೆ ಸಾಧ್ಯವಿದೆ. ಲೋಕೋಪಯೋಗಿ ಇಲಾಖೆ ಮತ್ತು ನೀರಾವರಿ ಇಲಾಖೆ ಎರಡು ಇಲಾಖೆಗಳು ಚುರುಕಾಗಿ ಕೆಲಸ ಮಾಡಬೇಕು. ನೀರಾವರಿ ಕೆಲಸ ಆಗದಿದ್ದರೆ ಜನರಿಗೆ ತೊಂದರೆಯಾಗುತ್ತದೆ. ಸೇತುವೆ ಕೆಲಸ ಡಾಂಬರು ಹಾಕತಕ್ಕ ಕೆಲಸ ಯಾವುದೇ ಕೆಲಸವನ್ನಾದರೂ ಬೇಗ ಬೇಗ ಮಾಡಬೇಕು. ನೀರಾವರಿ ಕೆಲಸ ಕಾರ್ಯಗಳನ್ನು ತೆಗೆದುಕೊಂಡರೆ, ಅಂತರಜಲ ಸಿಗುವ ವ್ಯವಸ್ಥೆ ಕೂಡ ಆಗುತ್ತದೆ. ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಗಳಲ್ಲಿ ಸುಮಾರು ೨೦–೨೫ ವರ್ಷಗಳಿಂದ ಅನೇಕ ಕೆಲಸ ಕಾರ್ಯಗಳು ಅನೇಕ ಕಾರಣಗಳಿಂದ ನಿಂತಿವೆ. ಅವುಗಳನ್ನು ಮಾನ್ಯ ದೇವೇಗೌಡರು ಬೇಗ ಪೂರೈಸಿಕೊಡಬೇಕು. ಮಾನ್ಯ ಸಚಿವರು ಅಧಿಕಾರಕ್ಕೆ ಬಂದಮೇಲೆ ೨೫ ಸಾವಿರ ಜನರಿಗೆ ಕಾಯಂ ನೌಕರಿ ಕೊಡುವಂತಹ ಅಭೂತಪೂರ್ವ ವ್ಯವಸ್ಥೆಯಾಗಿದೆ. ಆದರೂ ಸಮಾಧಾನವಾಗಿಲ್ಲ. ನಾನು ಕಾರ್ಮಿಕ ಸಂಘದ ಅಧ್ಯಕ್ಷನಾಗಿದ್ದೇನೆ. ಅನೇಕ ವರ್ಷಗಳಿಂದ ಆ ಜನರು ದುಡಿಯುತ್ತಿದ್ದಾರೆ. ದಿನಾಂಕ ೧–೪–೧೯೮೨ರಿಂದ ಆಚೆಗೆ ಇದ್ದವರನ್ನು ಮಾತ್ರ ತೆಗೆದುಕೊಳ್ಳುವುದಕ್ಕೆ ಹೊರಟಿದ್ದಾರೆ. ದಿನಾಂಕ ೧–೪–೧೯೮೨ರಿಂದ ಈಚೆಗೆ ಸಾವಿರಾರು ಜನ ಮನೆಗೆ ಬರುವಂತಹ ಪರಿಸ್ಥಿತಿ ಇದೆ. ಕಾರ್ಮಿಕರು ನಾಡಿನ ಅಭಿವೃದ್ಧಿಗಾಗಿ ಅವಿಶ್ರಾಂತವಾಗಿ ಕೆಲಸ ಮಾಡಿದ್ದಾರೆ. ಅಂತಹವರಿಗೆ ಪ್ರೋತ್ಸಾಹ ಕೊಡಬೇಕೆಂದು ಹೇಳಿ ಮಾನ್ಯ ಸಚಿವರು ಇಟ್ಟಂತಹ ಬೇಡಿಕೆಯನ್ನು ಬೆಂಬಲಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI MOHAMED LIAQUDDIN BURANUDDIN (Bidar).—Sir, at the very outset I may say that the Bidar District is the most backward district in the state and the present budget and also the Hon. Minister for Public Works and Irrigation have ignored the needs of the Bidar district. I follow the line of our leader Sri Bangarappa and Sri Veerappa Moily and oppose this budget. Bidar, as you know Sir, is the farthest district from the head quarters and I remember a saying in Urdu that 'Nazar se dur; dil se be dur' i.e., a person who is away from the sight is also away from the heart. This rule is being fololwed by our state. Bidar district is having worst roads and no care is taken even to repair the existing roads. As my friend Sri Veeraiah Swamy has stated the Bidar-Bangalore road which is a state highway road, it is neglected and it is the worst road in the state. The persons coming from Bidar and Gulbarga are not travelling from this route. They are preferring to come from Bidar and Gulbarga via Hyderabad. I earnestly request Hon. Minister for Public Works to repair the roads and make it good for link purposes. The Bidar district is not having internal roads also. The Bidar-Chincholi road had been constructed up to Bingu and thereafter it has been totally left off. Since last three years

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

there is no work on this road and from Bangu to Chincholi there is no progress of work since last three years. Similar is the fate of Bidar-Bhatgal road. No doubt metal collection was done. There is no progress of work, and one project to be constructed on Naranja river. If that project is constructed, then only it will connect the National Highway No. 9. Unless these roads are constructed the means of communication will not be available to the Bidar public. Coming to my constituency many of the villages are not having roads from the state highway or the main roads. These link roads are needed to be constructed immediately. Similar is the fate of buildings in Bidar district the construction of school buildings has not taken place since last three years. In the year 1983 the Hon. Minister for Law and Parliamentory Affairs had visited the Bidar Bar Association. He has promised that the Bar Association building will be constructed and he said that the building would be taken up in the budget. But, the building has been omitted in this year and the Bar Association building has not taken place. All the works in my constituency as well as in Bidar district are neglected. Now, I will speak about the work of Karanja project which is the *hope* for the Bidar farmers and which is the cherished desire of the Bidar farmers for revolution in this distreet. This project was commenced 10 or 12 years back. At the time of the commencement of this project, the cost was only Rs. 10 crores and now the cost of the project has gone up to Rs. 60 crores i.e., six times the rates have gone high. The work on the project is still in a very bad shape. If the Karanja project is commenced then 7 villages are going to be submerged. In the present budget the rehabilitation of 2 villages has been taken up i.e., Sangoli and Atval villages. As regards the remaining 5 villages there is no provision in the budget. Unless all these 7 villages and the persons whose houses are going to be submerged are rehabilitated the work of Karanja will not be taken up. Moreover, the acquisition of land needs more than Rs. 4 crores. But, in the present budget there is no provision for the payment of this acquired land. It is proposed only that 1,000 acres are going to be acquired. So, the progress of work on Karanja project is not as speedy as it was promised. At the time of interim budget I had submitted to the Chair and the Hon. Chief Minister had promised that the project will be taken up as early as possible. Unless 10 to 12 crores is spared for the currend year, this project will not come up. Last year also I hat personally visited the spot. Practically there was no word going on the Karanja project. It was promised in the interik budget that the work will be started soon. But the work om this project is not started. Even for land acquisition thu Executive Engineer has stated that unless funds are provide

the work cannot be taken up. He also told that rehabilitation of seven villages has to be taken up and land acquisition will have to be completed. Unless this is done, there will not be any progress in the Karanja project. If the work as promised is taken up, at least 1000 hectares could be irrigated this year. But still the promise remains unfulfilled. Apart from Karanja, there is no other major or medium project in Bidar district. The only two other projects are Chulkinala and Mullamari. The work on these projects is very slow. These projects are also starving for want of funds. Unless sufficient funds are provided these projects cannot be completed in time. This step-motherly treatment for Bidrr district should not be continued in future. It has been the declared policy of the Government of Karnataka to have irrigation tanks or percolation tanks in all villages. But, Bidar District, which is a backward district has been omitted from the list. Last time I had stated that Bidar district doesn't have any irrigation tank or percolation tank. I don't know why Bidar has been omitted from the list ? It was promised to construct irrigation and percolation tanks in Bidar district, but in the budget there is no provision at all.

As regards bridges, two bridges are to be constructed in my constituency. Unless these bridges are started, Chillargi village and A.P. border will not be connected and the National Highway will remain unconnected from Bidar district. Similarly, roads to the northern side of Bidar town, i.e., roads connecting Gadgi and Chillargi villages, there is no progress. For the last three years we have seen only metal collection. Even these metals have been stolen away. Heaps of metals are lying and they have not been utilised for construction work. The roads are in a very bad condition. There is no communication to Bidar town. In our district only private buses are running. KSRTC people are saying that since roads are bad, they cannot run the buses. Our hon. Minister Sri P. G.R. Sindhia has promised that he will nationalise these routes. Unless the roads are constructed nationalisation of routes cannot take place.

Construction of roads as well as completion of Karanja, Chulkinala and Mullamari projects may be taken up at the earliest point of time. Unless these projects are completed, the Bidar district, which is backward, cannot dream to progress or come on part with other districts. The Karanja project is estimated to irrigate 32,738 hectares in Bhalki taluk and 4047 hectares will be irrigated by fore-share lift iarigation scheme. In Bidar district there is no lift-irrigation. In Chincholi the lift-irrigation scheme is being taken up. I had personally

visited this lift irrigation project. But there is no work going on. The Assistant Engineer who had accompanied me stated that there is no provision in the budget. I request the Hon. Minister for Public Works and Irrigation to look into this matter and provide sufficient provision in the budget for these minor and major irrigation projects and also for bridges and roads. Lastly, I thank the Hon'ble Chair for having given me an opportunity to speak on these demands.

† ಶ್ರೀ ಎಚ್.ಜಿ. ಚೆನ್ನಪ್ಪ (ಮಾಗಡಿ).—ಮಾನ್ಯ ಅಧ್ಯಕ್ಷರೇ, ಈ ದಿವಸ ಇಲ್ಲಿ ಮಂಡಿಸಿ ಚರ್ಚೆ ಆಗುತ್ತಿರತಕ್ಕ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯ ಆಯವ್ಯಯವನ್ನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಕಳೆದ ಸಾರಿ ಅನೇಕ ಕೆಲಸಕಾರ್ಯ ಗಳನ್ನು ಈ ಇಲಾಖೆಯಿಂದ ತೆಗೆದುಕೊಂಡಿದ್ದು ಅವು ಇನ್ನೂ ಕಾರ್ಯಗತವಾಗಿಲ್ಲ. ಅವುಗಳನ್ನೆಲ್ಲಾ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ ಮತ್ತು ಇವತ್ತು ದೇಶದಲ್ಲಿ ರಸ್ತೆ ಹಾಗೂ ಇತರೆ ಕೆಲಸಕಾರ್ಯಗಳನ್ನು ಹೆಚ್ಚಾಗಿ ಮಾಡಿಸಬೇಕಾದ ಪರಿಸ್ಥಿತಿಯಲ್ಲಿ ರಿಲೀಫ್ ಕಾಮಗಾರಿ ಕೆಳಗೆ ಇವುಗಳನ್ನು ಮಾಡಿಸುತ್ತಿದ್ದಾರೆ. ಇನ್ನು ನೀರಾವರಿ ಬಗ್ಗೆ ಹೇಳುವುದಾದರೆ ಇಂತಹ ಕಾಮಗಾರಿಗಳು ದೇಶದಲ್ಲಿ ಶಾಶ್ವತವಾಗಿ ಉಳಿಯುತ್ತವೆ ಹಾಗೂ ದೇಶದ ಸ್ಥಿತಿಯನ್ನು ಸುಧಾರಿಸುವುದಕ್ಕೆ ಇದರಿಂದ ಸಹಾಯಕವಾಗುತ್ತದೆ. ಇವತ್ತು ದೇಶದಲ್ಲಿ ದೊಡ್ಡ ನೀರಾವರಿ ಕೆಲಸಗಳನ್ನು ಹೆಚ್ಚು ಮಾಡುವ ಕೆಲಸ ನಡೆಯುತ್ತಿದೆ. ಇವತ್ತು ಬಡ್ಜೆಟ್‌ನಲ್ಲಿ ಎಲ್ಲಿ ಓದಿದರೂ ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ಗೆ ಇಟ್ಟಿರುವ ಅಂಕಿ ಅಂಶಗಳೇ ಕಾಣುತ್ತವೆ. ಇದನ್ನು ಹೆಚ್ಚು ಮಾಡುವುದರಿಂದ ದೇಶದಲ್ಲಿ ಸಮುದ್ರಕ್ಕೆ ಹೋಗುವ ನೀರನ್ನು ತಡೆಗಟ್ಟಬಹುದು. ಹಾಗೂ ಇದರಿಂದ ಭೂಮಿಯ ಒಳಗೆ ಹರಿಯುವ ನೀರು ಮೇಲೆ ಬರುವುದರಿಂದ ಲಿಫ್ಟ್ ಇರಿಗೇಷನ್‌ಗೆ ಇದರಿಂದ ಹೆಚ್ಚು ಸಹಾಯಕವಾಗುತ್ತದೆ. ಮತ್ತು ಕೆರೆ ಕಟ್ಟೆಗಳಲ್ಲಿ ನೀರು ಸೇರುವುದರಿಂದ ದೇಶದಲ್ಲಿ ನೀರಾವರಿ ಸೌಕರ್ಯಕ್ಕೆ ಹೆಚ್ಚು ಅನುಕೂಲವಾಗುತ್ತದೆ. ಇದರಿಂದ ಸಣ್ಣ ಸಣ್ಣ ಭಾಗದಲ್ಲೂ ಕೂಡಾ ನೀರಾವರಿ ಸೌಕರ್ಯ ಹೆಚ್ಚು ಮಾಡಿ ದೇಶದ ಆರ್ಥಿಕಸ್ಥಿತಿಯನ್ನು ಸುಧಾರಿಸುವುದಕ್ಕೆ ಸಹಾಯಕವಾಗುತ್ತದೆ. ಇವತ್ತು ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುವುದರಿಂದ ಇವತ್ತು ಕೆಲವೇ ಭಾಗದಲ್ಲಿ ನೀರಾವರಿಯನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ಹೆಚ್ಚಿನ ಜನರಿಗೆ ಸೌಕರ್ಯ ಸಿಗುವುದಿಲ್ಲ. ಇವತ್ತು ಹೆಚ್ಚಿನ ಮಟ್ಟದಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವುದರಿಂದ ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದೊಂದು ಕಟ್ಟೆಗಳನ್ನು ಕಟ್ಟಿ ನೀರನ್ನು ಪಿಕಪ್ ಮಾಡಿದರೆ ನೀರು ಭೂಮಿಗೆ ಹಂಚಿಕೆಯಾಗಿ ಜಲಾಂಶ ಹೆಚ್ಚಾಗಿ ತೇವಾಂಶ ಜಾಸ್ತಿಯಾಗುವುದರಿಂದ ಅದು ವ್ಯವಸಾಯಕ್ಕೆ ಯೋಗ್ಯವಾಗುವಂತಹ ಪ್ರದೇಶವಾಗುತ್ತದೆ. ದೊಡ್ಡ ಹಾಗೂ ಮಧ್ಯಮ ನೀರಾವರಿ ಯೋಜನೆಗಳಿಗಿಂತಲೂ ಆದಷ್ಟು ಹೆಚ್ಚಿಗೆ ಸಣ್ಣ ನೀರಾವರಿ ಯೋಜನೆಗಳನ್ನು ಮಾಡುವುದರಿಂದ ದೇಶದಲ್ಲಿ ಹೆಚ್ಚಿನ ಕ್ಷಾಮಡಾಮರಗಳನ್ನು ನಿವಾರಣೆ ಮಾಡುವುದಕ್ಕೆ ಮತ್ತು ಬೆಳೆಗಳನ್ನು ಬೆಳೆಯುವುದಕ್ಕೆ ಹಾಗೂ ಇದರಿಂದ ಆಹಾರದ ಕೊರತೆಯನ್ನು ನೀಗುವುದಕ್ಕೆ ಅನುಕೂಲ ಆಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

೫—ಪಿ.ಎಂ.

ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದ ವಿಷಯವನ್ನು ತೆಗೆದುಕೊಳ್ಳುವುದಾದರೆ, ಅನೇಕ ಸಂದರ್ಭಗಳಲ್ಲಿ ನಾನು ಮಾನ್ಯ ಮಂತ್ರಿಯವರಲ್ಲಿ ನಿವೇದಿಸಿಕೊಂಡಿದ್ದೇನೆ. ನಮ್ಮ ತಾಲ್ಲೂಕು ಕ್ಯಾಚ್‌ಮೆಂಟ್ ಏರಿಯಾದಲ್ಲಿ ಬರುತ್ತದೆ. ಚನ್ನಪಟ್ಟಣದಲ್ಲಿ ಕಣ್ವ ರಿಸರ್ವ್‌ಯರ್ ಇದೆ. ರಾಮನಗರಂ ತಾಲ್ಲೂಕಿನಲ್ಲಿ ಮಂಚನಬೆಲೆ ಪ್ರಾಜೆಕ್ಟ್ ಇದೆ. ನಮಗೆ ಯಾವುದೂ ಕೂಡ ಅನುಕೂಲವಾಗಿಲ್ಲ. ಕಾವೇರಿ ಪ್ರಾಜೆಕ್ಟನ್ನು ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡಲು ಉಪಯೋಗಿಸಲಾಗುತ್ತಿದೆ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ನನ್ನ ಕ್ಷೇತ್ರದಲ್ಲಿ ಸಣ್ಣ ಸಣ್ಣ ಕೆರೆಗಳನ್ನು, ಅಥವಾ ಪಿಕಪ್‌ಗಳನ್ನು ಕಟ್ಟಿಕೊಡಬೇಕು. ಏಕೆಂದರೆ ನಮ್ಮಲ್ಲಿ ಕ್ಯಾಚ್‌ಮೆಂಟ್ ಏರಿಯಾ ತೊಂದರೆ ಇರುವುದರಿಂದ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಒದಗಿಸಿಕೊಡಬೇಕೆಂದು ಒತ್ತಾಯಪೂರ್ವಕವಾಗಿ ಮಾನ್ಯ ಸಚಿವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ನಮ್ಮ ಜನತಾ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ೨ ಕೆರೆಗಳನ್ನು ನನ್ನ ಕ್ಷೇತ್ರದಲ್ಲಿ ಮಾಡಿಸಿಕೊಟ್ಟಿದೆ. ಇನ್ನೂ ಎರಡು ಕೆರೆಗಳ ನಿರ್ಮಾಣದ ವಿಚಾರ ಚೀಫ್ ಇಂಜಿನಿಯರ್‌ರವರಿಗೆ ಕಳುಹಿಸಿಕೊಡಲಾಗಿದೆ. ಕ್ಯಾಚ್‌ಮೆಂಟ್ ಏರಿಯಾ ನಿರ್ಬಂಧಗಳನ್ನು ಸಡಿಲಗೊಳಿಸಿ ಆದಷ್ಟು ಬೇಗ ಈ ಕೆರೆಗಳ ನಿರ್ಮಾಣಕ್ಕೆ ಅನುಮೋದನೆಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ನಾವು ಬೆಂಗಳೂರಿಗೆ ೩೦ ಕಿಲೋಮೀಟರ್ ದೂರದಲ್ಲಿ ಇದ್ದರೂ ಕೂಡ ನಾಗಮಂಗಲ ತಾಲ್ಲೂಕಿನಂತೆ ನಾವೂ ಕೂಡ ಮಳೆ ನೆರಳಿನ ಪ್ರದೇಶದಲ್ಲಿ ವಾಸಮಾಡುವಂತಾಗಿದೆ. ನಮ್ಮಲ್ಲಿ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಮಾಡಿಕೊಳ್ಳಲು ಅವಕಾಶ ಇಲ್ಲವಾಗಿದೆ. ನಮ್ಮ ತಾಲ್ಲೂಕನ್ನು ನಮ್ಮ ಪಕ್ಕದ ತಾಲ್ಲೂಕಾದ ಕುಣಿಗಲ್‌ಗೆ ಹೋಲಿಕೆಮಾಡಿ ನೋಡಿದರೆ ಅಲ್ಲಿ ೪೦ ಸಾವಿರ ಎಕರೆ ಪ್ರದೇಶ ನೀರಾವರಿಗೆ ಒಳಪಟ್ಟಿದೆ. ಆದರೆ ನಮ್ಮಲ್ಲಿ ಕೇವಲ ೭ ಲಕ್ಷ ಎಕರೆ ಮಾತ್ರ ಅಚ್ಚುಕಟ್ಟು ಇದೆ. ನಮ್ಮಲ್ಲಿ ಸಣ್ಣ ಸಣ್ಣ ಪಿಕಪ್‌ಗಳನ್ನು, ಸಣ್ಣ ಸಣ್ಣ ಕೆರೆಗಳನ್ನು ಕಟ್ಟಲು ಅವಕಾಶ ಇರುವುದರಿಂದ ಸರ್ಕಾರ ಈ ಕಡೆ ತನ್ನ ಗಮನವನ್ನು ಹರಿಸಿ ಈ ಕೆಲಸಗಳನ್ನು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿನಲ್ಲಿ ರಸ್ತೆ ಕಾಮಗಾರಿಗಳು ನಡೆಯುತ್ತಿರುವುದೇನೋ ಸರಿ. ಆದರೆ ಹಳ್ಳಿಗಳ ಕಡೆ ಹೆಚ್ಚಿನ ರಸ್ತೆ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿ ನೂರಾರು ಸಣ್ಣ ಸಣ್ಣ ಕೆರೆಗಳಿವೆ. ತಾಲ್ಲೂಕು ಬೋರ್ಡ್‌ನಲ್ಲಿ ೧೧೮ ಕೆರೆಗಳ ಕೆಲಸ ಮಾಡಬೇಕೆಂದು ಯೋಜನೆ ಹಾಕಿಕೊಂಡಿದೆ. ಅವುಗಳನ್ನು ದುರಸ್ತಿ ಮಾಡಿಸಿಕೊಟ್ಟರೆ ನಮ್ಮ ತಾಲ್ಲೂಕಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಈ ಕೆರೆಗಳ ದುರಸ್ತಿ ಎಂದರೆ ಕೋಡಿ, ತೂಬುಗಳನ್ನು ರಿಪೇರಿ ಮಾಡಿಸುವುದು. ಇಷ್ಟು ಮಾಡಿಸಿದರೆ ಇನ್ನೂ ಹತ್ತಾರು ಎಕರೆಗೆ ನೀರಾವರಿಯಾಗುತ್ತದೆ. ಕಳೆದ ಹತ್ತಾರು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ನಡೆದಿರತಕ್ಕ ಕೆಲಸಕಾರ್ಯಗಳನ್ನು ನೋಡಿದರೆ ಕಳೆದ ೨-೩ ವರ್ಷಗಳಲ್ಲಿ ಹಿಂದಿಗಿಂತಲೂ ಹೆಚ್ಚಿನ ಕೆಲಸಕಾರ್ಯಗಳಾಗಿವೆ. ಹಿಂದೆ ಯಾವ ಯಾವ ಕೆಲಸಕಾರ್ಯಗಳು ನಿಂತು ಹೋಗಿದ್ದುವು ಅವುಗಳನ್ನು ನಮ್ಮ ಸರ್ಕಾರ ಕೈಗೆತ್ತಿಕೊಂಡು ಪೂರ್ತಿಗೊಳಿಸುತ್ತಿದೆ. ಇದು ನಿಜಕ್ಕೂ ಒಂದು ಸ್ತುತ್ಯಾರ್ಹವಾದ ವಿಷಯ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಮೇಜರ್ ಇರಿಗೇಷನ್ ಮತ್ತು ಮೀಡಿಯಂ ಇರಿಗೇಷನ್‌ಗಿಂತ ಮೈನರ್ ಇರಿಗೇಷನ್ ಕಡೆಗೆ ಹೆಚ್ಚಿನ ಗಮನವನ್ನು ಕೊಟ್ಟರೆ ಒಳ್ಳೆಯ ನೀರಾವರಿ ಆಗುವುದಕ್ಕೆ ಅವಕಾಶ ಇದೆ. ನಾವು ಸಣ್ಣ ವಯಸ್ಸಿನವರಾಗಿದ್ದಾಗ ೨೫ ಅಡಿ, ೫೦ ಅಡಿ ಬಾವಿಯನ್ನು ತೋಡಿದರೆ ನೀರು ಸಿಕ್ಕುತ್ತಿತ್ತು. ಆದರೆ ಇವತ್ತು ೧೫೦-೨೦೦ ಅಡಿ ಬೋರ್‌ವೆಲ್‌ಗಳನ್ನು ಹಾಕಿದರೂ ನೀರು ಸಿಕ್ಕುವುದು ಕಷ್ಟವಾಗಿದೆ. ಬಿದ್ದ ನೀರೆಲ್ಲಾ ಸಮುದ್ರಕ್ಕೆ ಹರಿದುಹೋಗುತ್ತದೆ. ಆ ನೀರನ್ನು ಹಿಡಿದು ಇಡತಕ್ಕ ವ್ಯವಸ್ಥೆ ನಮ್ಮಲ್ಲಿಲ್ಲ. ಆಯಾಯ ಪ್ರದೇಶದಲ್ಲಿ ಬೀಳತಕ್ಕ ಮಳೆ ನೀರನ್ನು ಅಲ್ಲಿಯೇ ಹಿಡಿದು ನಿಲ್ಲಿಸುವ ಸಲುವಾಗಿ ಸಣ್ಣ ಸಣ್ಣ ಕೆರೆ, ಪಿಕಪ್, ಇಲ್ಲವೇ ಡ್ಯಾಂಗಳನ್ನು ಕಟ್ಟಿದರೆ ಅಲ್ಲಿ ನಿಂತ ನೀರೆಲ್ಲಾ ಭೂಮಿಯಲ್ಲಿ ಇಂಗುವಂತೆ ಮಾಡಿದರೆ ಭೂಮಿಯು ತೇವಾಂಶದಿಂದ ಯಾವಾಗಲೂ ಕೂಡಿರುತ್ತದೆ. ಅಲ್ಲಿ ಬಾವಿಗಳನ್ನು ತೋಡಿದರೆ ನೀರು ಮೇಲ್ಭಾಗದಲ್ಲೇ ಸಿಕ್ಕುತ್ತದೆ. ಇವತ್ತು ನೀವು ಒಂದು ಮೇಜರ್ ಇರಿಗೇಷನ್‌ಗೆ ಖರ್ಚುಮಾಡತಕ್ಕ ಹಣದಲ್ಲಿ ನೂರಾರು ಸಣ್ಣ ಸಣ್ಣ ಪಿಕಪ್ ಅಥವಾ ಕೆರೆಗಳನ್ನು ಕಟ್ಟಬಹುದು. ಈ ಅಂಶವನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ರಾಜ್ಯದಲ್ಲಿ ಅದರಲ್ಲೂ ನಮ್ಮ ಕ್ಷೇತ್ರದಲ್ಲಿ ಸಣ್ಣ ಸಣ್ಣ ನೀರಾವರಿಗೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥಿಸಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕುಮಾರಗೌಡ ಎಂ. ಪಾಟೀಲ್ (ಬಸವನಬಾಗೇವಾಡಿ).—ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ನಮ್ಮ ಕರ್ನಾಟಕ ರಾಜ್ಯದಲ್ಲಿ ಬರತಕ್ಕ ಆದಾಯದಲ್ಲಿ ಹೆಚ್ಚಿನ ಹಣವನ್ನು ನಾವು ಈ ಲೋಕೋಪಯೋಗಿ ಇಲಾಖೆಗೋಸ್ಕರ ಖರ್ಚುಮಾಡುತ್ತಿದ್ದೇವೆ. ನಾನು ಒಂದು ಮಾತನ್ನು ಹೇಳದೇ ಹೋದರೆ ಅದು ಆತ್ಮ ವಂಚನೆಯಾಗುತ್ತದೆ. ಏಕೆಂದರೆ ಈ ಇಲಾಖೆಯಲ್ಲಿ ದಿನೇ ದಿನೇ ಕೆಲಸದ ಗುಣಮಟ್ಟ ಕಡಿಮೆಯಾಗಲಿಕ್ಕೆ ಹತ್ತಿದೆ. ಆದರೆ ಇದು ಮಾನ್ಯ ದೇವೇಗೌಡರ ಕಾಲದಲ್ಲಿ ಆಗುತ್ತಿದೆಯೆಂದು ನಾನು ಹೇಳುವುದಕ್ಕೆ ಹೋಗುತ್ತಿಲ್ಲ. ಕಳೆದ ೨೫ ವರ್ಷಗಳಿಂದಲೂ ನಾವು ನೋಡುತ್ತಿದ್ದೇವೆ ಹಿಂದೆ ಏನೇನು ಯೋಜನೆಗಳನ್ನು ಹಾಕಿಕೊಂಡಿದ್ದರು ಅವೆಲ್ಲಾ ಇವತ್ತು ಶಿಥಿಲವಾಗುತ್ತಾ ಬಂದಿವೆ. ನಾರಾಯಣಪುರ ಆಣೆಕಟ್ಟಿನಿಂದ ಚಾನಲ್ ಮುಖಾಂತರ ನೀರನ್ನು ಮೊನ್ನೆ ಬಿಟ್ಟಾಗ ೧೧ನೇ ಕಿಲೋಮೀಟರ್‌ನಲ್ಲಿ ಅದು ಒಡೆದು ಹೋಯಿತು. ಈರೀತಿ ಆದರೆ ಒಂದು ಕಡೆ

ಇದಕ್ಕಾಗಿ ಖರ್ಚು ಮಾಡಿದ ಹಣವೂ ಹೋಗುತ್ತದೆ, ಇನ್ನೊಂದು ಕಡೆ ಜನರೂ ಕೊಚ್ಚಿ ಹೋಗುತ್ತಾರೆ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದ ದೇವೇಗೌಡರಿಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಯಾವುದೇ ಒಂದು ಪ್ರಾಜೆಕ್ಟ್ ಆಗಲಿ. ರಸ್ತೆ ಆಗಲಿ, ಅಥವಾ ಬೇರೆ ಕೆರೆಕಟ್ಟೆಯ ಕೆಲಸವಾಗಲಿ ಅದು ನಿರ್ಮಾಣವಾದ ಮೇಲೆ ಇಂತಿಷ್ಟು ದಿವಸದವರೆಗೆ ಬಾಳಿಕೆ ಬರಬೇಕೆಂದು ಅದರ ಆಯುಷ್ಯವನ್ನು ಲೆಕ್ಕ ಹಾಕಿರುತ್ತಾರೆ. ಅಷ್ಟು ದಿವಸದವರೆಗೂ ಅದು ಬಾಳಿಕೆ ಬರಬೇಕು. ಒಂದು ವೇಳೆ ಆ ಅವಧಿಗೆ ಮುಂಚಿತವಾಗಿಯೇ ಕಿತ್ತುಹೋದರೆ, ಅಥವಾ ಒಡೆದುಹೋದರೆ ಅದಕ್ಕೆ ಸಂಬಂಧಪಟ್ಟ ಎಕ್ಸಿಕ್ಯುಟಿವ್ ಇಂಜಿನಿಯರ್ ಮತ್ತು ಚೀಫ್ ಇಂಜಿನಿಯರ್‌ಗಳ ವಿರುದ್ಧ ಕ್ರಮ ತೆಗೆದುಕೊಂಡು ಅವರನ್ನು ಮನೆಗೆ ಕಳುಹಿಸಬೇಕು.

ಇನ್ನೊಂದು ವಿಷಯವನ್ನು ಹೇಳುವುದಾದರೆ, ಮಾನ್ಯ ದೇವೇಗೌಡರು ರೈತ ಮನೆತನದಿಂದ ಬಂದವರು. ಇವರು ಬಹಳ ಚಾಣಾಕ್ಷರು. ಒಳ್ಳೆಯ ದಕ್ಷತೆಯುಳ್ಳವರು. ಇವತ್ತು ಹೈದರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿ ಯಾವ ಯಾವ ನೀರಾವರಿ ಕೆಲಸಗಳು ಆಗುತ್ತಿವೆ, ಯಾವ ಯಾವ ರಸ್ತೆ ಕೆಲಸಗಳಾಗುತ್ತಿವೆ ಎಂಬುದನ್ನು ನೋಡಿಕೊಂಡು ಬರಲು ಸಾಕಷ್ಟು ಸಮಯ ಹಿಡಿಯುತ್ತದೆ. ಆದ್ದರಿಂದ ಹಿಂದಿನ ಮಾನ್ಯ ಮುಖ್ಯ ಮಂತ್ರಿಗಳಾಗಿದ್ದ ಗುಂಡೂರಾಯರು ಖರೀದಿ ಮಾಡಿದ್ದ ಹೆಲಿಕ್ಯಾಪ್ಟರ್ ಏನಿದೆ ಅದನ್ನೇ ತೆಗೆದುಕೊಂಡು ಕನಿಷ್ಟ ೩ ತಿಂಗಳಿಗೊಮ್ಮೆ ಯಾದರೂ ನೋಡಿಕೊಂಡು ಬರಲಿ. ಹಾಗೆ ಮಾಡದೇ ಹೋದರೆ ಈ ಕೆಲಸಗಳಿಗಾಗಿ ತಂದು ಹಾಕಿರಬಹುದಾದ ಕಬ್ಬಿಣ, ಸಿಮೆಂಟ್ ಎಲ್ಲವೂ ಹೊರಗಡೆ ಹೋಗುತ್ತದೆ. ಅವರು ಕಾರ್‌ನಲ್ಲಿ ಎಲ್ಲಾ ಕಡೆಯೂ ನೋಡಿಕೊಂಡು ಬರುವುದು ಕಷ್ಟವಾಗುತ್ತದೆ. ಆದ್ದರಿಂದ ಆ ಹೆಲಿಕ್ಯಾಪ್ಟರ್‌ನ್ನು ಕನಿಷ್ಟ ೩ ತಿಂಗಳಿಗೆ ಒಮ್ಮೆಯಾದರೂ ಉಪಯೋಗಿಸಿಕೊಂಡು ರಾಜ್ಯದಲ್ಲಿ ಎಲ್ಲೆಲ್ಲಿ ಲೋಕೋಪಯೋಗಿ ಇಲಾಖೆಯ ಕೆಲಸಗಳಾಗುತ್ತಿವೆ ಎಂಬುದನ್ನು ನೋಡಿಕೊಂಡು ಬರಲೆಂದು ಹೇಳಬಯಸುತ್ತೇನೆ. ಅಪ್ಪರ್ ಕೃಷ್ಣಾ ಯೋಜನೆ ಏನಿದೆ ಇದಕ್ಕೆ ೧೯೬೪ರಲ್ಲೇ ಶ್ರೀಮಾನ್ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಅಡಿಗಲ್ಲನ್ನು ಹಾಕಿದ್ದರು. ಇದನ್ನು ಆವತ್ತೇ ಪೂರೈಸಿದ್ದಿದ್ದರೆ ಸರಕಾರಕ್ಕೆ ಸಾವಿರಾರು ಕೋಟಿ ರೂಪಾಯಿಗಳ ಉಳಿತಾಯವಾಗುತ್ತಿತ್ತು. ಈ ಯೋಜನೆಯ ಕೆಳಗಡೆ ಹೆಚ್ಚಿನ ಹಳ್ಳಿಗಳು ಮುಳುಗಡೆಯಾಗುತ್ತಿವೆ. ಬಾಗಲಕೋಟೆ ಪಟ್ಟಣ ಕೂಡ ಮುಳುಗಡೆಯಾಗುತ್ತದೆ. ಆದ್ದರಿಂದ ಬಾಗಲಕೋಟೆಯನ್ನು ಸ್ಥಳಾಂತರ ಮಾಡಬೇಕು ಮತ್ತು ಈ ಡ್ಯಾಂಗೆ ಕ್ರಸ್ಟ್ ಗೇಟನ್ನು ಇಡಬೇಕು. ತಾವು ಈ ಕೆಲಸವನ್ನು ಮಾಡಿದರೆ ಇನ್ನು ೧೦ ವರ್ಷಗಳಲ್ಲಿ ಈ ಯೋಜನೆ ಮುಗಿಯಲು ಸಾಧ್ಯವಾಗುತ್ತದೆ. ಈಗಲೇ ನೀವು ಇದಕ್ಕೆ ಕಾಲುವೆಗಳನ್ನು ರಚಿಸಬೇಕು. ಈ ಯೋಜನೆಯ ಕೆಳಗೆ ಸುಮಾರು ೧೫೦ ಹಳ್ಳಿಗಳು ಮುಳುಗಡೆ ಆಗುತ್ತವೆ. ಈ ಪ್ರದೇಶವೆಲ್ಲಾ ಬಹಳ ಫಲವತ್ತಾದುದು.

ನಮ್ಮ ಜಿಲ್ಲೆಯಲ್ಲಿ ಇರತಕ್ಕ ಅಪ್ಪರ್ ಕೃಷ್ಣಾ ಯೋಜನೆ, ಇದರ ಅಡಿಯಲ್ಲಿ ೧೫೦ ಮೈಲಿ ಫಲವತ್ತಾದ ಪ್ರದೇಶ ಬರುತ್ತದೆ. ಇದಕ್ಕಾಗಿ ಬಿಜಾಪುರ ಜಿಲ್ಲೆಯವರು ಬಹಳವಾಗಿ ತ್ಯಾಗ ಮಾಡಿದ್ದಾರೆ. ತ್ಯಾಗದ ಪ್ರತಿಫಲವಾಗಿ ಈ ನೀರಾವರಿ ಯೋಜನೆಗೆ ಎಷ್ಟು ಜಮೀನು ಒಳಪಡುತ್ತದೆಯೋ ಅಷ್ಟನ್ನೂ ನೀರಾವರಿಗೆ ಒಳಪಡಿಸದೆಹೋದರೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ. ಆದ್ದರಿಂದ ದಯಮಾಡಿಟ್ಟು ಇದನ್ನು ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸತಕ್ಕಂಥ ಪ್ರಯತ್ನ ಮಾಡಬೇಕು ಈ ಸಂದರ್ಭದಲ್ಲಿ ಬಸವಣ್ಣನವರು ಹೇಳಿದ ಒಂದು ಮಾತು ತಮ್ಮ ನೆನಪಿಗೆ ತರುತ್ತೇನೆ.

''ಲೋಕವೇ ಎನ್ನ ಮನೆ

ಮಾನವ ಕುಲವೇ ನಮ್ಮ ಕುಲ''

ಎಂದಹಾಗೆ ತಾರತಮ್ಯವನ್ನು ತಾವು ಮಾಡುತ್ತೀರೆಂದು ನಾನು ಹೇಳುತ್ತಿಲ್ಲ. ಇಂದು ಯಾರೇ ರಾಜ್ಯವನ್ನು ಆಳುತ್ತಿರಲಿ ಅವರು ಹಿರಿಯಣ್ಣ ಇದ್ದಹಾಗೆ. ನಾಲ್ಕುಕೋಟಿ ಜನರ ಹಿತ ಮುಖ್ಯ. ಯಾರ ಬಗ್ಗೆಯೂ ತಾರತಮ್ಯ ಮಾಡಬಾರದೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಶರಣಬಸಪ್ಪ ಬಿ. ಪಾಟೀಲ್ (ಆಲಂದ್).— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರು ಮಂಡಿಸಿದ ವರದಿಯ ಬಗ್ಗೆ ಮಾತನಾಡುತ್ತಾ ನನ್ನ ವಿಭಾಗದಲ್ಲಿ ಅತಿ ದೊಡ್ಡ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಹೇಳಬಯಸುತ್ತೇನೆ. ಇದರಲ್ಲಿ ಮುಖ್ಯವಾಗಿ ಕೃಷ್ಣಾ ಬಲದಂಡೆ ಯೋಜನೆಯನ್ನು ೧೯೬೧ನೇ ಇಸವಿಯಲ್ಲಿ ಅಂದಿನ ಪ್ರಧಾನಮಂತ್ರಿಗಳಾಗಿದ್ದ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಅಡಿಗಲ್ಲನ್ನು ಹಾಕಿದ್ದರು ಆದಾದ ನಂತರ ೧೯೬೧ ರಿಂದ ಯಾವ ಕೆಲಸವೂ ಆಗಲಿಲ್ಲ. ೧೯೭೮ರಲ್ಲಿ ಮಾನ್ಯ ವೀರೇಂದ್ರ ಪಾಟೀಲ್‌ರವರು ಲೋಕೋಪಯೋಗಿ ಮಂತ್ರಿಗಳಾಗಿದ್ದಾಗ ವಿಶ್ವಬ್ಯಾಂಕ್‌ನ ನೆರವಿನಿಂದ ಈ ಯೋಜನೆಯು ಅತಿಮುಖ್ಯವಾದ ಯೋಜನೆ ಎಂದು ತೆಗೆದುಕೊಂಡನಂತರ ಈ ಯೋಜನೆಯು ಪ್ರಾರಂಭವಾಯಿತು, ೧೯೭೮ ರಿಂದ ೧೯೮೩ ರ ವರೆಗೆ ನಮ್ಮ ಭಾಗದಲ್ಲಿ ಸಾಕಷ್ಟು ಕೆಲಸವಾಗಲಿಲ್ಲ. ೧೯೮೩ ರಲ್ಲಿ ೧೦ ಲಕ್ಷ ಎಕರೆ ನೀರಾವರಿಯಾಗ ಬೇಕಾದುದು ಈಗ ನಮ್ಮಲ್ಲಿ ನೀರಾವರಿ ಆಗಿರುವುದು ಸುಮಾರು ೫ ಸಾವಿರ ಎಕರೆಗಳಿಗೆ ಎಂದು ಮಾನ್ಯ ಹಿರಿಯರಾದ ಶ್ರೀ ಎಂ. ಎಸ್. ಕೃಷ್ಣನ್‌ರವರು ಹೇಳಿದರು. ಈ ಯೋಜನೆ ವೆಚ್ಚ ಮೊದಲು ೧೬೦ ಕೋಟಿ ಇದ್ದುದು ಈಪತ್ತು ೧,೮೦೦ ಕೋಟಿ ಅಂದಾಜಿಗೆ ಬಂದಿರತಕ್ಕಂಥದ್ದನ್ನು ನಾನು ಪ್ರಸ್ತಾಪ ಮಾಡಬೇಕಾಗಿದೆ. ಇದಲ್ಲದೆ ನಮ್ಮ ಲೋಕೋಪಯೋಗಿ ಸಚಿವರಾದ ಶ್ರೀಮಾನ್ ದೇವೇಗೌಡರು ನಮ್ಮ ಭಾಗಕ್ಕೆ ಬಂದಿದ್ದಾಗ ಸಣ್ಣ ರೈತರ ನೇತೃತ್ವದಲ್ಲಿ ಮನವಿಯನ್ನು ಸಲ್ಲಿಸಿದಾಗ ಆದಷ್ಟು ತ್ವರಿತವಾಗಿ ಗಮನಕ್ಕೆ ತೆಗೆದುಕೊಂಡು ಈ ಕೆಲಸವನ್ನು ಮುಗಿಸಿ ಕೊಡುತ್ತೇನೆ ಎಂದು ಹೇಳಿದರು. ಅದೇ ಸಂದರ್ಭದಲ್ಲಿ ನೀರು ಸಿಗದೆ ಇರುವ ಶಹಪುರದವರು ತಮ್ಮ ಕಳವಳವನ್ನು ವ್ಯಕ್ತ ಪಡಿಸಿದರು, ಗುಲ್ಬರ್ಗಾ ಜಿಲ್ಲೆ ಯಾವಾಗಲೂ ಬರಗಾಲ ಪೀಡಿತ ಪ್ರದೇಶವಾಗಿರುವುದರಿಂದ ಈ ಪ್ರದೇಶ ನೀರಾವರಿಯಾದರೆ ಬಹಳ ಜನರಿಗೆ ಅನುಕೂಲವಾಗುತ್ತದೆ, ಆದ್ದರಿಂದ ಈ ಯೋಜನೆಯ ಅಗತ್ಯತೆಯನ್ನು ಮಾನ್ಯ ಮಂತ್ರಿಗಳಲ್ಲಿ ಒತ್ತಾಯಿಸುತ್ತಾನೆ. ಇದಲ್ಲದೆ ಈ ಯೋಜನೆಯ ಕಾರ್ಯ ವಿಳಂಬವಾಗುವುದಕ್ಕೆ ಕಾರಣವೇನೆಂದು ನಮ್ಮ ಹಿರಿಯರಾದ ಮಾನ್ಯ ವೀರಪ್ಪಮೊಯಿಲಿಯವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ, ಈ ವಿಳಂಬಕ್ಕೆ ಅಧಿಕಾರಿ ವರ್ಗವೇ ಕಾರಣವೆಂದೂ ಕೂಡ ಹೇಳಿದ್ದಾರೆ, ಮತ್ತೆ ಕಂಟ್ರಾಕ್ಟ ಕೊಡತಕ್ಕಂಥ ವ್ಯವಸ್ಥೆಯ ಬಗ್ಗೆಯೂ ಕೂಡ ಪ್ರಸ್ತಾಪ ಮಾಡಿದ್ದಾರೆ, ಇದನ್ನು ತಾವು ಸ್ವತಃ ಪರಿಶೀಲನೆ ಮಾಡಿ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ಹೇಳಬೇಕು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳಿಗೆ ಶಹಪುರ ತಾಲ್ಲೂಕು ನಮ್ಮ ದೇಶದ ದುಬಾಯಿ ಯಾಗಿದೆ. ಯಾರು ಕೇಳತಕ್ಕಂಥ ಪರಿಸ್ಥಿತಿಯಲ್ಲಿಲ್ಲ. ಇಲ್ಲಿ ನಡೆಯದಿರತಕ್ಕಂಥ ಕಾರ್ಯಗಳು ನಡೆಯುತ್ತಿವೆ. ಇದರ ಬಗ್ಗೆ ಒಂದು ಸಮಿತಿಯನ್ನು ನೇಮಿಸಿ ಏನು ನಡೆದಿದೆ ಎಂಬುದನ್ನೂ ಕೂಡ ವಿಚಾರ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಈ ಯೋಜನೆಯ ಮೊದಲ ಹಂತಕ್ಕೆ ಸುಮಾರು ಒಂದು ಕೋಟಿ ರೂಪಾಯಿಗಳ ವೆಚ್ಚವಾಗಿದೆ. ಇದರ ಕಾರ್ಯನಿರ್ವಹಣೆ ಎಷ್ಟರ ಮಟ್ಟಿಗೆ ಸಾಗಿದೆ ಎಂದೂ ಕೂಡ ಮಾನ್ಯ ಸಚಿವರು ನೋಡಬೇಕಾಗಿದೆ.

ಇನ್ನೂ ಕಾಡ ಅಭಿವೃದ್ಧಿಯ ಬಗ್ಗೆ ಹೇಳುವುದಾದರೆ ಕಾಡ ಡೆವಲಪ್‌ಮೆಂಟ್ ಬೋರ್ಡಿಗೆ ಅಧ್ಯಕ್ಷರನ್ನು ನೇಮಿಸುವಾಗ ನೀರಾವರಿ ಯೋಜನೆಗಳಬಗ್ಗೆ ಚೆನ್ನಾಗಿ ತಿಳಿದುಕೊಂಡವರನ್ನೇ ನೇಮಿಸಬೇಕು. ನಮ್ಮ ಏರಿಯಾದವರನ್ನೇ ಕಾಡ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಮತ್ತೆ ನಮ್ಮ ಭಾಗಕ್ಕೆ ನೀರಾವರಿಗಾಗಿ ಪಂಪ್ ಸೆಟ್ಟುಗಳನ್ನು ಸಾಕಷ್ಟು ಕೊಡತಕ್ಕಂಥದ್ದು ಬಹಳ ಅವಶ್ಯಕತೆ ಇರುತ್ತದೆ. ಶಹಾಪುರ ಜೇವರಗಿ ಎಲ್ಲ ಕಡೆ ಮನೆಗಳನ್ನು ಕಟ್ಟಿಸಿ ಕೊಡಬೇಕೆಂದೂ ಕೂಡ ಕೇಳಿಕೊಂಡಿದ್ದೇವೆ. ಹೈದರಾಬಾದ್ ಕರ್ನಾಟಕದಿಂದ ಕಾಂಗ್ರೆಸ್‌ನವರೇ ಜಾಸ್ತಿ ಬಂದಿರುತ್ತಾರೆಂದು ಸಚಿವರು ನಮ್ಮ ಭಾಗವನ್ನು ಕೈಬಿಟ್ಟಿದ್ದಾರೆಂದು ತಿಳಿಯುತ್ತದೆ. ಹೈದರಾಬಾದ್ ಕರ್ನಾಟಕಕ್ಕೆ ಮಾನ್ಯ ಸಚಿವರು ಬಂದು ಕಣ್ಣಾರೆ ನೋಡಿರಬಹುದು. ರಾಯಚೂರು ಗುಲ್ಬರ್ಗಾ ರಸ್ತೆ ಏನು ಇದೆ. ಇದು ಮಣ್ಣಿನ ರಸ್ತೆಯಾಗಿರುತ್ತದೆ. ದಯವಿಟ್ಟು ಕಲ್ಲು ರಸ್ತೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಚಿತ್ತಾಪುರದಿಂದ ಶಹಪೂರಕ್ಕೆ ಹೋಗುವ ಮಾರ್ಗದಲ್ಲಿ ಇರತಕ್ಕಂಥ ಒಂದು ಬ್ರಿಡ್ಜ್ ೧೯೭೩–೭೪ರಲ್ಲಿ ತೆಗೆದುಕೊಂಡದ್ದು. ಇನ್ನೂವರೆಗೆ ಅದನ್ನು ಪೂರ್ತಿ ಮಾಡಿಲ್ಲ. ಅದನ್ನು ಈ ಸಲವೂ ಕೈಬಿಟ್ಟಿದ್ದಾರೆ. ದಯವಿಟ್ಟು ಅದನ್ನೂ ಕೂಡ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

†ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ). ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಲೋಕೋಪಯೋಗಿ ಸಚಿವರು ಮಂಡಿಸಿರತಕ್ಕಂಥ ೧೯೮೫–೮೬ನೇ ಸಾಲಿನ ಆಯವ್ಯಯವನ್ನು ಸ್ವಾಗತಿಸುತ್ತಾ ನನ್ನ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಆಗಬೇಕಾಗಿರತಕ್ಕಂಥ ಒಂದೆರಡು ಮುಖ್ಯವಾದ ಕೆಲಸ ಕಾರ್ಯಗಳ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಕಾಲನಿಮಿತ್ತವಾಗಿ ಹೆಚ್ಚು ಮಾತನಾಡಲಿಕ್ಕೆ ಅವಕಾಶವಿಲ್ಲದ ಕಾರಣ ಹೆಚ್ಚಿಗೆ ಮಾತನಾಡಬಯಸುವುದಿಲ್ಲ.

ಮಾನ್ಯ ಅಧ್ಯಕ್ಷರೇ ನಮ್ಮ ಜಿಲ್ಲೆಯಲ್ಲಿ ಭದ್ರಾ ಯೋಜನೆಯು ೧೯೭೭ನೇ ಇಸವಿಯಲ್ಲಿ ಪ್ರಾರಂಭ ವಾಯಿತು. ೧,೧೬,೦೦೦ ಹೆಕ್ಟೇರ್ ಜಮೀನು ನೀರಾವರಿ ಕಾಮಗಾರಿಗಳು ಆಗಿದ್ದು, ಇತ್ತೀಚೆಗೆ ಸುಮಾರು ೪–೫ ವರ್ಷಗಳಿಂದ ಈ ಯೋಜನೆಯ ಅಡಿಯಲ್ಲಿ ಬರತಕ್ಕಂಥ ''ಕಾಡಾ ಡವಲಪ್‌ಮೆಂಟ್'' ಪ್ಲಾನ್ ಬಗ್ಗೆ ಲೋಕೋಪಯೋಗಿ ಇಲಾಖೆಯವರು ಏನೇನೂ ಹಣವನ್ನು ಕೊಡುತ್ತಿಲ್ಲ. ಈ ವರ್ಷದ ಅನುದಾನಪತ್ರದಲ್ಲಿ ಬಹಳ ಕಡಿಮೆ ಹಣ ಇಟ್ಟಿದ್ದಾರೆ. ಇದರಿಂದ ಬಹುಶಃ ನಮ್ಮ ಕ್ಷೇತ್ರದ ಜನತೆ ಯನ್ನು, ಅಧಿಕಾರಿಗಳನ್ನು ಸಮಾಧಾನಗೊಳಿಸಬಹುದು ಇದನ್ನು ಮುಂದಿನ ವರ್ಷ ಹಂತ ಹಂತವಾಗಿ ಮಾಡಿ ಇದರ ಉಪಯೋಗ ಪಡೆಯುತ್ತೇವೆ ಎಂಬ ಸಂತೋಷ ನಮಗೆ ಇತ್ತು. ಆದರೆ ಈಗ ನೋಡ ಲಾಗಿ, ಕೇವಲ ೩೪ ಲಕ್ಷ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ಇದು ಅವರಿಗೆ ಸಂಬಳ ಕೊಡಲಿಕ್ಕೂ ಸಾಲದು. ಇದೇ ತರಹ '' ಕಾಡಾ '' ಯೋಜನೆಗೆ ಕೇವಲ ೩೦ ಲಕ್ಷ ರೂಪಾಯಿಗಳನ್ನು ಇಟ್ಟಿ ದ್ದಾರೆ. ಕಳೆದ ಮಾರ್ಚ್ ೫ನೇ ತಾರೀಖು ಮಾನ್ಯ ಮಂತ್ರಿಗಳ ಸಮ್ಮುಖದಲ್ಲಿ ಎಲ್ಲಾ ಶಾಸಕರು ಧರಣಿ ಹೂಡುತ್ತೇವೆ ಎಂದು ಹೇಳಿದಾಗ '' ಬೇಡ ನಿಮ್ಮ ಕಾಡಾ ಯೋಜನೆ ನೆಗ್ಲೆಟ್ ಆಗಿರುವುದು ನಿಜ. ೧೯೮೫–೮೬ರಲ್ಲಿ ಹೆಚ್ಚಿಗೆ ದುಡ್ಡು ಕೊಡುತ್ತೇನೆ. ಎಂದು ಮಾನ್ಯ ಸಚಿವರೇ ವಾಗ್ದಾನ ಮಾಡಿದ್ದರು ಆದ್ದರಿಂದ ನಾನು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಕಳಕಳಿಯಿಂದ ಕೇಳುವುದೇನೆಂದರೆ, ಅವರು ಕೊಟ್ಟಿರುವ ವಾಗ್ದಾನ ಈಡೇರಿಲ್ಲ. ದಯವಿಟ್ಟು ನಮ್ಮ ಕ್ಷೇತ್ರದ ಜನರಿಗೆ ಮುಖ ತೋರಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ವರ್ಷವೇ ಎಲ್ಲಾ ಗ್ರ್ಯಾಂಟ್ ಕೊಡಬೇಕು. ಒಂದೇ ವರ್ಷದಲ್ಲಿ ಎಲ್ಲಾ ಕೆಲಸ ಕಾರ್ಯಗಳು ಪೂರ್ತಿ ನಡೆಯಬೇಕೆಂದು ನಮಗೆ ಆಸೆ ಏನೂ ಇಲ್ಲ. ಐದು ವರ್ಷಗಳ ಅವಧಿಯಿಂದು ಹಂತಹಂತವಾಗಿ ಕೆಲಸಗಳನ್ನು ಮಾಡಿಸಿಕೊಳ್ಳುತ್ತೇವೆ. ಇದೇ ಪ್ರಕಾರ ಅಪ್ಪರ್ ತುಂಗಾ ಯೋಜನೆ ಇದೆ. ಇದು ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು. ಇದನ್ನೂ ಸಹ ಆದಷ್ಟು ಶೀಘ್ರವಾಗಿ, ಅಂದಾಜು ತಯಾರು ಮಾಡಿಸಿ ಮಂಜೂರಾತಿ ಕೊಟ್ಟು ಕೆಲಸ ಪ್ರಾರಂಭ ಮಾಡ ಬೇಕೆಂದು ಕೋರುತ್ತೇನೆ, ಆಮೇಲೆ ಅಪ್ಪರ್ ಪ್ರಾಜೆಕ್ಟ್ ಏನಿದೆ, ಇದು ಶ್ರೀಮಾನ್ ಹೆಚ್. ಎಂ. ಚನ್ನಬಸವಯ್ಯನವರು ಲೋಕೋಪಯೋಗಿ ಸಚಿವರಾಗಿದ್ದಾಗ ಆದದ್ದು. ಇದಕ್ಕೆ ಮಂಜೂರಾತಿ ಕೊಟ್ಟರೆ ಒಂದು ಲಕ್ಷ ಚಿಲ್ಲರೆ ಎಕರೆ ಭೂಮಿಗೆ ನೀರಾವರಿ ಸೌಲಭ್ಯ ದೊರೆಯುತ್ತದೆ. ತುಂಗಭದ್ರಾ ನೀರಿನಿಂದ ಲಿಫ್ಟ್ ಇರಿಗೇಷನ್ ಮಾಡಿ ನೀರು ಕೊಡುವ ಯೋಜನೆ ಇದೆ. ಈ ಎರಡೂ ಯೋಜನೆ ಗಳೂ ಕಾರ್ಯಗತವಾಗಬೇಕೆಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಎಲ್ಲಾ ಶಾಸಕರಿಗೂ ಮುಖ್ಯವಾಗಿ ಬೇಕಾದುದ್ದು ಲೋಕೋಪಯೋಗಿ ಇಲಾಖೆ ಮತ್ತು ವಿದ್ಯಾ ಇಲಾಖೆ. ಹಳ್ಳಿಗಾಡುಗಳಲ್ಲಿ ನಮ್ಮ ಜನರು ನಮಗೆ ಕೆರೆ, ರಸ್ತೆ ಮಾಡಿಸಿಕೊಟ್ಟರೆ ಮುಂದಿನ ಸಲ ನಿಮ್ಮನ್ನು ಶಾಸಕರನ್ನಾಗಿ ಮಾಡುತ್ತೇವೆ ಎಂದು ಹೇಳುತ್ತಾರೆ. ಅದೇ ಪ್ರಕಾರ ನಾವು ಭರವಸೆ ಕೊಡುತ್ತೇವೆ. ಶ್ರೀಮಾನ್ ದೇವೇಗೌಡರು ಒಳ್ಳೆಯವರು, ಅವರನ್ನು ನಾವು ಅದೇ ಪ್ರಕಾರ ಕೇಳಿಕೊಳ್ಳುತ್ತೇವೆ. ಹಳ್ಳಿಗಾಡು ಪ್ರದೇಶದಲ್ಲಿ ಒಂದು ಗಾದೆ ಮಾತಿದೆ ಹಾಕ್ಮಣಿ ತೂಕ್ಮಣಿ ಮತ್ತು ನೂಕ್ಮಣಿ. ಇವತ್ತು ನಮಗೆ ನಮ್ಮ ಬೇಡಿಕೆಗಳು ನೂಕ್ಮಣಿ ಆಗುತ್ತವೆಯೋನೋ ಎನ್ನುವ ಭಯ ಇದೆ. ಏನು ಹೇಳಿದರೂ ಇವರು ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲವೆಂದು ಹೇಳುವಾಗ ಎಲ್ಲಿ ನೂಕ್ಮಣಿ ಆಗುತ್ತದೆಯೋ ಎಂದು ಯೋಚನೆ ಇದೆ. ಶ್ರೀಮಾನ್ ದೇವೇಗೌಡರು ಮಾಡಿಕೊಡುತ್ತಾರೆನ್ನುವ ವಿಶ್ವಾಸ ನಮಗಂತೂ ಇದೆ. ಇನ್ನು ಲೋಕೋಪಯೋಗಿ ಇಲಾಖೆಯ ಅನೇಕ ಸಾರ್ವಜನಿಕ ಕಟ್ಟಡಗಳು ರಿಪೇರಿಯಾಗದೆ ನಾದುರಸ್ತಿಯಾಗಿವೆ. ಹಲವಾರು ಕಟ್ಟಡಗಳು ಹತ್ತಿಪ್ಪತ್ತು ವರ್ಷಗಳಿಂದಲೂ ರಿಪೇರಿ ಆಗದೆ, ಅವುಗಳಲ್ಲಿ ಕೆಲವಂತೂ ಬಿದ್ದು ಹೋಗುವ ಸ್ಥಿತಿಯಲ್ಲಿವೆ. ಇವುಗಳನ್ನು ಸಂರಕ್ಷಣೆ ಮಾಡುವುದಕ್ಕೆ ಗಮನಕೊಡಬೇಕು. ಹಾಗೆಯೇ ಈ ಇಲಾಖೆಗೆ ಸಂಬಂಧಪಟ್ಟ ಕೆಲಸ ಕಾರ್ಯಗಳಲ್ಲಿ ಲೋಪದೋಷ ಗಳು ಇವೆ ಕಂಟ್ರಾಕ್ಟ್ ಕೊಡುವುದರಿಂದ ಹಿಡಿದು ಎಲ್ಲಾ ಮಟ್ಟದಲ್ಲೂ ಲೋಪದೋಷಗಳು ಆಗುತ್ತಿವೆ. ದೇವೇಗೌಡರೇನೋ ಹೆಚ್ಚಿನ ಆಸಕ್ತಿ ವಹಿಸಿದ್ದಾರೆ. ಕಳಪೆ ಕೆಲಸಗಳನ್ನು ಪತ್ತೆ ಮಾಡುವುದಕ್ಕೆ ಈಗ ಸೆಲ್ ಅಂತ ಏನು ಮಾಡಿದ್ದಾರೆ, ಅದನ್ನು ಇನ್ನೂ ಚುರುಕುಗೊಳಿಸಬೇಕು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಎಲ್ಲೆಲ್ಲಿ ಸುಳ್ಳು ಬಿಲ್ಲುಗಳನ್ನು ಕೊಟ್ಟಿದ್ದಾರೆ, ಎಲ್ಲೆಲ್ಲಿ ಸರಿಯಾಗಿ ಕೆಲಸ ಮಾಡಿಲ್ಲವೆಂದು ಪತ್ತೆಹಚ್ಚು ವುದು ಅಗತ್ಯವಿದೆ. ಇಲಾಖೆಯಲ್ಲಿ ಸುಧಾರಣೆ ಆಗ ಬೇಕು. ನನ್ನ ತಾಲ್ಲೂಕಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಸೊಗಲು ಹಳ್ಳಕ್ಕೆ ಕಟ್ಟಿರತಕ್ಕಂಥ ಸೇತುವೆ ಬಿದ್ದು ಹೋಗಿದೆ. ೧೫ ಸಾವಿರ ಜನ ವಾಸ ಮಾಡತಕ್ಕಂಥ ಪ್ರದೇಶದಲ್ಲಿ ರಸ್ತೆ ಸಂಪರ್ಕ ಇಲ್ಲದೆ ೨೦ ಮೈಲಿ ಸುತ್ತಿಹಾಕಿಕೊಂಡು ಹೋಗಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಅದನ್ನು ಮಾಡಿಸಿ ಕೊಡುತ್ತೇನೆ ಎಂದು ಹೇಳಿ ದ್ದಾರೆ. ಮಂಜೂರಾತಿಯ ಹಂತಕ್ಕೆ ಅದು ಬಂದಿದೆ. ಈ ವಿಷಯವಾಗಿ ಒಂದು ಮನವಿಯನ್ನು ನಾಳೆ ದಿವಸ ಶ್ರೀ ದೇವೇಗೌಡರಿಗೆ ನಾನು ಕೊಡುವವನಿದ್ದೇನೆ. ಈ ಸೇತುವೆ ಕೆಲಸ ಕಳೆದ ಬಾರಿ ಬಜೆಟ್ ನಲ್ಲಿ ಸೇರಿತ್ತು. ಆದರೆ ಈ ವರ್ಷ ಸೇರಿಸಿಲ್ಲ. ಈ ವರ್ಷಕ್ಕೆ ಇದನ್ನು ಸೇರಿಸಿ ಕೊನೆಪಕ್ಷ ಒಂದು ಕೆಲಸವನ್ನಾದರೂ ತೆಗೆದುಕೊಳ್ಳಬೇಕೆಂದು ಹೇಳಿ ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರಾದ ಶ್ರೀ ದೇವೇ ಗೌಡರು ನಂಬಿದವರನ್ನು ಕೈಬಿಡುವುದಿಲ್ಲ ಮತ್ತು ಅವರನ್ನು ನಂಬಿದರೆ ಖಂಡಿ ತವಾಗಿಯೂ ಕೆಲಸ ಆಗುತ್ತದೆ ಎನ್ನುವ ಪ್ರತೀತಿ ನಮ್ಮ ರಾಜದ್ಯದಲ್ಲಿದೆ. ಅದೇ ರೀತಿ ಜನತಾ ಸರ್ಕಾರ ಬಂದನಂತರ ನೀರಿನ, ರಸ್ತೆಗಳ ಯೋಜನೆಗಳನ್ನು ತೆಗೆದುಕೊಂಡು ಬಂದರು. ಆದ್ದರಿಂದ ನಮ್ಮ ಹಿರಿಯರಲ್ಲಿ ನಾನು ಕೇಳಿಕೊಳ್ಳುವುದು ಇಷ್ಟೆ. ಅದೇನೆಂದರೆ ಪ್ರತಿಯೊಂದು ಕ್ಷೇತ್ರದಲ್ಲಿ ಒಂದು ದೇವೇಗೌಡರ ಯೋಜನೆ............

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೇ, ಇವರೇನು ಬಜೆಟ್ ಮೇಲೆ ಮಾತಾಡುತ್ತಿದ್ದಾರೊ ಹೇಗೆ ?

(ಗೊಂದಲ)

ಶ್ರೀ ಬಿ.ಆರ್. ನೀಲಕಂಠಪ್ಪ.—ನಾನು ಮಾತನಾಡುತ್ತಿರುವುದು ನನಗೆ ಗೊತ್ತಿದೆ. ನಮ್ಮ ಸರ್ಕಾರದವರು ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಹಾಗೆಯೇ ಕಾಲ ಬರುತ್ತದೆ. ಹೋಗುತ್ತದೆ. ನಾಳೆ ನಾವೂ ಕೂಡ ಮಾಜಿ ಆಗಬಹುದು. ಆದರೆ ಮಾನ್ಯ ದೇವೇಗೌಡರು ಪ್ರತಿ ಯೊಂದು ತಾಲ್ಲೂಕಿನಲ್ಲೂ, ಪ್ರತಿ ಕ್ಷೇತ್ರದಲ್ಲೋ ೨-೩ ಯೋಜನೆಗಳನ್ನಾದರೂ ಹಾಕಿಕೊಳ್ಳಬೇಕು ಅಥವಾ ಪ್ರತಿಯೊಂದು ತಾಲ್ಲೂಕಿಗೆ ೫೦೦ ಅಥವಾ ೧೦೦೦ ಎಕರೆಭೂಮಿಗೆ ನೀರು ಕೊಡುವ ಯೋಜನೆ ಯನ್ನೂ ರೂಪಿಸಿಕೊಂಡರೆ ಅದು ಐವತ್ತು ವರ್ಷವಾದರೂ ಉಳಿಯುತ್ತದೆ. ಮುಂದಿನ ವರ್ಷ ಕ್ಕಾದರೂ ಅವರು ಇದನ್ನು ತರುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದೇ ರೀತಿ ರಸ್ತೆ ಯನ್ನು ಸಹ ಪ್ರತಿಯೊಂದು ತಾಲ್ಲೂಕಿಗೂ ಇಷ್ಟಿಷ್ಟು ಮಾಡುತ್ತೇವೆ ಎಂದು ಹಂಚಿಕೊಟ್ಟು ಯೋಜನೆ ಯನ್ನು ಹಾಕಿಕೊಳ್ಳಬೇಕು. ಈ ಸಂದರ್ಭದಲ್ಲಿ ನಮ್ಮ ಜಿಲ್ಲೆ ಬಗ್ಗೆ ಎರಡು ಮಾತು ಹೇಳಬೇಕಾಗಿದೆ ಇಡೀ ಹಳೇ ಮೈಸೂರು ಪ್ರಾಂತ್ಯದಲ್ಲಿ ತುಂಬಾ ಹಿಂದುಳಿದಿರತಕ್ಕಂಥ ಜಿಲ್ಲೆ ಇರುವುದಾದರೆ ಅದು ಚಿಕ್ಕಮಗಳೂರು ಜಿಲ್ಲೆ ಮತ್ತು ತರೀಕೆರೆ ತಾಲ್ಲೂಕು. ೨೦ ವರ್ಷಗಳ ಬಜೆಟ್‌ನ್ನು ನೋಡಿದರೆ ಎಲ್ಲೂ ಸರಿಸಮಾನವಾದ ಹಂಚಿಕೆ ಆಗಿಲ್ಲ. ಇದನ್ನು ಶ್ರೀ ದೇವೇಗೌಡರಾದರೂ ಸರಿದೂಗಿಸುತ್ತಾರೆ ಎಂದು ನಾನು ನಂಬಿದ್ದೇನೆ. ತರೀಕೆರೆ ತಾಲ್ಲೂಕಿನಲ್ಲಿ ೨ನೇ ಯೋಜನೆಯಲ್ಲಿ ಜಂಬದಹಳ್ಳ ಯೋಜನೆ ಇತ್ತು ಅರ್ಧಭಾಗ ಈ ಯೋಜನೆಯಲ್ಲಿ ಆಗುತ್ತಿದೆ. ಇದನ್ನು ಪೂರ್ಣಗೊಳಿಸಿದರೆ, ತುಂಬಾ ಅನು ಕೂಲವಾಗುತ್ತದೆ. ಇದಕ್ಕೆ ಸರ್ಕಾರದ ಮಂಜೂರಾತಿ ಎಲ್ಲಾ ಇದೆ. ಇದನ್ನು ಕಾರ್ಯ ರೂಪಕ್ಕೆ ತರಬೇಕೆಂದು ಕೇಳಿಕೊಳ್ಳುತ್ತಾ ಯಾವ ಯೋಜನೆಗಳೂ ತರೀಕೆರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಲ್ಲ. ಇದನ್ನು ಪರಿಗಣಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು '' ಕಾಡಾ '' ಅನ್ನು ಪೂರ್ಣವಾಗಿ ಕಾಡಿಗೆ ತಳ್ಳಿದ್ದಾರೆ ನಾವು '' ಕಾಡಾ '' ಮೀಟಿಂಗಿಗೆ ಹೋಗುವ ಹಾಗಿಲ್ಲ. ಸರಿಯಾದ ವೇಳೆಗೆ ಹೋಗಲಿಕ್ಕೆ ರಸ್ತೆ ಸೌಕರ್ಯ ಇಲ್ಲ. ಬಸ್ಸುಗಳು ಸಿಕ್ಕುವುದಿಲ್ಲ. ಕಾಡಾ ಮೀಟಿಂಗಿಗೆ ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ದೇವೇಗೌಡರಲ್ಲಿ ಕೇಳಿಕೊಳ್ಳುತ್ತೇನೆ. ಆಮೇಲೆ ಅಪ್ಪರ್ ಭದ್ರಾ ಯೋಜನೆಯನ್ನು ಆದರೆ ಮಾಡಿ. ಲಕ್ಕವಳ್ಳಿ ಅಣೆಕಟ್ಟು ಪೂರ್ಣವಾಗಿ ಎರಡು ಸಲ ಮಾತ್ರ ತುಂಬಿದೆ, ತುಂಗಭದ್ರಾ ಎರಡು ಸಲ ತುಂಬಿದೆ. ಸೂಕ್ತವಾಗಿದ್ದರೆ ಮಾಡಿ ಇಲ್ಲದಿದ್ದರೆ ಬೇಡ. ಈ ರೀತಿ ಅರ್ಥಾಂಬರ್ಥ ಮಾಡುವುದಕ್ಕಿಂತ ಲಿಫ್ಟ್ ಇರಿಗೇಷನ್, ಸಣ್ಣ ಸಣ್ಣ ಕೆರೆ ಕೊಡಲ್ಲಿಕ್ಕೆ ಪ್ರಯತ್ನ ಮಾಡಬೇಕು. ತರೀಕೆರೆ ತಾಲ್ಲೂಕಿನಲ್ಲಿ ಸಾಮಾನ್ಯವಾಗಿ ಪಿ.ಡಬ್ಲ್ಯು.ಡಿ. ರಸ್ತೆಗಳು ಪೂರ್ಣ ವಾಗಿ ಹದಗೆಟ್ಟಿವೆ. ಕೊನೆಪಕ್ಷ ೨೦ ಕಿಲೋಮೀಟರ್ ಆದರೂ ಕೊಡಿ. ಈ ವರ್ಷ ಸ್ವಲ್ಪವಾದರೂ

ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಈ ವರ್ಷದ ಬಡ್ಜೆಟ್‌ನಲ್ಲಿ ಯಾವ ಕೆಲಸವನ್ನೂ ಪೂರ್ಣವಾಗಿ ತೆಗೆದುಕೊಂಡಿಲ್ಲ. ಕೆಲಸವನ್ನು ಇಂಟರೀಮ್ ಬಜೆಟಿನಲ್ಲಾದರೂ ಸೇರಿಕೊಳ್ಳಬೇಕೆಂದು ಹೇಳುತ್ತೇನೆ. ಶ್ರೀಮಾನ್ ನಜೀರ್‌ಸಾಬ್ ಅವರ ನೀರಿನ ಯೋಜನೆ ಆಗಿದೆ. ಶ್ರೀಮಾನ್ ರಘುಪತಿಯವರ ಪುಸ್ತಕ ಯೋಜನೆ ಆಗಿದೆ. ಹಾಗೆಯೇ ಶ್ರೀ ದೇವೇಗೌಡರ ಯೋಜನೆಯೂ ಆಗಬೇಕಾಗಿದೆ. ಖಂಡಿತವಾಗಿಯೂ ಅವರು ಇದನ್ನು ಕರ್ನಾಟಕ ರಾಜ್ಯಕ್ಕೆ ಮಾಡುತ್ತಾರೆ ಎಂದು ಹೇಳಿ. ಈ ಬಡ್ಜೆಟ್ ಏನಿದೆ ಇದು ಉತ್ತಮವಾದ ಬಡ್ಜೆಟ್. ಅದೇ ರೀತಿ ಈ ಕಾಂಗ್ರೆಸಿನವರು ಏನು ಕೂಗಾಡುತ್ತಾರೆ. ಅವರು ಕೇಂದ್ರದಿಂದ ಹಣ ಒದಗಿಸಲಿಕ್ಕೆ ಅವರು ಡೆಲ್ಲಿಯಲ್ಲಿ ಕೂಗಾಡಲಿ ಎಂದು ಹೇಳಿ, ಈ ಲೋಕೋಪಯೋಗಿ ಇಲಾಖೆಯ ಬೇಡಿಕೆಗಳನ್ನು ಪೂರ್ಣವಾಗಿ ಸ್ವಾಗತಿಸುತ್ತಾ, ಮತ್ತು ಬೆಂಬಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

೫-೩೦ ಪಿ.ಎಂ.

ಶ್ರೀ ಕುಶಾಲ (ಸುಳ್ಯ).—ಮಾನ್ಯ ಸಭಾಧ್ಯಕ್ಷರೇ, ಈ ದಿನ ಅನುದಾನ ಬೇಡಿಕೆ ಚರ್ಚೆಗಿಟ್ಟುಕೊಂಡಿರುವ ವಿಷಯಗಳ ಬಗ್ಗೆ ನಾನು ವಿರೋಧವನ್ನು ವ್ಯಕ್ತಪಡಿಸುತ್ತಾ ನನ್ನ ಎರಡು ಮಾತುಗಳನ್ನು ನನ್ನ ಕ್ಷೇತ್ರದ ಬಗ್ಗೆ ಕೇಳುತ್ತೇನೆ ನನ್ನ ಕ್ಷೇತ್ರದಲ್ಲಿ ನಾನು ಸಂದರ್ಶನ ಮಾಡಿದಾಗ ಚಿಕ್ಕಪುಟ್ಟ ರಸ್ತೆ ಮತ್ತು ಸೇತುವೆಗಳ ಕೆಲಸ ಆಗಬೇಕಾಗಿದೆ. ಇಂಥವು ೫೦ ಕಾಮಗಾರಿಗಳಿವೆ. ನನ್ನದು ಮೀಸಲು ಕ್ಷೇತ್ರವಾಗಿದೆ. ಅತಿ ಹಿಂದುಳಿದಿದೆ. ಕಳೆದ ಸಲ ತಾತ್ಕಾಲಿಕ ಬಜೆಟ್ ಮಂಡನೆಯಲ್ಲಿ ಪ್ರತಿ ಸದಸ್ಯರ ಕ್ಷೇತ್ರಕ್ಕೂ ಹೊಸ ಕಾಮಗಾರಿಗಳನ್ನು ಕೊಡುವುದಾಗಿ ಸರ್ಕಾರ ಭರವಸೆ ನೀಡಿದ್ದನ್ನು ಕಂಡು ಸಂತೋಷಗೊಂಡಿದ್ದೆ. ಆದರೆ ಹಾಗೆ ಆಗಲಿಲ್ಲ. ನಗರಸಭಾ ಪ್ರದೇಶಗಳ ಅಭಿವೃದ್ಧಿಗಿಂತ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ಆದ್ಯತೆ ಕೊಡಬೇಕೆಂದು ಹೇಳಬಯಸುತ್ತೇನೆ.

ನನ್ನ ಕ್ಷೇತ್ರ ಸಂದರ್ಶನದಲ್ಲಿ ಸಾರ್ವಜನಿಕರಿಂದ ಬಂದ ಮನವಿಗಳ ಪ್ರಕಾರ ಅಂದರೆ ಪಕ್ಷಿನೋಟದಂತೆ ಸಣ್ಣಪುಟ್ಟ, ಮಧ್ಯಮವರ್ಗದ ೬೦ ಟಾರ್ ರಸ್ತೆಗಳು, ೫೦ ಸೇತುವೆಗಳು ಬೇಕಾಗಿವೆ. ವರ್ಷಕ್ಕೆ ಎರಡು ಕಾಮಗಾರಿಗಳಂತೆ ಕೊಟ್ಟರೂ ೧೦೦-೧೨೦ ವರ್ಷಗಳು ಬೇಕಾಗಬಹುದು

ಆದುದರಿಂದ ಮೀಸಲು ಕ್ಷೇತ್ರಕ್ಕೂ ಹಳ್ಳಿಗಾಡು ಪ್ರದೇಶಕ್ಕೂ ಪಟ್ಟಣ ಪ್ರದೇಶಕ್ಕೂ ಕಾಮಗಾರಿಗಳನ್ನು ನೀಡುವುದಕ್ಕಿಂತ ಜಾಸ್ತಿಕೊಟ್ಟು ಈ ವ್ಯತ್ಯಾಸವನ್ನು ತೋರಬೇಕೆಂದು ಕೋರುತ್ತೇನೆ. ಈ ಮೇಲೆ ಹೇಳಿದ ಕಾಮಗಾರಿಗಳಲ್ಲಿ ಹರಿಜನ ಯೋಜನೆ ಇರುತ್ತದೆ, ಗಿರಿಜನ ಯೋಜನೆ ಇರುತ್ತದೆ. ಆದರೆ ರಸ್ತೆ ಅರ್ಧದಲ್ಲಿ ನಿಂತು ಕಾಮಗಾರಿಯನ್ನು ಪೂರ್ತಿಗೊಳಿಸುವ ಯೋಜನೆ ಕಾಣುತ್ತಿಲ್ಲ. ಅದನ್ನು ಪೂರ್ತಿಗೊಳಿಸಬೇಕಾಗಿ ವಿನಂತಿಸುತ್ತೇನೆ. ಬೆಳ್ಳಾರೆ ಪುದ್ದೊಟ್ಟು ರಸ್ತೆಗೆ ಗೌರಿಹೊಳೆ ಎಂಬಲ್ಲಿ ಸೇತುವೆ ಆಗಬೇಕಾಗಿದ್ದು ೧,೫೦,೦೦೦ ರೂ. ಗಳ ಕಾಮಗಾರಿ ಮಂಜೂರಾಗಿದೆ ಎಂದು ತಿಳಿದು ಸಂಶಯ ಬರುತ್ತಿದೆ. ಏಕೆಂದರೆ ಈ ರಸ್ತೆಯ ಕೊನೆಯಲ್ಲಿ ಒಂದು ಕಾಲು ಸೇತುವೆ ಬರುತ್ತಿದೆ. ಆ ಕಾಲು ಸೇತುವೆಯನ್ನು ಏನಾದರೂ ಮಂಜೂರಾತಿಗೆ ತೆಗೆದುಕೊಂಡಿದ್ದಾರೋ ಎಂದು ತೋರುತ್ತಿದೆ. ಹಾಗಾಗದೆ ಪುದ್ದೊಟ್ಟು, ಬೆಳ್ಳಾರೆ ರಸ್ತೆಗೆ ಗೌರಿಹೊಳೆಗೆ ಸೇತುವೆ ನಿರ್ಮಾಣ ಮಂಜೂರಾತಿ ನೀಡಲಿ. ಈ ಕಾಮಗಾರಿ ೨ ಸಲ ರಿವೈಸ್ಡ್ ಎಸ್ಟಿಮೇಟು ಆಗಿ ನೆನೆಗುದಿಗೆ ಬಿದ್ದ ಸೇತುವೆ.

ಇನ್ನು ಅಯ್ಯನಕಟ್ಟೆ, ಬೆಳ್ಳಾರೆ, ಚೊಕ್ಕಾಡಿ, ಬೇಂಗಮಲೆ ರಸ್ತೆಗೆ ೨ ವರ್ಷಗಳಿಂದ ಟಾರು ರಸ್ತೆಗೆ ಟೆಂಡರು ಆದರೂ ಇನ್ನೂ ಕಾಮಗಾರಿಗಳನ್ನು ಕೈಗೊಂಡಂತೆ ಕಾಣುತ್ತಿಲ್ಲ.

ಸರ್ವೆ ಸವಣೂರು ರಸ್ತೆ-ಮಾಡವು ರಸ್ತೆ ಹಾಗೂ ಸೇತುವೆಗೆ ೧೯೮೩ರಲ್ಲಿ ೧೯ ಲಕ್ಷ ಕಾಮಗಾರಿ ಪಟ್ಟಿ ತಯಾರಿಸಿದ್ದರೂ ಕಾಮಗಾರಿ ಪೂರೈಸುವಿಕೆ ಹಾಗೂ ಮಂಜೂರಾಗಿ ಹಿಂದೆ ಬಿದ್ದಿವೆ.

ಎಲ್ಲ ಕಾಮಗಾರಿಗಳನ್ನು ಮೀಸಲು ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಹಾಗೂ ಮಲೆನಾಡು ಪ್ರದೇಶದ ಹೆಚ್ಚಿನ ಆದ್ಯತೆಯೊಂದಿಗೆ ಶೈಕ್ಷಣಿಕ ವರ್ಷದಲ್ಲೇ ಮಂಜೂರಾತಿ ನೀಡಬೇಕೆಂದು ಕೋರುತ್ತೇನೆ.

ಆರಂತೋಡು ಸೇತುವೆಗೆ ಪಯಸ್ವಿನಿ ಕೆಲವು ವರ್ಷಗಳಿಂದ ಕಾಮಗಾರಿ ಬೇಡಿಕೆ ಇದ್ದರೂ ಇತರ ರಾಜಕೀಯ ಪಕ್ಷದಿಂದಾಗಿ ಇದು ಹಿಂದೆ ಬಿದ್ದಿದೆ. ಸದರಿ ಆರಂತೋಡು ಮಾಪು ಎಂಬ ಸ್ಥಳದಲ್ಲೇ ಸೇತುವೆ ನಿರ್ಮಾಣ ಆಗಬೇಕಾಗಿ ವಿನಂತಿಸುತ್ತೇನೆ. ಮತ್ತು ಆಲೆಟ್ಟಿ, ಅಜ್ಜಾವರ, ಮಣ್ಣಿನ ರಸ್ತೆಗೆ ರಿಪೇರಿಗಾದರೂ ಹೆಚ್ಚಿನ ಆದ್ಯತೆ ಕೊಟ್ಟು ಮಂಜೂರಾತಿ ನೀಡಬೇಕಾಗಿ ಕೇಳಿಕೊಳ್ಳುತ್ತೇನೆ.

ಪ್ರವಾಹ ನಿಯಂತ್ರಣ ಯೋಜನೆಯಂತೆ ಪುತ್ತೂರು ಸುಬ್ರಮಣ್ಯ ರಸ್ತೆಯ ಬೆಳ್ಳಾರೆಯಲ್ಲಿ ಒಂದು ಮುಳುಗು ಸೇತುವೆ ಇದೆ, ಆದರೆ ಈ ಸೇತುವೆ ಮುಳಗಿರುವುದರಿಂದ ಕೆಳಗಡೆ ಮಕ್ಕಳು ಮಳೆ ಗಾಲದಲ್ಲಿ ದಾಟುವುದಕ್ಕೂ ಮತ್ತು ವಾಹನ ಸಂಚಾರಕ್ಕೂ ತೊಂದರೆಯಾಗಿದೆ.

ನನ್ನ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಬಲ್ಯ ಎಂಬಲ್ಲಿ ಪುತ್ತೂರು ಸುಬ್ರಮಣ್ಯ ರಸ್ತೆಯಲ್ಲಿ ಒಂದು ಮುಳುಗು ಸೇತುವೆ ಇರುತ್ತದೆ. ಈ ಸೇತುವೆಯಲ್ಲಿ ಪ್ರತಿ ವರ್ಷ ನೆರೆಗೆ ಪ್ರಾಣಹಾನಿಯಾದ ಸಂಭವಗಳನ್ನು ವಾರ್ತಾಪತ್ರಿಕೆಗಳಲ್ಲಿ ತಿಳಿದಿರಬಹುದು. ಈ ಸೇತುವೆಗಳನ್ನು ಏರಿ ಕಟ್ಟುವಂತೆ ವ್ಯವಸ್ಥೆ ಮಾಡಬೇಕಾಗಿ ವಿನಂತಿಸುತ್ತೇನೆ.

ಇನ್ನು ನೀರಾವರಿ ಬಗ್ಗೆ ಹೇಳುವುದಾದರೆ ಸಣ್ಣಪುಟ್ಟ ರೈತರು ಸರಕಾರ ಚಿಕ್ಕ ತೋಡುಗಳಿಗೆ ಬೇಸಿಗೆಯಲ್ಲಿ ಮಣ್ಣಿನ ಕಟ್ಟೆ ಕಟ್ಟಿ ಏತಗಳ ಮೂಲಕವೂ ಪಂಪುಗಳ ಮೂಲಕವೂ ನೀರು ಹಾಯಿಸಿದ್ದಕ್ಕೆ ೧೦ ವರ್ಷಗಳ ಹಿಂದಿನ ನೀರು ತೆರಿಗೆ ಬಾಕಿ ವಸೂಲಾತಿಗೆ ಬಂದಿರುತ್ತದೆ. ಪಿಡಬ್ಲ್ಯೂಡಿ ಇಲಾಖೆ ಯಿಂದ ತಗಾದೆ ಹೊರಡಿಸಿ ಕಂದಾಯ ಇಲಾಖೆ ಮೂಲಕ ವಸೂಲಾತಿಗೆ ಬಂದಿರುತ್ತದೆ. ಇದಕ್ಕೆ ತಡೆಯಾಜ್ಞೆ ಕೊಟ್ಟು ಬಡ ರೈತರಿಗೆ ಈ ಅನ್ಯಾಯ ಆಗದಂತೆ ಮಾಡಬೇಕಾಗಿ ವಿನಂತಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ವಿಶ್ವನಾಥ ಪಾಟೀಲ್ (ಚಿತಾಪುರ್).—ಮಾನ್ಯ ಅಧ್ಯಕ್ಷರೇ, ಈ ಸದನದ ಮುಂದೆ ಏನು ೪೪, ೪೫, ೪೩, ೩೪, ೩೫, ಬೇಡಿಕೆಗಳನ್ನು ಮಂಡಿಸಿದ್ದಾರೆ ಅವುಗಳೆಲ್ಲವನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಮತ್ತು ಈ ಬೇಡಿಕೆಗಳನ್ನು ಬೆಂಬಲಿಸುತ್ತಾ ಕೆಲವು ಸೂಚನೆಗಳನ್ನು ಹಾಗೂ ಕೆಲವು ಸಲಹೆಗಳನ್ನು ನೀಡಬಯಸುತ್ತೇನೆ. ಪ್ರಪ್ರಥಮವಾಗಿ ಅತಿ ಮುಖ್ಯವಾದಂಥ ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಬಗ್ಗೆ ಮಾತನಾಡುತ್ತ ಕೆಲವು ಅನಿಸಿಕೆಗಳನ್ನು ಹೇಳಬಯಸು ತ್ತೇನೆ. ಈ ಇಲಾಖೆ ಬಹಳ ದೊಡ್ಡ ಇಲಾಖೆ. ಇದು ಕರ್ನಾಟಕದಲ್ಲಿ ಪ್ರಮುಖ ಪಾತ್ರವನ್ನು ವಹಿಸುವಂಥ ಇಲಾಖೆಯಾಗಿರುತ್ತದೆ. ಈ ಇಲಾಖೆಯಿಂದ ಸಾಕಷ್ಟು ಬೇರೆ ಇಲಾಖೆಗಳಿಗೂ ಸಂಬಂಧ ಪಡುವಂತೆ ಕೆಲಸ ಮಾಡುವಂತಹ ಇಲಾಖೆ ಇದಾಗಿದೆ. ಇದು ಕರ್ನಾಟಕದ ಜನರ ಭವಿಷ್ಯ ವನ್ನು ನಿರ್ಮಾಣ ಮಾಡುವಲ್ಲಿ ಹೆಚ್ಚಿನ ಪಾತ್ರ ವಹಿಸಬೇಕಾಗಿದೆ. ಹೈದರಾಬಾದ್ ಕರ್ನಾಟಕದಲ್ಲಿ ಈ ಇಲಾಖೆ ಸಾಕಷ್ಟು ಕೆಲಸ ಮಾಡಬೇಕಾಗಿದೆ. ಶ್ರೀ ದೇವೇಗೌಡರು ನೇತೃತ್ವ ವಹಿಸಿಕೊಂಡ ಮೇಲೆ ಹೆಚ್ಚಿನ ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗಿದೆ, ಅದರಂತೆ ಮಾಡುತ್ತಿದೆ. ಮುಂದೆ ಕೂಡ ಮಾಡ ಬಲ್ಲದೆಂದು ಹೇಳುತ್ತೇನೆ. ಹೈದರಾಬಾದ್ ಕರ್ನಾಟಕ ತುಂಬಾ ಹಿಂದುಳಿದಿರುವ ಭಾಗ. ಈ ಭಾಗ ಕರ್ನಾಟಕಕ್ಕೆ ಸೇರಿದ ಮೇಲೆ ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳೂ ಕೂಡ ಕ್ಷಾಮದ ಜಿಲ್ಲೆಗಳಾಗಿಯೇ ಉಳಿದಿವೆ. ಇವನ್ನು ನಿರ್ಲಕ್ಷಿಸಲಾಗಿದೆ. ಕಳೆದ ಹಲವಾರು ವರ್ಷಗಳಿಂದ ಪೂರ್ತಿ ಯಾಗಿ ನಿರ್ಲಕ್ಷಿಸಲಾಗಿದೆ. ೧೦೦ಕ್ಕೆ ೮೦ರಷ್ಟು ಹಳ್ಳಿಗಳು ರಸ್ತೆ ಸೇತುವೆಗಳಿಲ್ಲದೆ ಕತ್ತಲಲ್ಲಿವೆ. ಮಳೆ ಗಾಲದಲ್ಲಿ ಶಾಸಕರಾಗಲೀ, ಮಂತ್ರಿಗಳಾಗಲೀ ಹಳ್ಳಿಗಳನ್ನು ತಲಪುವುದಕ್ಕೆ ಸಾಧ್ಯವಿಲ್ಲದಂತಹ ಸ್ಥಿತಿ ಯಿದೆ. ಇದು ವಾಸ್ತವಿಕ ಸಂಗತಿ. ಇಂತಹ ಪರಿಸ್ಥಿತಿ ಹೈದರಾಬಾದ್ ಕರ್ನಾಟಕದಲ್ಲಿರುತ್ತದೆ. ಇದನ್ನು ದೃಷ್ಟಿಯಿಟ್ಟುಕೊಂಡು ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬುದು ಗೊತ್ತಿಲ್ಲ. ಒಂದು ಸಲ ಗುಲ್ಬರ್ಗಕ್ಕೆ ಮಾನ್ಯ ರಾಜ್ಯಪಾಲರು ಬಂದಿದ್ದಾಗ ನಮ್ಮ ಪ್ರದೇಶಕ್ಕೆ ಭೇಟಿ ಕೊಟ್ಟಿದ್ದರು. ಆ ಸಂದರ್ಭದಲ್ಲಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುವಾಗ್ಗೆ ೪ ಕಾರುಗಳನ್ನು ಬದಲಾಯಿ ಸಿದ್ದರು. ಅಂದ ಮೇಲೆ ರಸ್ತೆ ಹೇಗಿರಬಹುದು ಎಂಬುದನ್ನು ಊಹಿಸಿಕೊಳ್ಳಿ. ಹಳ್ಳಿಗಳ ರಸ್ತೆ ಗಳಂತೂ ರಸ್ತೆಗಳೇ ಅಲ್ಲ. ಇದನ್ನೆಲ್ಲ ಬಾಯಲ್ಲಿ ಹೇಳಿದರೆ ಅನುಭವಿಸಿದಂತಾಗುವುದಿಲ್ಲ. ಈ ಸದನದ ಸದಸ್ಯರ ಸಮಿತಿಯನ್ನು ರಚಿಸಿ ವರದಿ ಮಾಡಲು ಕಳಿಸಿಕೊಡಿ. ಅನಂತರ ಅವರ ವರದಿಯಂತೆ ಮುಂದಿನ ಕ್ರಮ ಕೈಗೊಳ್ಳಲಿ. ಇದು ನಮ್ಮ ಸರ್ಕಾರಕ್ಕೆ ಸಂಬಂಧಪಟ್ಟಿದ್ದಲ್ಲ. ಬಹುಶಃ ಈ ಸರ್ಕಾರ ಬಂದು ಎರಡು ವರ್ಷಗಳಾಗಿರಬಹುದು ಹಿಂದಿನಿಂದಲೂ ಆಭಾಗದ ಪರಿಸ್ಥಿತಿ ಹಾಗೇ ಉಳಿದಿದೆ ಈ ಸರ್ಕಾರದಲ್ಲಿ ಜನತಾ ಪಕ್ಷದ ಸದಸ್ಯರು ಬಂದಿದ್ದಾರೆ. ಅವರು ಬಹಳ ಮುತುವರ್ಜಿ ವಹಿಸಿ ಇದು ಮಾನವೀಯತೆಗೆ ಸಂಬಂಧಪಟ್ಟ ಸಮಸ್ಯೆ ಎಂದು ಭಾವಿಸಿ ಇದನ್ನು ಬಗೆಹರಿಸಲು ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಭಾಗದಲ್ಲಿರುವಂತಹ ರಸ್ತೆಗಳು ಬಹಳ ಕಾಲದ ಹಿಂದೆ ಮಾಡಿದ್ದು. ಅಲ್ಲಿ,

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

೭–೮ ಟನ್ ತೂಕ ಇರುವ ಟ್ರಕ್‌ಗಳು ಮಾತ್ರ ಹೋಗುವುದಕ್ಕೆ ಮಾಡಿದಂತಹ ರಸ್ತೆಯಾಗಿದೆ. ಈಗ ದೊಡ್ಡ ದೊಡ್ಡ ಸಿಮೆಂಟ್ ಕಾರ್ಖಾನೆಗಳು ಇದ್ದು, ೨೦ ಟನ್ ಲೋಡ್ ಇರುವ ಟ್ರಕ್‌ಗಳು ಆ ರಸ್ತೆಗಳ ಮೇಲೆ ಹೋಗುತ್ತಿರುವುದರಿಂದ ಆರು ತಿಂಗಳಲ್ಲಿ ಆ ರಸ್ತೆಗಳು ಕೆಟ್ಟುಹೋಗುತ್ತಿವೆ. ಇದಕ್ಕೆ ವಿಶೇಷವಾದಂತಹ ಹಣದ ವ್ಯವಸ್ಥೆ ಮಾಡಿ, ಹೆಚ್ಚಿನ ಭಾರ ತಡೆಯುವಂತಹ ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ವಿನಂತಿಸುತ್ತೇನೆ. ಕಳೆದ ವರ್ಷ ನನ್ನ ಕ್ಷೇತ್ರದಲ್ಲಿ ಮಾಳಗತ್ತಿಯಿಂದ ಹೆಬ್ಬಾಳದ ಮಧ್ಯದವರೆಗೂ ಸುಮಾರು ೨೫ ಕಿಲೋಮೀಟರ್ ರಸ್ತೆಯನ್ನು ೧೯೮೩–೮೪ರಲ್ಲಿ ಮಂಜೂರು ಮಾಡಿದ್ದೀರಿ. ಸುಮಾರು ೪೦ ಲಕ್ಷ ರೂ. ಅಂದಾಜಿನ ರಸ್ತೆಗೆ ೫ ಲಕ್ಷ ರೂ. ಕೊಟ್ಟಿದ್ದೀರಿ. ಈ ರೀತಿ ಆದರೆ ಇನ್ನು ೨೦ ವರ್ಷವಾದರೂ ಈ ರಸ್ತೆ ಮುಗಿಯುವುದಿಲ್ಲ. ಇದು ಮುಗಿಯುವುದಕ್ಕೆ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ನೀರಾವರಿ ಬಗ್ಗೆ ಒಂದೆರಡು ಮಾತನಾಡಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ಭಾಗದ ಬರಗಾಲದ ಬಗ್ಗೆ ಹೋದಸಲ ಮಾತನಾಡಿದ್ದೆ. ಅಲ್ಲಿನ ಜನರು ಬಡತನದಿಂದ ನರಳುತ್ತಿದ್ದಾರೆ. ನಮ್ಮದು ಬರಗಾಲಕ್ಕೆ ತುತ್ತಾದಂತಹ ಭಾಗವಾಗಿದೆ. ಆರ್ಥಿಕ ಮಟ್ಟ ಕೆಳಮಟ್ಟಕ್ಕೆ ಇಳಿದು ಹೋಗಿದೆ. ಜನಸಾಮಾನ್ಯರ ಜೀವನ ಕೆಳಮಟ್ಟಕ್ಕೆ ಇಳಿದಿದೆ. ನೀರಾವರಿ ಇಲ್ಲದಿರುವುದರಿಂದ ಬಹಳ ತೊಂದರೆಯಾಗಿದೆ. ಕಳೆದ ವರ್ಷ ಮಾನ್ಯ ದೇವೇಗೌಡರಿಗೆ, ಒತ್ತಾಯ ಮಾಡಿ ನಮ್ಮ ಭಾಗದಲ್ಲಿರುವ ಏತ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಕೇಳಿದ್ದೆ. ಬೆಣ್ಣೆತೊರೆ ಯೋಜನೆ ಬಗ್ಗೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದೀರಿ. ಏಜೆನ್ಸಿ ಫಿಕ್ಸ್ ಮಾಡಿದ್ದೀರಿ. ಅದಕ್ಕೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಬೆಣ್ಣೆತೊರೆ ಯೋಜನೆಯನ್ನು ಈ ಸಾರಿ ಕೈ ಬಿಡುವ ಪರಿಸ್ಥಿತಿಗೆ ತಂದಿದ್ದೀರಿ.

ಅಧ್ಯಕ್ಷರು.—ಎಲ್ಲರಿಗೂ ಐದೈದು ನಿಮಿಷ ಮಾತನಾಡಲು ಅವಕಾಶ ಕೊಡಬೇಕು. ನೀವು ಹೀಗೆಲ್ಲಾ ಹೇಳಿದರೆ ರೆಕಾರ್ಡಿಗೆ ಹೋಗುವುದಿಲ್ಲ.

ಶ್ರೀ ಎಚ್. ವಿಶ್ವನಾಥ ಪಾಟೀಲ್.—ಬೆಣ್ಣೆತೊರೆ ಯೋಜನೆಗೆ ಹೆಚ್ಚಿನ ಹಣ ಒದಗಿಸಬೇಕು. ೪೦ ಲಕ್ಷ ರೂ. ಕೊಟ್ಟು ಏಜೆನ್ಸಿ ಫಿಕ್ಸ್ ಮಾಡಿದ್ದೀರಿ. ಅದರಿಂದ ಏನೂ ಆಗುವುದಿಲ್ಲ. ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸಿಕೊಟ್ಟು ಇನ್ನು ಎರಡು ತಿಂಗಳಲ್ಲಿ ಇದನ್ನು ಮುಗಿಸಬೇಕೆಂದು ಕೇಳಿಕೊಳ್ಳುತ್ತಾ, ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಿ. ನಿಂಗಯ್ಯ (ಮೂಡಿಗೆರೆ).—ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಮತ್ತು ನೀರಾವರಿ ಖಾತೆಯ ಮಂತ್ರಿಗಳು ಮಂಡಿಸಿರತಕ್ಕಂತಹ ೧೯೮೫–೮೬ನೇ ಸಾಲಿನ ಆಯವ್ಯಯ ಪತ್ರದ ೪೪–೪೫ ಮತ್ತು ೩೪–೩೫ನೇ ಬೇಡಿಕೆಗಳನ್ನು ಬೆಂಬಲಿಸುತ್ತಾ, ಆ ಬೇಡಿಕೆಗಳ ಮೇಲೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹಿಂದೆ ಇದ್ದ ಸರ್ಕಾರಗಳು ನಮ್ಮ ಕ್ಷೇತ್ರದಲ್ಲಿ ಬಹುತೇಕ ಕೆಲಸಗಳನ್ನು ಮಾಡಿರಲಿಲ್ಲ. ಈ ಸಚಿವರ ಅಧಿಕಾರಾವಧಿಯಲ್ಲಿ ಕೆಲವಾರು ಹಳ್ಳಿಗಳಲ್ಲಿ ರಸ್ತೆಗಳನ್ನು ಮಾಡಿದ್ದಾರೆ. ಡಾಂಬರ ಆಗದೇ ಇರತಕ್ಕಂತಹ ರಸ್ತೆಗಳಿಗೆ, ಡಾಂಬರ್ ಆಗಿದೆ. ಅದಕ್ಕಾಗಿ ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಸಚಿವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ನನ್ನ ಕ್ಷೇತ್ರಕ್ಕೆ ಈ ಸಾಲಿನಲ್ಲಿ ಆಗಬೇಕಾದ ಕೆಲಸ ಕಾರ್ಯಗಳ ಒಂದು ಪಟ್ಟಿಯನ್ನು ಸಚಿವರಿಗೂ ಕೊಟ್ಟಿದ್ದೇನೆ. ರಸ್ತೆಗಳ ಬಗ್ಗೆ ಮತ್ತು ಕಟ್ಟಡಗಳ ಬಗ್ಗೆ ಮಾನ್ಯ ಸಚಿವರನ್ನು ಕೇಳಲು ಹೋದಾಗ, ಅವರು ಆರ್ಥಿಕ ಪರಿಸ್ಥಿತಿ ತೊಂದರೆ ಇರುವುದರಿಂದ, ಅದನ್ನು ಮುಂದಿನ ಸಾಲಿನಲ್ಲಿ ತೆಗೆದುಕೊಳ್ಳುತ್ತೇವೆಂದು ವ್ಯಕ್ತಪಡಿಸಿದರು. ಇದರಿಂದ ನನಗೆ ಬಹಳ ಸಂತೋಷವಾಗಿದೆ. ಇನ್ನೂ ಕೆಲವು ಮುಖ್ಯವಾದಂತಹ ಕೆಲಸಗಳನ್ನು ಹೇಳಬೇಕೆಂದರೆ, ಈಗ ಮಂಜೂರಾಗಿರತಕ್ಕಂತಹ ಕೆಲಸಗಳೇನಿವೆ, ಆ ಕೆಲಸಗಳನ್ನು ಆದಷ್ಟು ಬೇಗನೆ ಮಾಡಲಿಕ್ಕೆ ಆದೇಶವನ್ನು ಕೊಡಬೇಕು. ನಮ್ಮ ಹಳ್ಳಿಗಳಲ್ಲಿ ಸಾಮಾನ್ಯವಾಗಿ ಊರಿಗೊಂದು ಕೆರೆ ಇರಬೇಕು. ಆದರೆ ಅಲ್ಲಿ ಬಹಳಷ್ಟು ಕೆರೆಗಳು ಹೂಳು ತುಂಬಿ, ಆ ಕೆರೆಗಳಲ್ಲಿ ಆದಷ್ಟು ಬೇಗ ನೀರು ಒಣಗಿ ಹೋಗುತ್ತಿದೆ. ಆದುದರಿಂದ ಹೂಳು ತುಂಬಿರತಕ್ಕಂತಹ ಕೆರೆಗಳನ್ನು ಹೂಳನ್ನು ತೆಗೆಸಿ, ರಿಪೇರಿ ಮಾಡಿಸಿ ಅಲ್ಲಿಗೆ ನೀರಿನ ಸೌಕರ್ಯ ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕು. ಅದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು. ಇನ್ನು ನೀರಾವರಿ ಬಗ್ಗೆ ಮಾತನಾಡಬೇಕೆಂದರೆ, ೭ನೇ ಯೋಜನೆಯಲ್ಲಿ ಸುಮಾರು ಏಳು ಲಕ್ಷದ ಮೂವತ್ತೆಂಟು ಸಾವಿರ ಹೆಕ್ಟೇರ್ ಭೂಮಿಗೆ ನೀರನ್ನು ಕೊಡತಕ್ಕಂತಹ

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಯೋಜನೆಯನ್ನು ಇಟ್ಟಿದ್ದೀರಿ. ಸಣ್ಣ ನೀರಾವರಿ ಯೋಜನೆಯ ಬಗ್ಗೆ ೧೮೦ ಕೋಟಿ ರೂ. ಬಿಡುಗಡೆ ಮಾಡಿದ್ದೀರಿ, ಅದನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ. ಈ ಯೋಜನೆಯಲ್ಲಿ ಭದ್ರಾ ಮೇಲ್ದಂಡೆ ಯೋಜನೆಯನ್ನು ಏನು ಸೇರಿಸಿದ್ದೀರಿ, ಅದರ ಬಗ್ಗೆ ನಮ್ಮ ಜಿಲ್ಲೆಯ ಜನರ ವಿರೋಧವಿದೆ. ಚಿಕ್ಕಮಗಳೂರು ಜಿಲ್ಲೆಯ ಜನ ಸಂಪೂರ್ಣವಾಗಿ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಕ್ಷೇತ್ರದ ಸುತ್ತಮುತ್ತಲಿನ ಪ್ರದೇಶಗಳಾದ ಶೃಂಗೇರಿ, ಮೂಡಿಗೆರೆ ಮತ್ತು ಕೊಪ್ಪ ತಾಲ್ಲೂಕಿನಲ್ಲಿ ಮೂರು ಸಾವಿರ ಎಕರೆ ಪ್ರದೇಶದಲ್ಲಿ ಬೆಳೆದಿರತಕ್ಕಂತಹ ಕಾಫಿ ಬೆಳೆ ಮುಳುಗಿ ಹೋಗುತ್ತದೆ. ಶೃಂಗೇರಿ, ಕಳಸಾ ಭಾಗದ ಜನರು, ಅಲ್ಲಿನ ದೇವಸ್ಥಾನಗಳು ಮುಳುಗಿ ಹೋಗುತ್ತದೆಂದು, ತಮ್ಮ ಭಾವನಾತ್ಮಕವಾದ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಅವರ ಪ್ರತಿನಿಧಿಯಾಗಿ ನಾನು ಇವನ್ನು ಇಲ್ಲಿ ಹೇಳುತ್ತಿದ್ದೇನೆ. ಅದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ. ಈಗಾಗಲೇ ಈ ಭದ್ರಾ ನದಿಗೆ ಲಕ್ಕವಳ್ಳಿಯಲ್ಲಿ ಅಣೆಕಟ್ಟು ಏನಿದೆ, ಅದು ತುಂಬಿಲ್ಲವೆಂದು ಮಾನ್ಯ ಮಿತ್ರರು ಹೇಳಿದ್ದಾರೆ. ಅದೇ ತುಂಬದಿರುವಾಗ, ಅಪ್ಪರ್ ಭದ್ರಾ ಪ್ರಾಜೆಕ್ಟನ್ನು ಒನೇ ಯೋಜನೆಯಲ್ಲಿ ಮಾಡಬೇಕೆಂದು ಹೇಳುತ್ತಿದ್ದೀರಿ. ಅದನ್ನು ಮಾಡಿದರೆ. ಈ ಡ್ಯಾಮಿನ ಗತಿ ಏನು ? ಈ ಭದ್ರಾ ಮೇಲ್ದಂಡೆ ಯೋಜನೆಯಿಂದ ಬಹಳಷ್ಟು ಅರಣ್ಯ ಪ್ರದೇಶ ಮುಳುಗಿ ಹೋಗುತ್ತದೆ. ಒಳ್ಳೆಯ ಬೆಲೆ ಬಾಳತಕ್ಕಂತಹ ಮರಗಳು ಇರತಕ್ಕಂತಹ ಪ್ರದೇಶ ಮುಳುಗಿ ಹೋಗುತ್ತದೆ. ಅಲ್ಲಿನ ಜನಕ್ಕೆ ನಾವು ನಿರಾಶ್ರಿತರಾಗುತ್ತೇವೆಂಬ ಭಾವನೆ ಮೂಡಿದೆ. ಇನ್ನು ಶ್ರೀಮಂತ ರೈತರನ್ನೇ ನಂಬಿ ಕೊಂಡು ಕೆಲಸ ಮಾಡತಕ್ಕಂತಹ ಕೂಲಿಕಾರರ ಗತಿ ಏನು ಎನ್ನತಕ್ಕ ವಿಷಯವನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಭದ್ರಾ ಮೇಲ್ದಂಡೆ ಯೋಜನೆಯಿಂದ ಅನಾಹುತಗಳಾಗುತ್ತದೆ. ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸಂಪತ್ತು ಮುಳುಗಡೆಯಾಗುತ್ತದೆ. ಜನಸಂಪತ್ತು ಕೂಡ ಇದರಿಂದ ನಾಶವಾಗುತ್ತದೆ. ಈ ಯೋಜನೆ ಬಗ್ಗೆ ಮತ್ತೊಮ್ಮೆ ಪ್ರಸರ್ ಪರಿಶೀಲಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಕೂಲಿಕಾರರ ಬೇಡಿಕೆಯನ್ನು ಸರ್ಕಾರ ಪರಿಶೀಲಿಸಿ, ಈ ಯೋಜನೆಯನ್ನು ಕೈಬಿಟ್ಟರೆ, ನಮ್ಮ ಭಾಗದ ಜನರಿಗೆ ದೊಡ್ಡ ಉಪಕಾರ ಮಾಡಿದಂತಾಗುತ್ತದೆ ಎನ್ನುವ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ.

ಈ ಸಂದರ್ಭದಲ್ಲಿ ರಸ್ತೆ ಮತ್ತು ಸೇತುವೆ ಬಗ್ಗೆ ಹೇಳಬೇಕೆಂದರೆ, ಸಕಲೇಶಪುರ ಮತ್ತು ಮಡಿಕೇರಿ ಮಾರ್ಗದ ಮಧ್ಯೆ ಹರಿಯತಕ್ಕಂತಹ ಹೇಮಾವತಿ ನದಿಗೆ ಕಟ್ಟಿರುವ ಸೇತುವೆ ಕುಸಿದು ಹೋಗಿದೆ. ಆ ರಸ್ತೆಯಲ್ಲಿ ಓಡಾಡತಕ್ಕಂತಹ ಲಾರಿ, ಬಸ್ಸುಗಳು ಹಾಗೂ ಇತರೆ ವಾಹನಗಳ ಸಂಚಾರ ನಿಂತು ಹೋಗಿರುತ್ತದೆ. ಇದರಿಂದ ಸಾವಿರಾರು ಜನರಿಗೆ ಬಹಳ ತೊಂದರೆಯಾಗಿದೆ. ಶಾಲಾ ಮಕ್ಕಳು ಶಾಲೆಗೆ ಹೋಗುವಾಗ ಬಳಸು ದಾರಿಯಿಂದ ಹೋಗಬೇಕಾಗಿರುತ್ತದೆ. ಬಳಸು ದಾರಿಯಿಂದ ಹೋಗಬೇಕಾಗಿರುವುದರಿಂದ ಶಾಲಾಮಕ್ಕಳು ಶಾಲೆಗೆ ೨-೩ ಗಂಟೆ ತಡವಾಗಿ ಶಾಲೆಯನ್ನು ತಲುಪುತ್ತಿದ್ದಾರೆ. ಆದ್ದರಿಂದ ಈ ಸೇತುವೆ ಕೆಲಸವನ್ನು ಆದಷ್ಟು ಜರೂರಾಗಿ ತೆಗೆದುಕೊಳ್ಳಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಇಟ್ಟಿರತಕ್ಕ ಈ ಲೋಕೋಪಯೋಗಿ ಇಲಾಖೆಯ ೪೪,೪೭,೩೪,೨.೫೦ ಬೇಡಿಕೆಗಳನ್ನು ನಾನು ವಿರೋಧಿಸುತ್ತೇನೆ. ಈ ಸಭೆಯಲ್ಲಿ ನಮ್ಮ ನಾಯಕರು ಮತ್ತು ಪಕ್ಷದ ಅನೇಕ ಹಿರಿಯ ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ ಆದುದರಿಂದ ನಾನು ಹೆಚ್ಚು ಮಾತನಾಡುವುದಕ್ಕೆ ಇಚ್ಛಿಪಡುವುದಿಲ್ಲ. ಈ ಕಾಮಗಾರಿ ಇಲಾಖೆ ಏನು ಇದೆ ಈ ಇಲಾಖೆಯಿಂದ ಮಾತ್ರ ರಾಜ್ಯದ ಅಭಿವೃದ್ಧಿ ಅಥವಾ ಪ್ರಗತಿಯನ್ನು ಸಾಧಿಸಿ ಈ ದೇಶವನ್ನು ಅಭಿವೃದ್ಧಿಗೆ ತರುವುದಕ್ಕೆ ಸಾಧ್ಯ. ಈ ದೊಡ್ಡ ಇಲಾಖೆಯಲ್ಲಿ ಸೋರಿ ಹೋಗುವ ಹಣವನ್ನು ವ್ಯವಸ್ಥಿತವಾಗಿ ತಡೆಗಟ್ಟಿದರೆ ಬಹಳಷ್ಟು ಅಭಿವೃದ್ಧಿಯಾಗುತ್ತದೆಂದು ನನ್ನ ಭಾವನೆ. ಈ ಇಲಾಖೆಯಲ್ಲಿರುವ ಅಧಿಕಾರಿಗಳಿಂದ ಹಣ ಲುಕ್ಸಾನಾಗುತ್ತಿದೆ. ನಮ್ಮ ಶಿವಮೊಗ್ಗ ಕ್ಷೇತ್ರದ ಒಂದು ಭಾಗದಲ್ಲಿ ಎರಡು ನಾಲೆಗಳು ಹರಿಯುವ ಜಾಗದಲ್ಲಿ ೫ ಸಾವಿರ ಎಕರೆಯಷ್ಟು ಜಮೀನು ಇದೆ. ಒಂದು ಭಾಗದಲ್ಲಿ ಭದ್ರ ಎಡನಾಲೆ ಇನ್ನೊಂದು ಕಡೆ ತುಂಗಾ ಎಡನಾಲೆ ಇದೆ. ಈ ಎರಡು ನಾಲೆಗಳ ಮಧ್ಯೆ ಇರುವ ಜನರು ಬರಗಾಲದ ದವಡೆಗೆ ಸಿಕ್ಕಿದ್ದಾರೆ. ಈ ಎರಡು ನಾಲೆಗಳ ನೀರು ಹರಿಹರ ಮತ್ತು ದಾವಣಗೆರೆಯವರೆಗೆ ಹರಿದು ಹೋಗುತ್ತದೆ. ಆದರೆ ಅಲ್ಲೇ

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇರತಕ್ಕ ಜನರಿಗೆ ಈ ನೀರನ್ನು ಕೊಟ್ಟಿಲ್ಲ ಮನೆಯ ಕರುವನ್ನು ಉಪವಾಸ ಹಾಕಿ ಬೇರೆಯವರ ಮನೆಯ ಕರುವಿಗೆ ಹುಲ್ಲು ಹಾಕಿದಂತೆ ಇವರು ಮಾಡುತ್ತಿದ್ದಾರೆ. ಈ ಹಿಂದೆ ಇದ್ದಂತಹ ಲೋಕೋಪಯೋಗಿ ಸಚಿವರಿಗೂ ಇದರ ಬಗ್ಗೆ ಮನವಿಯನ್ನು ಕೊಟ್ಟಿದ್ದೇವೆ. ಅವರು ಆ ಸ್ಥಳಕ್ಕೆ ಹೋಗಿ ನೋಡಿ ಬಂದಿದ್ದರು. ಈ ನದಿಗಳಿಂದ ಸೋರಿ ಹೋಗುತ್ತಿರುವ ನೀರನ್ನು ಕೊಟ್ಟರೂ ಈ ೫ ಸಾವಿರ ಎಕರೆಗಳಿಗೆ ನೀರಾವರಿ ಸೌಲಭ್ಯ ಸಿಕ್ಕಿದಂತಾಗುತ್ತದೆ.

ಇನ್ನು ಸೇತುವೆಗಳನ್ನು ಈ ಇಲಾಖೆಯವರು ಕಟ್ಟುತ್ತಾರೆ. ಈ ಇಲಾಖೆಯಲ್ಲಿ ಅನೇಕ ಅಧಿಕಾರಿಗಳು ಬಹಳ ದುಷ್ಟತನದಿಂದ ಕೆಲಸವನ್ನು ಮಾಡುತ್ತಾರೆ. ಇವರು ಮಾಡತಕ್ಕ ಸೇತುವೆಗಳೆಲ್ಲಾ ಹಾಳಾಗುತ್ತವೆ. ಒಂದು ಸಾರಿ ಒಂದು ಸೇತುವೆಯನ್ನು ನಮ್ಮ ಜಿಲ್ಲೆಯಲ್ಲಿ ಕಟ್ಟುತ್ತಿದ್ದರು. ನಾನು ಅಲ್ಲಿಗೆ ಹೋಗಿ ವೀಕ್ಷಣೆ ಮಾಡಿ ನೋಡಿದಾಗ, ಮಿಶ್ರಣಕ್ಕೆ ಕಡಿಮೆ ಸಿಮೆಂಟ್ ಹಾಕಿದ್ದು ಕಂಡು ಬಂತು. ಏಕೆ ಸಿಮೆಂಟನ್ನು ಕಡಿಮೆ ಹಾಕಿದ್ದೀರಿ ಎಂದು ಕೇಳಿದಾಗ ಇಲಾಖೆಯವರು ಕೊಟ್ಟಿದ್ದು ಇಷ್ಟೇ ಸಿಮೆಂಟ್, ನಾವು ಏನು ಮಾಡೋಣ ಎಂದು ಕೇಳಿದರು. ಈಗ ಬರುವ ಸಿಮೆಂಟಿನ ಮೂಟೆಯಲ್ಲಿ ೫೦ ಕೆಜಿ ಸಿಮೆಂಟ್ ಬದಲಾಗಿ ಕೇವಲ ೪೫ ಕೆ.ಜಿ. ಸಿಮೆಂಟ್ ಇರುತ್ತದೆ. ಇದನ್ನು ನಾನು ಪರೀಕ್ಷೆ ಮಾಡಿ ನೋಡಿದ್ದೇನೆ. ಇದಕ್ಕೆ ಯಾರು ಹೊಣೆಗಾರರು ? ಯಾರು ಈ ತರಹ ಕಡಿಮೆ ಸಿಮೆಂಟ್‌ನ್ನು ಮೂಟೆಯೊಳಗೆ ಹಾಕುತ್ತಾರೆ ಅಂತಹವರನ್ನು ತಕ್ಷಣ ಸಸ್ಪೆಂಡ್‌ನಲ್ಲಿ ಇಡಬೇಕು. ಇವರು ಕಟ್ಟಿರುವ ಕಟ್ಟಡಗಳು, ಮೋರಿಗಳು ಎಲ್ಲವೂ ಹಾಳಾಗಿವೆ. ಸಿಮೆಂಟ್ ಮೂಟೆಯಲ್ಲಿ ಬರೀ ೪೫ ಕೇಜಿ ಸಿಮೆಂಟ್ ಬರುವುದನ್ನು ಯಾರೂ ಕಂಡು ಹಿಡಿದಿಲ್ಲ ಅದನ್ನು ನಾನು ಕಂಡು ಹಿಡಿದಿದ್ದೇನೆ. ಈ ರೀತಿಯ ಅವ್ಯವಹಾರ ದೊಡ್ಡ ಪ್ರಮಾಣದಲ್ಲಿ ನಡೆದಿದೆ. ೪೫ ಕೇಜಿ ಸಿಮೆಂಟನ್ನು ಕಂಪನಿಗಳಲ್ಲೇ ಹಕುತ್ತಾರೋ ಅಥವಾ ಮಧ್ಯದ ದಾರಿಯಲ್ಲಿ ಅದನ್ನು ೪೫ ಕೇಜಿ ಇಳಿಸುತ್ತಾರೋ ಎಂಬುದನ್ನು ಪತ್ತೆ ಮಾಡಬೇಕು. ಇದರ ಜೊತೆಯಲ್ಲಿ ಇನ್ನೊಂದು ವಿಚಾರ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿರತಕ್ಕ ಒಂದು ಸಂಚಾರಿ ದೋಣಿ ಏನು ಇದೆ ಅದು ಬಹಳ ಹಳೆಯದಾಗಿದೆ. ಅದರ ಬದಲಿಗೆ ಬೇರೆ ದೋಣಿಯನ್ನು ಹಾಕಬೇಕೆಂದು ಕೇಳಿದ್ದೆ. ಅದು ಹಾಕುವುದನ್ನು ತಡ ಮಾಡಿದ್ದರಿಂದ ಅದು ನೀರಿನಲ್ಲಿ ಮುಳುಗಿ ಎರಡು ಜನ ಸತ್ತು ಹೋಗಿದ್ದಾರೆ. ೭೫ ಮೈಲಿ ರಸ್ತೆಯನ್ನು ಬಳಸಿಕೊಂಡು ಹೋಗಬೇಕಾಗಿದ್ದುದನ್ನು ಈ ದೋಣಿಯಲ್ಲಿ ಹೋಗಿದ್ದರೆ ಕೇವಲ ೧೦–೧೫ ಮೈಲಿ ಅಂತರದೊಳಗೆ ಹೋಗಬಹುದಾಗಿತ್ತು. ಆದುದರಿಂದ ಈ ಜಾಗಕ್ಕೆ ಒಂದು ಹೊಸ ದೋಣಿಯನ್ನು ಹಾಕಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಮೊತ್ತ ಬಜೆಟ್‌ನಲ್ಲಿ, ನಮ್ಮ ಸ್ನೇಹಿತರು ಹೇಳಿದ ಹಾಗೆ ಸ್ವಲ್ಪ ತಾರತಮ್ಯವಾಗಿದೆ. ಮಲೆನಾಡು ಪ್ರದೇಶಗಳಿಗೆ ಹೆಚ್ಚು ಹಣವನ್ನು ಕೊಡಬೇಕೆಂದು ಅಧ್ಯಕ್ಷರ ಮೂಲಕ ಮಂತ್ರಿಗಳನ್ನು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

•

† ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಅಧ್ಯಕ್ಷರೇ ನಾನು ಲೋಕೋಪಯೋಗಿ ಇಲಾಖೆಯ ಬೇಡಿಕೆಗಳನ್ನು ಸ್ವಾಗತಿಸುತ್ತಾ ನನ್ನ ಕೆಲವು ಸಲಹೆಗಳನ್ನು ಮತ್ತು ಸೂಚನೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಈಗ ತಾನೆ ಮಾತನಾಡಿದ ನಿಂಗಯ್ಯನವರು ಹೇಳಿದ ಹಾಗೆ, ಕೆರೆಗಳ ಹೂಳು ತೆಗೆಯುವುದಕ್ಕೆ ಸಚಿವರ ಗಮನವನ್ನು ಸೆಳೆಯುತ್ತೇನೆ. ಲೋಕೋಪಯೋಗಿ ಇಲಾಖೆಯಲ್ಲಿ ಅಧಿಕಾರಿಗಳನ್ನು ಪ್ರಶ್ನೆ ಮಾಡಿದಾಗ, ಯಾವುದೇ ಕೆರೆಯ ಹೂಳುಗಳನು ತೆಗೆಯಬಾರದೆಂದು ನಮಗೆ ಮೇಲಿಂದ ಆದೇಶ ಬಂದಿರುವುದಾಗಿ ಹೇಳಿದರು. ಮಾನ್ಯ ಮಂತ್ರಿಗಳು ದಯವಿಟ್ಟು ಇತ್ತಕಡೆ ಗಮನ ಹರಿಸಿ ಕೆರೆಗಳ ಹೂಳುಗಳನ್ನು ತೆಗೆಯುವುದಕ್ಕೆ ಆದೇಶವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಭದ್ರ ಮೇಲ್ದಂಡೆ ಯೋಜನೆಯನ್ನು ತಾವು ಮಾಡುತ್ತಿರುವುದು ನನಗೆ ಆಶ್ಚರ್ಯವಾಗುತ್ತಿದೆ. ಇದಕ್ಕೆ ಯಾರು ಒತ್ತಾಯ ಮಾಡುತ್ತಿದ್ದಾರೋ ಗೊತ್ತಾಗುವುದಿಲ್ಲ. ಈ ಕಾರ್ಯಕ್ರಮವನ್ನು ಈ ಬಜೆಟ್‌ನಲ್ಲಿ ಸೇರಿಸುವುದಕ್ಕೆ ಅವಕಾಶ ಇರಲಿಲ್ಲವೆಂದು ನನ್ನ ವಾದ. ಈ ಡ್ಯಾಮ್‌ನ್ನು ಯಾವ ಉದ್ದೇಶಕಾಗಿ ಮಾಡುತ್ತಿದ್ದೀರೋ ಗೊತ್ತಾಗುತ್ತಿಲ್ಲ. ಈ ಪ್ರದೇಶದಲ್ಲಿ ಅಭಯಾರಣ್ಯ ಇದೆ ಎಂಬುದು ಕರ್ನಾಟಕದ ಪ್ರತಿಯೊಬ್ಬ ಜನರಿಗೂ ಗೊತ್ತಿರುವ ವಿಷಯ. ಅಂತಹ ಒಂದು ಪ್ರದೇಶದ ಸುಮಾರು ೧೭ ಸಾವಿರ ಎಕರೆಯಷ್ಟು ಜಮೀನು ಈ ಡ್ಯಾಮ್ ಕಟ್ಟುವುದರಿಂದ ಮುಳುಗಿ ಹೋಗುವ ಪರಿಸ್ಥಿತಿ ಇದೆ. ಇದರಿಂದ ಕಾಫಿ, ಏಲಕ್ಕಿ ತೋಟಗಳು ಮುಳುಗಿ ಹೋಗುತ್ತವೆ. ಜೊತೆಗೆ ಶೃಂಗೇರಿ ಕ್ಷೇತ್ರ ಏನಾಗುತ್ತದೆ ಎಂದರೆ, ಆ ಕ್ಷೇತ್ರವನ್ನು ಪೂರ್ತಿ ಕೈಬಿಟ್ಟು ಶಿವಮೊಗ್ಗಕ್ಕೆ ಸ್ಥಳಾಂತರಿಸಬೇಕಾದ ಸಂದರ್ಭ ಈ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅಣೆಕಟ್ಟಿನಿಂದ ಬರಬಹುದೆಂದು ಭಾವನೆ ನನ್ನ ಮನಸ್ಸಿಗೆ ಬಂದಿದೆ. ಈ ಯೋಜನೆಯನ್ನು ತಾವು ನೇರವಾಗಿ ಕೈಗೊಂಡಿದ್ದೀರಿ, ಇದನ್ನು ಅಲ್ಲಿನ ೫ ತಾಲ್ಲೂಕಿನ ಜನರು ವಿರೋಧಿಸುತ್ತಿದ್ದಾರೆ. ಆದ್ದರಿಂದ ನಾನು ವಿನಯದಿಂದ ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುವುದೇನೆಂದರೆ ಈ ಕಾರ್ಯಕ್ರಮವನ್ನು ಕೈಬಿಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಜೊತೆಗೆ ಶ್ರೀಮಾನ್ ದೇವೇಗೌಡರಿಗೆ ಒಂದು ಪ್ರಾರ್ಥನೆಯನ್ನು ಮಾಡಿಕೊಂಡಿದ್ದೆ, ಅದೇನೆಂದರೆ ತರೀಕೆರೆ ಮತ್ತು ಚಿಕ್ಕಮಗಳೂರು ಮಧ್ಯೆ ಒಂದು ಸೇತುವೆ ಇದೆ, ಅದನ್ನು ಮಾನ್ಯ ಸಚಿವರೂ ನೋಡಿದ್ದಾರೆ, ಮಳೆಗಾಲ ಪ್ರಾರಂಭವಾದ ಕೂಡಲೆ ಅಲ್ಲಿ ರೋಡಿಗೆ ನೀರು ಬಂದು ಸೇತುವೆಯು ಮುಚ್ಚಿಕೊಳ್ಳುತ್ತದೆ ಹಾಗೂ ಇದು ಮುರಿದು ಹೋಗುವ ಸ್ಥಿತಿಗೆ ಬಂದಿದೆ. ಇನ್ನು ಸ್ವಲ್ಪ ದಿನಗಳಲ್ಲಿ ಅದು ಕುಸಿದು ಬೀಳುತ್ತದೆ. ಈ ಸೇತುವೆಯಿಂದ ಪ್ರಾಣಹಾನಿಯಾಗುವ ಸಂಭವ ಇದೆ. ಲಾರಿ ಬಸ್ಸುಗಳು ಈ ಸೇತುವೆಯ ಮೇಲೆ ಬರಬಾರದೆಂದು ಲೋಕೋಪಯೋಗಿ ಇಲಾಖೆಯವರು ಬೋರ್ಡ್‌ನ್ನು ಬರೆಸಿದ್ದರು. ಆದರೆ ಆ ಬೋರ್ಡ್‌ನ್ನು ತೆಗೆದುಹಾಕಿ ಬಸ್‌ಗಳನ್ನು ಮತ್ತು ಲಾರಿಗಳನ್ನು ಅದರ ಮೇಲೆ ಓಡಿಸುತ್ತಿದ್ದಾರೆ. ಆದುದರಿಂದ ಮಾನ್ಯ ದೇವೇಗೌಡರು ಈ ಕೂಡಲೇ ಆ ಸೇತುವೆಯ ಕಾರ್ಯವನ್ನು ಕೈಗೆತ್ತಿಕೊಂಡು ಸೇತುವೆಯ ರಿಪೇರಿ ಕೆಲಸವನ್ನು ಮುಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಉಳಿದ ಕಾರ್ಯಕ್ರಮಗಳ ಬಗ್ಗೆ, ಮಲೆನಾಡಿನ ಕಡೆಗೂ ಹೆಚ್ಚು ಗಮನ ಕೊಡಬೇಕು. ದುರ್ದೈವದ ಸಂಗತಿ ಎಂದರೆ ಮಲೆನಾಡಿನ ಪ್ರದೇಶಗಳಲ್ಲಿ ಮಳೆ ಬಂದಾಗ ಅಲ್ಲಿನ ರಸ್ತೆಗಳಲ್ಲಿ ಓಡಾಡುವುದು ಬಹಳ ಕಷ್ಟವಾಗುತ್ತದೆ. ಇನ್ನು ಮುಂದೆ ಮಲೆನಾಡು ಪ್ರದೇಶಗಳ ರಸ್ತೆಗಳನ್ನು ಸರಿಯಾಗಿ ರಿಪೇರಿ ಮಾಡಿಸಬೇಕೆಂದು ಮಾನ್ಯ ಲೋಕೋಪಯೋಗಿ ಸಚಿವರಿಗೆ ತಮ್ಮ ಮೂಲಕ ಕೇಳಿಕೊಂಡು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನು ಮುಗಿಸುತ್ತೇನೆ,

೬-೦೦ ಪಿ.ಎಂ.

† ಶ್ರೀ ಚಂದ್ರಶೇಖರ ಮಾಮನಿ (ಪರಸಗಡ).—ಸನ್ಮಾನ್ಯ ಸಭಾಧ್ಯಕ್ಷರೇ, ಇವೊತ್ತು ನಾನು ೧೯೮೫_೮೬ನೇ ಇಸವಿಯ ಲೋಕೋಪಯೋಗಿ, ನೀರಾವರಿ ಮತ್ತು ಜಲಾಶಯದ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಮಾನ್ಯ ದೇವೇಗೌಡರು ತಂದಿರುವಂಥ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತಾ ಕೆಲವು ಸೂಚನೆಗಳನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನನ್ನ ಮತ ಕ್ಷೇತ್ರದಲ್ಲಿ ಬಡುಕಾತರ ಲಿಫ್ಟ್ ಇರಿಗೇಷನ್ ಸ್ಕೀಮ್ ಇದೆ ಅದನ್ನು ಮೈನರ್ ಇರಿಗೇಷನ್ ಬಜೆಟ್‌ನಲ್ಲಿ ೮೭ ಲಕ್ಷ ರೂ.ಗಳಲ್ಲಿ ಸೇರಿಸಿದ್ದಾರೆ. ಅದಕ್ಕೆ ಟೋಕನ್ ಗ್ರಾಂಟ್ ಕೊಟ್ಟಿರುವುದು ೧೦ ಸಾವಿರ ರೂ.ಗಳು ಮಾತ್ರ. ಮಾನ್ಯ ಮಂತ್ರಿವರ್ಯರು ೧೯೮೪ರಲ್ಲಿ ಸೌಂದತ್ತಿಗೆ ಭೇಟಿ ಕೊಟ್ಟಾಗ ಅಧಿಕಾರಿಗಳಿಗೆ ಏನು ಹೇಳಿದ್ದರು ಎಂದರೆ-ನಾನು ೧೯೮೫ನೇ ಮಾರ್ಚ್ ತಿಂಗಳಲ್ಲಿ ೨೫ನೇ ತಾರೀಖಿನ ದಿವಸ ಇಲ್ಲಿಗೆ ಪುನಃ ಬರುತ್ತೇನೆ, ಆಗ ಈ ಯೋಜನೆಯ ಕಾರ್ಯಕ್ಕಾಗಿ ಫೌಂಡೇಷನ್ ಸ್ಟೋನ್ ಹಾಕುವ ಕಾರ್ಯಕ್ರಮವನ್ನು ಇಟ್ಟುಕೊಳ್ಳಿ ಎಂದು ಹೇಳಿದ್ದರು. ಆದರೆ ಅದು ಇದುವರೆಗೂ ಆಗಿಲ್ಲ ಎಂದು ಮಾನ್ಯ ಮಂತ್ರಿಗಳವರಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆ ಕ್ಷೇತ್ರದ ಜನರು ಮಲಪ್ರಭಾ ಯೋಜನೆಯಲ್ಲಿ ಮೊದಲೇ ಮುಳುಗಡೆ ಆದಂತಹ ಹಳ್ಳಿಯವರು. ಅಲ್ಲಿಯ ಜನರಿಗೆ ಅವರು ಕಳೆದುಕೊಂಡಂತಹ ಭೂಮಿಗೆ ಪರಿಹಾರ ಕೂಡಾ ಇದುತನಕವೂ ಕೊಟ್ಟಿಲ್ಲ. ಎಲ್ಲಾ ದೃಷ್ಟಿಯಿಂದಲೂ ಆ ಪ್ರದೇಶದ ಜನರಿಗೆ ತುಂಬಾ ತೊಂದರೆಯಾಗಿದೆ. ಆದುದರಿಂದ ಮಾನ್ಯ ಮಂತ್ರಿಯವರು ಈ ಯೋಜನೆಯನ್ನು ತ್ವರಿತ ಗತಿಯಲ್ಲಿ ಮಾಡಿ ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಅದು ಅಲ್ಲದೇ ಮಲಪ್ರಭಾ ಯೋಜನೆಯಲ್ಲಿ ರಿಸರ್ವಾಯರ್‌ನಲ್ಲಿ ಎರಡು ಸಾವಿರದ ಎಪ್ಪತ್ತು ಅಡಿ ಈವರೆಗೆ ನೀರು ಇದ್ದುದು, ಈಗ ಕೇವಲ ಎರಡು ಸಾವಿರದ ಐವತ್ತು ಅಡಿ ಮಾತ್ರ ಇದ್ದು ಇದು ಈ ಮುಂದಿನ ನೀರಾವರಿಗೆ ನೀರಿನ ತೊಂದರೆ ಆಗುತ್ತದೆ. ಆ ದೃಷ್ಟಿಯಿಂದ ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಪ್ರಯತ್ನಪಟ್ಟು ಗೋವಾದ ಹತ್ತಿರ ಇರುವ ಮಾದಾಯಿ ನದಿಯನ್ನು ಮಲಪ್ರಭ ಯೋಜನೆಯಲ್ಲಿ ಕೂಡಿಸಿಕೊಂಡರೆ ಉತ್ತರ ಕರ್ನಾಟಕದವರಿಗೆ ಅದರಲ್ಲೂ ಕೆಲವು ಪ್ರದೇಶಗಳಿಗೆ ಹೆಚ್ಚಿನ ನೀರಾವರಿ ಸೌಲಭ್ಯ ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಲ್ಲದೇ ನೀರಾವರಿ ಪ್ರದೇಶಗಳಲ್ಲಿ ರಿಹ್ಯಾಬಿಲಿಟೇಶನ್ ಸೆಂಟರ್‌ನಲ್ಲಿ ೧೫-೨೦ ವರ್ಷಗಳ ಹಿಂದೆ ಮಾಡಿದಂತಹ ಯಾವುದೇ ಶಾಲೆಗಳಿಗಾಗಲೀ, ರಸ್ತೆಗಳಿಗಾಗಲೀ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅಥವಾ ಸಮಾಜ ಮಂದಿರಗಳಿಗಾಗಲಿ ಇದುವರೆಗೂ ರಿಪೇರಿ ಮಾಡಿಸಲಿಲ್ಲ. ಅಂತಹವುಗಳನ್ನು ತ್ವರಿತಗತಿಯಿಂದ ರಿಪೇರಿ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ರಸ್ತೆಗಳ ಬಗ್ಗೆ ಹೇಳುವುದಾದರೆ. ನಮ್ಮ ಮತದಾರ ಕ್ಷೇತ್ರದಲ್ಲಿ ಗಾಡೆಕೊಪ್ಪ ಎಂಬ ಗ್ರಾಮ ಇದೆ, ನಮಗೆ ಸ್ವಾತಂತ್ರ್ಯ ಸಿಕ್ಕಿ ಇವತ್ತಿಗೆ ೩೦ ವರ್ಷಗಳಾದರೂ ಅಲ್ಲಿ ಯಾವುದೇ ಸಂಪರ್ಕ ವ್ಯವಸ್ಥೆ ಇಲ್ಲ, ಅಲ್ಲಿಯ ಜನರಿಗೆ ಬೇರೆ ಕಡೆಗೆ ಹೋಗಿ ಬರುವಂತಹ ಯಾವುದೇ ಸಾಧನಸೌಕರ್ಯಗಳೂ ಇಲ್ಲ, ರಸ್ತೆ ಇಲ್ಲ. ಈ ವಿಷಯದಲ್ಲಿ ನಮ್ಮ ಮಾನ್ಯ ಮಂತ್ರಿವರ್ಯರಲ್ಲಿ ಅನೇಕಬಾರಿ ವಿನಂತಿಸಿಕೊಂಡಿದ್ದೇನೆ. ಆದರೂ ಇದುವರೆವಿಗೂ ಆಗಿಲ್ಲ, ಆದುದರಿಂದ ಅಲ್ಲಿರತಕ್ಕಂತಹ ಒಂದು ನಡುಗಡ್ಡೆಯ ತರಹದ ಆ ಹಳ್ಳಿಗೆ ತ್ವರಿತವಾಗಿ ಸಂಪರ್ಕ ಸೌಲಭ್ಯವನ್ನು ಕಲ್ಪಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ನನ್ನ ಮತದಾರ ಕ್ಷೇತ್ರದಲ್ಲಿ ಸುಪ್ರಸಿದ್ಧವಾದಂತಹ ಕ್ಷೇತ್ರ ರೇಣುಕಾ ಯಲ್ಲಮ್ಮ ದೇವಸ್ಥಾನ ಇದೆ. ಶ್ರೀದೇವಿಯ ಕ್ಷೇತ್ರಕ್ಕೆ ಪ್ರತಿ ವರ್ಷವೂ ಕನಿಷ್ಟ ಐದಾರು ಲಕ್ಷ ಜನ ಯಾತ್ರಿಕರು, ನಮ್ಮ ರಾಜ್ಯದಿಂದಷ್ಟೆ ಅಲ್ಲ, ಸುತ್ತುಮುತ್ತಲಿನ ರಾಜ್ಯಗಳಿಂದಲೂ ಬರುತ್ತಾರೆ. ಆದರೆ ಸೌಂದತ್ತಿ ನಗರಕ್ಕೆ ಸರಿಯಾದ ರಸ್ತೆಯ ಸೌಲಭ್ಯ ಇಲ್ಲವಾಗಿದೆ. ಈಗ ಇರುವುದು ಸಿಂಗಲ್ ರಸ್ತೆ, ಅದನ್ನು ಡಬಲ್ ರಸ್ತೆಯನ್ನಾಗಿ ಮಾಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇದಲ್ಲದೇ ನನ್ನ ಕ್ಷೇತ್ರದ ಇತರ ಸಮಸ್ಯೆಗಳ ಬಗ್ಗೆ ಸೂಕ್ತ ಗಮನ ಕೊಟ್ಟು ಆದ್ಯತೆಯ ಮೇರೆಗೆ ಕೆಲಸಕಾರ್ಯ ಗಳನ್ನು ಮಾಡಿಸಿಕೊಡಬೇಕಾಗಿ ಮಾನ್ಯ ಮಂತ್ರಿಯವರಲ್ಲಿ ವಿನಂತಿಸಿಕೊಂಡು, ನನಗೆ ಅವಕಾಶವನ್ನು ಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ನನ್ನ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಗುರುಪಾದಪ್ಪ ನಾಗರಪಲ್ಲಿ (ಔರಾದ್).—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ಇವತ್ತು ಇಲ್ಲಿ ಮಂಡಿಸಿದ ನೀರಾವರಿ ಬೇಡಿಕೆಗಳನ್ನು ಅನುಮೋದಿಸುತ್ತಾ ಹಾಗೂ ಸಚಿವರು ಕೊಟ್ಟಂತಹ ಅಂಕಿಅಂಶಗಳನ್ನು ನೋಡಿ ಬಹಳ ಸಂತೋಷಪಡುವಂತಾಗಿದೆಯೆಂದು ಹೇಳುತ್ತೇನೆ. ಆದರೆ ಒಂದು ಅಸಮಾಧಾನದ ಅಂಶ ಏನೆಂದರೆ ನಮ್ಮ ಬೀದರ್ ಜಿಲ್ಲೆಯ ಕಾರಂಜಾ ಪ್ರಾಜೆಕ್ಟ್‌ಗೆ ಇದರಲ್ಲಿ ಎಷ್ಟು ಹಣವನ್ನು ಕೊಡಬೇಕಾಗಿತ್ತೋ ಅಷ್ಟು ಹಣವನ್ನು ಕೊಟ್ಟಿಲ್ಲ. ಆದುದರಿಂದ ದಯಮಾಡಿ ಈ ಸಾರಿಯಾದರೂ ಅದಕ್ಕಾಗಿ ಜಾಸ್ತಿ ಹಣವನ್ನು ಕೊಟ್ಟು ಬೇಗ ಅದನ್ನು ಪೂರ್ತಿ ಮಾಡುವುದಕ್ಕೆ ಮಾನ್ಯ ಸಚಿವರು ಗಮನ ಕೊಡುತ್ತಾರೆಂದು ನಂಬಿದ್ದೇನೆ. ಇನ್ನು ನಮ್ಮ ತಾಲ್ಲೂಕು ಔರಾದ ಕ್ಷೇತ್ರದಲ್ಲಿ ಯಾವುದೇ ಒಂದು ನೀರಾವರಿಯೂ ಇಲ್ಲ. ಈ ಬಗ್ಗೆ ಮೊದಲು ಕೂಡಾ ಸಲಹೆ ಕೊಟ್ಟಿದ್ದೇನೆ. ನಮ್ಮಲ್ಲಿ ಮಂಜರಾ ಲಿಫ್ಟ್ ಇರಿಗೇಷನ್ ಮಾಡಿದರೆ ಸುಮಾರು ಒಂದು ಲಕ್ಷ ಎಕರೆ ಜಮೀನು ನೀರಾವರಿಯನ್ನು ಹೊಂದಿದಂತಾಗುತ್ತದೆ, ಇದನ್ನು ಮಾಡುವುದರಿಂದ ನಮ್ಮ ಭಾಗದ ಜನರಿಗೆ ತುಂಬಾ ಅನುಕೂಲ ಮಾಡಿಕೊಟ್ಟಹಾಗೆ ಆಗುತ್ತದೆ. ನಮ್ಮ ತಾಲೂಕು ಪ್ರದೇಶದಲ್ಲಿ ಯಾವುದೇ ನೀರಾವರಿ ಯೋಜನೆಯನ್ನು ಈತನಕ ಕೈಗೊಂಡಿಲ್ಲವಾದ ಕಾರಣ ದಯಮಾಡಿ ಈ ಮಂಜರ ಲಿಫ್ಟ್ ಇರಿಗೇಷನ್‌ನ್ನು ಮಾಡಿಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳು ತ್ತೇನೆ. ಹಾಗೆಯೇ ನನ್ನ ಸ್ನೇಹಿತರು ಹೇಳಿದರು, ದೊಡ್ಡ ದೊಡ್ಡ ಕೆರೆಗಳನ್ನು ಮಾಡುವುದನ್ನು ನೋಡಲು ಹೆಲಿಕಾಪ್ಟರ್ ಬಳಸಿದರೆ ತಪ್ಪಾಗುವುದಿಲ್ಲ ಎಂದು. ಅದು ಸರಿಯಾಗಿದೆ. ಒಳ್ಳೆಯ ಕೆಲಸಕ್ಕೆ ಅದನ್ನು ಉಪಯೋಗ ಮಾಡಬಹುದು. ಈ ಹಿಂದೆ ಇದ್ದವರು ಮನೆಗೆ ಹೋಗಿ ಬರುವುದಕ್ಕೂ ಹೆಲಿಕಾಪ್ಟರ್‌ನ್ನು ಬಳಸಿದ್ದರು. ಈಗ ಅದನ್ನು ಒಳ್ಳೆಯ ಕೆಲಸಕ್ಕೆ ಬಳಸಿದರೆ ಒಳ್ಳೆಯದು ಎಂದು ನಾನು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ ಇವತ್ತು ಮಾನ್ಯ ದೇವೇಗೌಡರು, ಮೈನರ್ ಇರಿಗೇಷನ್ ಇಲಾಖೆಯನ್ನು ಬೇರೆ ಮಾಡಿ ಅವರಿಗೆ ಕೆಲವು ಅಧಿಕಾರಗಳನ್ನು ಕೊಟ್ಟು ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಲು ಅವರಿಗೆ ಹೆಚ್ಚು ಅನುಕೂಲವನ್ನು ಮಾಡಿಕೊಟ್ಟಿದ್ದಾರೆ. ಮೊದಲು ಈ ರೀತಿಯಾಗಿ ಕೆಲಸ ಗಳು ಅಲ್ಲಿ ನಡೆಯುತ್ತಾ ಇರಲಿಲ್ಲ. ಈಗ ತುಂಬಾ ಚೆನ್ನಾಗಿ ಕಾರ್ಯನಿರ್ವಹಣೆ ನಡೆಯುತ್ತಾ ಇದೆ. ಮಾನ್ಯ ದೇವೇಗೌಡರು ಪಿ.ಡಬ್ಲ್ಯು.ಡಿ.ಯಲ್ಲಿ ಚೆನ್ನಾಗಿ ಕೆಲಸ ಮಾಡತಕ್ಕಂತಹ ಒಂದು ಭಾವನೆಯನ್ನು ಉಂಟುಮಾಡಿದ್ದಾರೆ. ಅದಕ್ಕಾಗಿ ಮಾನ್ಯರಿಗೆ ನಾನು ಶಹಭಾಶ್‌ಗಿರಿಯನ್ನು ಕೊಡುತ್ತಾ ಇದ್ದೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ದೇವೇಗೌಡರಿಗೆ ಇದುವರೆಗೆ ಯಾರೂ ಕೂಡಾ ಶಹಬಾಶ್‌ಗಿರಿಯನ್ನು ಕೊಟ್ಟಿಲ್ಲ. ಈಗ ಇವರು ಕೊಡುತ್ತಾ ಇದ್ದಾರೆ, ವಿಷಯ ಏನು ಎಂದು ತಿಳಿಯುತ್ತಿಲ್ಲ.

ಶ್ರೀ ಗುರುಪಾದಪ್ಪ ನಾಗರಪಲ್ಲಿ.—ನಾನು ಕೊಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವಾಗ ಮಾನ್ಯ ಸದಸ್ಯರು ಮಧ್ಯೆ ಪ್ರವೇಶ ಮಾಡಬಾರದು. ಅವರು ಮಾತನಾಡುವಾಗ ಅವರಿಗೆ ಸಂತೋಷ ಬಂದಂತೆ ಮಾತಾಡಲಿ. ನಾವು ಹೊಸಬರು ಮಾತನಾಡುವಾಗ ಹೀಗೆ ನಮ್ಮನ್ನು ಹೊಸದಾಗಿ ಮಾತನಾಡುತ್ತಿರುವವರನ್ನು ಗೊಂದಲಕ್ಕೆ ಸಿಕ್ಕಿಸಬಾರದು. ನನ್ನ ಸ್ನೇಹಿತರ ಅಭಿಪ್ರಾಯ ಇರಬಹುದು. ಅದು ಅವರಿಗೆ ಬಿಟ್ಟದ್ದು. ಈ ಲೋಕೋಪಯೋಗಿ ಇಲಾಖೆಯಲ್ಲಿ ಈ ಹಿಂದೆ ಎಷ್ಟರಮಟ್ಟಿಗೆ ಭ್ರಷ್ಟಾಚಾರ ಇತ್ತು ಅಂದರೆ, ಲೋಕೋಪಯೋಗಿ ಇಲಾಖೆಯೇ ಬೇಡ ಎಂಬ ಭಾವನೆ ಇತ್ತು. ಆ ರೀತಿಯಲ್ಲಿ ಅಧಿಕಾರಿಗಳು ವರ್ತಿಸುತ್ತಾ ಇದ್ದರು. ಆದರೆ ಈಗ ದೇವೇಗೌಡರು ಅಂದರೆ ಅವರಿಗೆ ಭಯ ಉಂಟಾಗಿದೆ, ಅವರಲ್ಲಿ ಶಿಸ್ತು ಹುಟ್ಟಿಕೊಂಡಿದೆ. ಭ್ರಷ್ಟರಾದವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾ ಇದ್ದಾರೆ. ಒಳ್ಳೆಯ ರೀತಿಯಿಂದ ಕೆಲಸವನ್ನು ಮಾಡುತ್ತಾ ಇದ್ದಾರೆ. ಮೊದಲು ಏನೇನೋ ಕೆಲಸಕಾರ್ಯಗಳು ಆಗುತ್ತಿರಲಿಲ್ಲ. ಈಗ ಅದು ಹೋಗಿ ಉತ್ತಮ ರೀತಿಯಲ್ಲಿ ಕಾರ್ಯಗಳು ಆಗುತ್ತಾ ಇವೆ. ಹಿಂದೆ ಜನರಲ್ಲಿದ್ದ ಒಂದು ಅಸಮಾಧಾನದ ಭಾವನೆ ಈಗ ಇಲ್ಲ, ಅದು ಹೋಗಿಬಿಟ್ಟಿದೆ, ಅದಕ್ಕಾಗಿ ಮಾನ್ಯ ಸಚಿವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ, ಇನ್ನು ಮುಂದೂ ಕೂಡಾ ಹಾಗೆಯೇ ಒಳ್ಳೆಯ ಕೆಲಸವನ್ನು ಮಾಡುತ್ತಿರಲಿ ಎಂದು ನನ್ನ ಹಾರೈಕೆ ಯಾಗಿದೆ. ಹಿಂದಿನ ಶಾಸಕರು ಕೆಲವು ಕೆಲಸಗಳನ್ನು ಕ್ಷೇತ್ರಕ್ಕೆ ಮಾಡಿಕೊಂಡಿದ್ದಾರೆ. ಈಗ ನಮಗೆ ಸ್ವಲ್ಪ ಕಷ್ಟವಾಗಿದೆ. ಜನರು, ಜನಹಿತ ಕಾರ್ಯಗಳನ್ನು ಮಾಡಿಕೊಡಿ ಎಂದು ಕೇಳಿದರೆ ನಮಗೆ ತುಂಬಾ ಕಷ್ಟವಾಗುತ್ತಿದೆ. ನಾವುಗಳು ಸೇತುವೇ ಮಾಡಿಕೊಡಿ, ರಸ್ತೆಗಳನ್ನು ಮಾಡಿಕೊಡಿ, ನೀರಾವರಿ ಯೋಜನೆಗಳನ್ನು ಮಾಡಿಕೊಡಿ ಎಂದು ತಮ್ಮನ್ನು ಕೇಳಿದರೆ ಅದು ಇಲ್ಲ, ಇದು ಆಗುವುದಿಲ್ಲ, ಎಂದು ಹೇಳಿದರೆ ನಮಗೆ ಜನರ ಮುಂದೆ ಹೋಗಲು ತುಂಬಾ ಕಷ್ಟವಾಗುತ್ತದೆ. ಈಗ ತುಂಬಾ ಇಕ್ಕಟ್ಟಿಗೆ ನಾವು ಸಿಲುಕಿದ್ದೇವೆ. ಆದುದರಿಂದ ಮಾನ್ಯ ಸಚಿವರು ದಯಮಾಡಿ ನಮ್ಮ ಕ್ಷೇತ್ರದ ಕಾಮಗಾರಿಗಳ ಬಗ್ಗೆ ಹೆಚ್ಚು ಲಕ್ಷ್ಯ ವಹಿಸಿ ನಮ್ಮ ಜನರಿಗೆ ಅನುಕೂಲತೆಗಳನ್ನು ಒದಗಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಕ್ಷೇತ್ರಕ್ಕೆ, ಸೇತುವೆ ಮತ್ತು ಕುಡಿಯುವ ನೀರಿನ ಬಗ್ಗೆ ಹಾಗೂ ಕೆರೆಕುಂಟೆಗಳ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಕ್ಷೇತ್ರದ ಕಲ್ಯಾಣವನ್ನು ಮಾಡಬೇಕೆಂದು ಅರಿಕೆ ಮಾಡುತ್ತೇನೆ. ಕುಡಿಯುವ ನೀರಿನ ಬಗ್ಗೆ ನಮ್ಮಲ್ಲಿ ಯಾವುದೇ ಸೂಕ್ತ ವ್ಯವಸ್ಥೆ ಇಲ್ಲ ಅದನ್ನು ಮಾಡಿಸಿಕೊಡಬೇಕೆಂದು ಕೇಳಿಕೊಂಡು ಮಾನ್ಯ ಸಚಿವರು ಮಂಡಿಸಿರುವಂಥ ಬೇಡಿಕೆಗಳನ್ನು ಅನುಮೋದಿಸಿ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜಿ. ರಾಜುಗೌಡ (ಹಾನೂರು).—ಸನ್ಮಾನ್ಯ ಸಭಾಧ್ಯಕ್ಷರೇ ಈ ಸದನದಲ್ಲಿ ಮಂಡಿಸಿರ ತಕ್ಕಂಥ ಲೋಕೋಪಯೋಗಿ ಹಾಗೂ ನೀರಾವರಿ ಬೇಡಿಕೆಗಳ ಮೇಲೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ ಈ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆ ಯಲ್ಲಿ ಭ್ರಷ್ಟಾಚಾರವೆಂಬುದು ತಾಂಡವವಾಡುತ್ತಿದೆ. ಈ ಭ್ರಷ್ಟಾಚಾರವನ್ನು ತಡಗಟ್ಟಲು ನಮ್ಮ ಮಾನ್ಯ ಲೋಕೋಪಯೋಗಿ ಸಚಿವರು ಬಹಳ ಪ್ರಯತ್ನವನ್ನು ಮಾಡುತ್ತಿದ್ದಾರೆ. ನಿಜವಾಗಿಯೂ ಕೂಡ ಇದು ಮೆಚ್ಚತಕ್ಕಂಥ ವಿಷಯ. ಪ್ರತಿಯೊಂದು ಹಂತದಲ್ಲಿಯೂ ಕೂಡ ಭ್ರಷ್ಟಾಚಾರವನ್ನು ಕಡಿಮೆ ಮಾಡಬೇಕೆಂದು ಹೇಳಿ ಸಾಕಷ್ಟು ಗುಣಮಟ್ಟವನ್ನು ಹೆಚ್ಚು ಮಾಡುತ್ತಿದ್ದಾರೆ. ಈ ಇಲಾಖೆ ಯನ್ನು ಮಾನ್ಯ ಮಂತ್ರಿಗಳು ಕೈಗೆ ತೆಗೆದುಕೊಂಡಮೇಲೆ ಒಂದೇ ಒಂದು ವರ್ಷದಲ್ಲಿ ಸಾವಿರಾರು ಕಾಮಗಾರಿಗಳನ್ನು ಪೂರೈಸಿದ್ದಾರೆ. ಮತ್ತೆ ಕೆಲವು ಕಾಮಗಾರಿಗಳನ್ನು ಸ್ವತಹಃ ಮಂತ್ರಿಗಳೇ ಹೋಗಿ ಪರಿಶೀಲನೆ ಮಾಡಿದ್ದಾರೆ. ಇನ್ನೊಂದು ಮುಖ್ಯವಾದ ವಿಷಯವನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುವುದೇನೆಂದರೆ ಭ್ರಷ್ಟಾಚಾರವನ್ನು ಕಡಿಮೆ ಮಾಡಬೇಕೆಂದು ತಾವೇನೋ ಸರ್ವ ಪ್ರಯತ್ನವನ್ನು ಮಾಡುತ್ತಿದ್ದೀರಿ. ಆದರೂ ಕೂಡ ಕೆಲವು ಕಡೆಗಳಲ್ಲಿ ಭ್ರಷ್ಟಾಚಾರ ಇನ್ನೂ ಇದೆ. ಉದಾಹರಣೆಯಾಗಿ ಹೇಳಬೇಕಾದರೆ ಕಾಮಗಾರಿ ಕೆಲಸ ಕಾರ್ಯಗಳಿಗೆ ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ತಯಾರು ಮಾಡಿ ಅಲ್ಲಿ ಕೆಲಸ ಪ್ರಾರಂಭ ಮಾಡದೇ ಅನೇಕ ಕಾಮಗಾರಿಗಳ ಬಿಲ್ಲುಗಳು

---

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಪಾವತಿಯಾಗಿವೆ. ಆದ್ದರಿಂದ ನಾನು ಒಂದು ಸಲಹೆಯನ್ನು ಮಾಡುವುದಾದರೂ ಏನೆಂದರೆ ಜೂನಿಯರ್ ಇಂಜಿನಿಯರ್ ಅಥವಾ ಅಸಿಸ್ಟೆಂಟ್ ಇಂಜಿನಿಯರ್ ಬಿಲ್ಲು ತಯಾರು ಮಾಡಿ ನೋಡಿದ ನಂತರ ಅದೇ ಬಿಲ್ಲನ್ನು ಮತ್ತೆ ಮೇಲಿನ ಅಧಿಕಾರಿಗಳು ನೋಡುವಂತಹ ಒಂದು ವ್ಯವಸ್ಥೆಯನ್ನು ಮಾಡಿದರೆ ಆಗ ಎಲ್ಲಿ ದೋಷವಾಗಿರುತ್ತದೆಯೋ ಅದನ್ನು ಕಂಡು ಹಿಡಿದು ಭ್ರಷ್ಟಾಚಾರ ನಡೆಯುವುದನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡಬಹುದೆಂದು ನನ್ನ ನಂಬಿಕೆ. ಈಗ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತರವನ್ನು ಬರೆದಿರುತ್ತಾರೆ. ಆ ಉತ್ತರವನ್ನು ವಾಲ್ಯುಯೇಶನ್ ಮಾಡಿದವರಿಗೆ ಅದರಲ್ಲಿ ಏನು ತಪ್ಪಿದೆ ಎಂದು ಸರಿಯಾಗಿ ಕಂಡುಬರುವುದಿಲ್ಲ. ಅದನ್ನು ಮೇಲಿನ ಅಧಿಕಾರಿಗಳು ನೋಡಿದಾಗ ತಪ್ಪು ಇರುವುದು ಕಂಡು ಬರುತ್ತದೆ. ಆ ರೀತಿ ಕಂಟ್ರಾಕ್ಟರ್ ತಯಾರು ಮಾಡಿ ಕೊಟ್ಟಂತಹ ಬಿಲ್ಲನ್ನು ಅಧಿಕಾರಿಗಳು ಪಾಸುಮಾಡಿಕೊಂಡು ಹೋದರೆ ಇದರಿಂದ ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿಗಳ ನಷ್ಟವಾಗುತ್ತದೆ. ಇದನ್ನು ತಪ್ಪಿಸಬೇಕೆಂದು ನನ್ನ ಮನವಿ. ಇನ್ನು ಎರಡನೆಯದಾಗಿ ಹೇಳುವುದಾದರೆ ಇನ್ನು ಮುಂದೆ ಹೊಸದಾಗಿ ಕಂಟ್ರಾಕ್ಟುದಾರರನ್ನು ರಿಜಿಸ್ಟರ್ ಮಾಡಿಸಿಕೊಳ್ಳುವುದು ನಿಲ್ಲಿಸಿದರೆ ಒಳ್ಳೆಯದು. ಕಾರಣವೇನೆಂದರೆ ತಾವು ಯಾವುದಾದರೊಂದು ಕಾಮಗಾರಿ ಕೆಲಸಕ್ಕೆ ಟೆಂಡರ್ ಕರೆಯುತ್ತೀರಿ. ಅಲ್ಲಿ ಏನು ಮಾಡುತ್ತಾರೆ ಗೊತ್ತೆ ಆ ಟೆಂಡರ್‌ಗೆ ಯಾರಾದರೂ ಒಬ್ಬರು ಟೆಂಡರ್ ಅರ್ಜಿಯನ್ನು ಸಲ್ಲಿಸುವುದು. ಇನ್ನು ಉಳಿದವರು ಅದರಲ್ಲಿ ಶೇರು ಮಾಡಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಇದರಿಂದ ಸರ್ಕಾರಕ್ಕೂ ಕೂಡ ನಷ್ಟವಾಗುತ್ತದೆ. ಇದನ್ನು ಮಾನ್ಯ ಮಂತ್ರಿಗಳು ಇನ್ನು ಮುಂದೆ ಕೈ ಬಿಡಬೇಕು. ಅದೇ ರೀತಿಯಲ್ಲಿ ಪ್ರತಿಯೊಂದು ಕಿಲೋಮೀಟರ್‌ಗೆ ಒಂದು ವರ್ಷದಲ್ಲಿ ರಸ್ತೆಗಳನ್ನು ರಿಪೇರಿ ಮಾಡುವುದಕ್ಕಾಗಿ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳುತ್ತೀರಿ. ಸುಮಾರು ೨೦ ಕಿಲೋಮೀಟರ್‌ಗಳಿಗೆ ೨೦ ಸಾವಿರ ರೂಪಾಯಿಗಳು ಕೊಡಬೇಕಾಗುತ್ತದೆ. ೪-೫ ಕಿಲೋಮೀಟರ್‌ಗಳಿಗೆ ಒಬ್ಬ ಗ್ಯಾಂಗ್‌ಮನ್ ಇರುತ್ತಾನೆ. ಸುಮಾರು ೨೦ ಕಿಲೋಮೀಟರ್‌ಗಳಿಗೆ ನಾಲ್ಕು ಜನ ಗ್ಯಾಂಗ್‌ಮನ್‌ಗಳು ಬೇಕಾಗುತ್ತದೆ. ಅಂದರೆ ಒಬ್ಬ ಗ್ಯಾಂಗ್‌ಮನ್‌ಗೆ ಸುಮಾರು ೩೦೦ ರೂಪಾಯಿಗಳ ಸಂಬಳನ್ನು ತಿಂಗಳೊಂದಕ್ಕೆ ಕೊಡುತ್ತಾ ಹೋದರೆ ಸುಮಾರು ಒಂದು ವರ್ಷಕ್ಕೆ ೧೫ ಸಾವಿರ ರೂಪಾಯಿಗಳು ಗ್ಯಾಂಗ್‌ಮನ್‌ಗಳ ಸಂಬಳಕ್ಕೆ ಸರಿಹೋಗುತ್ತದೆ. ಇನ್ನು ಉಳಿದ ೫ ಸಾವಿರ ರೂಪಾಯಿಗಳಲ್ಲಿ ತಾವು ಏನು ರಸ್ತೆ ಕೆಲಸವನ್ನು ಮಾಡುತ್ತೀರಿ ? ಆದ್ದರಿಂದ ನಾನು ಸಲಹೆ ಮಾಡುವುದೇನೆಂದರೆ ರಸ್ತೆ ಪಾಲನೆಗೆಂದು ಬೇರೆ ಶೀರ್ಷಿಕೆಯಲ್ಲಿ ಸ್ವಲ್ಪ ಹಣ ಇಡಿ. ಈ ಗ್ಯಾಂಗ್ ಮನ್‌ಗಳ ಸಂಬಳಕ್ಕೆ ಬೇರೆ ಶಿರ್ಷಿಕೆಯಲ್ಲಿ ಸ್ವಲ್ಪ ಹಣ ಇಡಿ. ಆಗ ಸರಿಯಾಗುತ್ತದೆ. ಮತ್ತೆ ರಸ್ತೆ ಪಾಲನೆಯ ಕೆಲಸಕ್ಕೆ ತಾವು ಆದ್ಯತೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸ್ವಾಮಿ ಮತ್ತೊಂದು ಪ್ರಶ್ನೆ ಏನೆಂದರೆ ೧೯೫೧-೫೬ನೇ ಸಾಲಿನಲ್ಲಿ ಒಟ್ಟಾರೆ ೬೪೪.೨೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ೯.೭ ಲಕ್ಷ ಎಕರೆಗಳಿಗೆ ನೀರಾವರಿಯನ್ನು ಕೊಡುತ್ತಿದ್ದರು ಅಂದರೆ ಒಂದು ಲಕ್ಷ ಎಕರೆಗಳಿಗೆ ೬೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರು. ಆದರೆ ೧೯೮೦-೮೧ನೇ ಸಾಲಿನಲ್ಲಿ ೫೮೩.೫೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಂದರೆ ನೀರಾವರಿಗೆ ಅನುಕೂಲ ಕೊಟ್ಟಿರುವುದು ಕೇವಲ ೧.೯ ಲಕ್ಷ ಎಕರೆಗಳು ಮಾತ್ರ ಅಂದರೆ ಒಂದು ಲಕ್ಷ ಎಕರೆಗಳಿಗೆ ಮಾಡಿ ೩೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಬಹುಶಃ ನಮ್ಮ ಮಾನ್ಯ ಲೋಕೋಪಯೋಗಿ ಸಚಿವರು ರಾಜ್ಯದಲ್ಲಿ ೫೫ ಲಕ್ಷ ಎಕರೆ ಜಮೀನನ್ನು ನೀರಾವರಿಯನ್ನಾಗಿ ಮಾಡಬೇಕೆನ್ನುವ ಗುರಿಯನ್ನು ಹಾಕೊಂಡಿದ್ದಾರೆ. ಈಗಾಗಲೇ ಅವರು ಸುಮಾರು ೧೩ ಲಕ್ಷ ಎಕರೆಗಳಷ್ಟು ಗುರಿ ಸಾಧನೆ ಮಾಡಿದ್ದಾರೆ. ಇನ್ನೂ ಸುಮಾರು ೪೨ ಲಕ್ಷ ಎಕರೆಗಳಷ್ಟು ನೀರಾವರಿಯನ್ನು ಮಾಡಬೇಕಾಗಿದೆ ಒಟ್ಟು ತಮ್ಮ ಗುರಿಯನ್ನು ಸಾಧನೆ ಮಾಡಬೇಕಾದರೆ ಸುಮಾರು ೧೨,೬೦೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇಷ್ಟು ಹಣವನ್ನು ಸೇರಿಸಲು ತಾವು ಏನು ಸಂಪನ್ಮೂಲಗಳನ್ನು ರೂಡಿಸಿ ಕೊಂಡಿದ್ದೀರಿ ? ತಾವು ಎಷ್ಟು ವರ್ಷದಲ್ಲಿ ಈ ಗುರಿಯನ್ನು ಸಾಧನೆ ಮಾಡುತ್ತೀರಿ ? ಆ ಬಗ್ಗೆ ತಮ್ಮ ಪೆರ್‌ಫಾರ್ಮನ್ಸ್ ಬಜೆಟ್‌ನಲ್ಲಿ ಏನೂ ಹೇಳಿಲ್ಲ. ಮತ್ತೊಂದು ವಿಷಯವನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಾದರೆ ವಿಶ್ವ ಬ್ಯಾಂಕಿನಿಂದ ಹಣವನ್ನು ಪಡೆದು ತಾವು ಕಾಮಗಾರಿ ಕೆಲಸ ಕಾರ್ಯಗಳನ್ನು ಮಾಡಿಸುತ್ತಿದ್ದೀರಿ. ಆದರೆ ಈ ಹಣ ಸರಿಯಾಗಿ ವಿನಿಯೋಗವಾಗುತ್ತಿದೆಯೋ ಇಲ್ಲವೇ ಎಂಬುದನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡುತ್ತಿಲ್ಲ, ಮತ್ತು ತಾವು ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಕೂಡ ಒಂದು ಸಮಿತಿಯನ್ನು ಮಾಡಿದ್ದೀರಿ. ಅವರೂ ಸಹ ಸರಿಯಾಗಿ ಪರಿಶೀಲನೆ ನಡೆಸುತ್ತಿಲ್ಲ, ಮತ್ತೆ ತಾವು ವಿಶ್ವಬ್ಯಾಂಕಿನಿಂದ ನೆರವು ಪಡೆದು ಸುಮಾರು ೧೪ ಕಾಮಗಾರಿಗಳನ್ನು ನಡೆಸುತ್ತಿದ್ದೀರಿ. ಆ ೧೪ ಕಾಮಗಾರಿಗಳಿಗೂ ಕೂಡ ತಾವು ಮಂಜೂರಾತಿಯನ್ನು ಕೊಡಬೇಕು. ತಾಂತ್ರಿಕ ಹಾಗೂ ಆಡಳಿತಾತ್ಮಕವಾದ ಮಂಜೂರಾತಿಯನ್ನು ಎಷ್ಟು

ಕೆಲಸಗಳಿಗೆ ಕೊಟ್ಟಿದ್ದೀರಿ ? ಮತ್ತು ಹಾಲಿ ಕೊಟ್ಟಿರುವ ಕೆಲಸಗಳ ಪ್ರತಿಯೊಂದು ಹಂತದಲ್ಲಿಯೂ ಕೂಡ ಈ ಸಮಿತಿಯವರು ಪರಿಶೀಲನೆ ಮಾಡಬೇಕು. ಸ್ವಾಮಿ ನನ್ನ ತಾಲ್ಲೂಕಿನ ಒಂದು ಕಾಮಗಾರಿ ಕೆಲಸ ನಡೆಯ ಬೇಕಾಗಿದ್ದು ಅಲ್ಲಿಗೆ ಆ ಸಮಿತಿಯವರು ನಾಲ್ಕು ಸಾರಿ ಭೇಟಿ ಕೊಟ್ಟು ನಾಲ್ಕು ರೀತಿಯ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅವರು ಅದು ಫೀಜಿಬಲ್ ಅಲ್ಲ ಎನ್ನುವ ರೀತಿಯಲ್ಲಿ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ನಾನು ಈ ಬಗ್ಗೆ ಮಾನ್ಯ ಮಂತ್ರಿಗಳಾದ ಶ್ರೀ ದೇವೇಗೌಡರನ್ನೂ ಸಹ ಕೇಳಿಕೊಂಡಿದ್ದೆ. ಮಂಡ್ಯ ಜಿಲ್ಲೆಯಲ್ಲಿ ನಾಗಮಂಗಲ ಯಾವ ರೀತಿಯಲ್ಲಿದೆಯೋ ಅದೇ ರೀತಿಯಲ್ಲಿ ಮೈಸೂರು ಜಿಲ್ಲೆಯಲ್ಲಿ ಕೊಳ್ಳೇಗಾಲ ತಾಲ್ಲೂಕೂ ಅದೇ ಸ್ಥಿತಿಯಲ್ಲಿದೆ. ಸ್ವಾಮಿ ತಾವೇ ಆ ಸ್ಥಳಕ್ಕೆ ಖುದ್ದಾಗಿ ಭೇಟಿ ಕೊಟ್ಟು ಸ್ಥಳ ಪರಿಶೀಲನೇ ಮಾಡಿದರೆ ಒಳ್ಳೆಯದು. ತಜ್ಞರ ಅಭಿಪ್ರಾಯದಂತೆ ಯಾವ ಕೆಲಸ ಕೂಡ ಆಗುವುದಿಲ್ಲ. ಆದ್ದರಿಂದ ತಾವು ಕೆಲಸ ಮಾಡುತ್ತೀರೆಂದು ತಿಳಿದು ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪ್ರಭಾಕರ್ ಎಸ್. ರಾಣೆ (ಕಾರವಾರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಮಂಡಿಸಿರತಕ್ಕಂಥ ೧೯೮೫–೮೬ನೇ ಸಾಲಿನ ಬೇಡಿಕೆಗಳನ್ನು ನಾನು ವಿರೋಧಿಸಿ, ಉತ್ತರಕನ್ನಡ ಜಿಲ್ಲೆ ಹಾಗೂ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಎರಡು, ಮೂರು ವಿಷಯಗಳನ್ನು ಮಾತ್ರ ನಾನು ಪ್ರಸ್ತಾಪ ಮಾಡಬಯಸುತ್ತೇನೆ. ತಮಗೆಲ್ಲಾ ಗೊತ್ತಿರುವ ಹಾಗೆ ಉತ್ತರಕನ್ನಡ ಜಿಲ್ಲೆಯಲ್ಲಿ ಮಳೆ ಬರುವಂತಹದ್ದು ಎಲ್ಲರಿಗೂ ಗೊತ್ತಿದೆ. ಈ ಸಮಯದಲ್ಲಿ ಲೋಕೋಪಯೋಗಿ ಸಚಿವರ ಮೇಲೆ ಈ ಪ್ರಶ್ನೆ ಉದ್ಭವವಾಗುತ್ತದೆ. ಮಾನ್ಯ ಸಚಿವರೂ ಕೂಡ ನಮ್ಮ ಕಾರವಾರಕ್ಕೆ ಒಂದು ಸಾರಿ ಭೇಟಿ ಕೊಟ್ಟಾಗ ಅಲ್ಲಿನ ರಾಷ್ಟ್ರೀಯ ಹೆದ್ದಾರಿಗಳು ಯಾವ ಪರಿಸ್ಥಿತಿಯಲ್ಲಿವೆ ಎಂಬುದನ್ನು ಚೆನ್ನಾಗಿ ಮನದಟ್ಟು ಮಾಡಿಕೊಂಡಿದ್ದಾರೆ. ಅಲ್ಲಿ ಮೇಲಿಂದ ಮೇಲೆ ಮಳೆ ಬರುತ್ತಿರುವುದರಿಂದ ಎಲ್ಲಾ ರಾಷ್ಟ್ರೀಯ ಹೆದ್ದಾರಿಗಳೂ ಕೂಡ ದುರಸ್ತಿ ಮಾಡಬೇಕಾದಂಥ ಪರಿಸ್ಥಿತಿಯಲ್ಲಿ ಇವೆ. ಈ ರಾಷ್ಟ್ರೀಯ ಹೆದ್ದಾರಿಗಳನ್ನು ದುರಸ್ತಿ ಮಾಡದಿದ್ದರೆ ಇದರಿಂದ ಸಾರ್ವಜನಿಕರಿಗೂ ಕೂಡ ಬಹಳ ತೊಂದರೆಯಾಗುತ್ತದೆ. ಮತ್ತೆ ಕಾರವಾರ ಮುಖಾಂತರ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಯನ್ನೂ ಸಹ ಡಿವೀಯೇಷನ್ ಮಾಡಬೇಕೆನ್ನುವ ಯೋಜನೆ ಸಹ ಇದೆ. ಅದನ್ನು ಮಾನ್ಯ ಸಚಿವರು ಕೇಂದ್ರ ಸರ್ಕಾರಕ್ಕೆ ತಿಳಿಸಿ ಡಿವೀಯೆಷನ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಲೋಕೋಪಯೋಗಿ ಇಲಾಖೆಯಿಂದ ನೀರಾವರಿ ಇಲಾಖೆಯನ್ನು ಬೇರೆ ಮಾಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದು ಎಲ್ಲಾ ಕಡೆಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿರುವಾಗ ನನ್ನ ಕ್ಷೇತ್ರಕ್ಕೆ ಏನೋ ಶಾಪ ತಟ್ಟಿದಂತೆ ಇದೆ. ನನ್ನ ಕ್ಷೇತ್ರದಲ್ಲಿ ಈ ಸಣ್ಣ ನೀರಾವರಿ ಇಲಾಖೆ ಎಲ್ಲಿದೆ ಎಂದು ಹುಡುಕುವುದೆ ಬಹಳ ಕಷ್ಟವಾಗಿದೆ. ಈ ಇಲಾಖೆಯಲ್ಲಿ ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಇಲ್ಲ. ಒಬ್ಬ ವ್ಯಕ್ತಿಯನ್ನು ಮಾನ್ಯ ಮಂತ್ರಿಗಳು ಹಿಂದೆ ತುಂಬಿದ್ದರು. ಆದರೆ ಆ ವ್ಯಕ್ತಿ ಅಲ್ಲಿಗೆ ಬಂದ ತಕ್ಷಣ ಯಾವುದೋ ಒಂದು ಆರೋಪದ ಮೇಲೆ ಅಮಾನತ್ತಿನಲ್ಲಿಡಲ್ಪಟ್ಟ. ಮತ್ತೆ ಆ ಹುದ್ದೆ ಅಲ್ಲಿ ಇದುವರೆವಿಗೂ ತೆರವಾಗಿದೆ. ಭರ್ತಿಯಾಗಿಲ್ಲ. ಇನ್ನು ನಮ್ಮ ಕರಾವಳಿ ಪ್ರದೇಶದಲ್ಲಿ ರೈತರಿಗೆ ಅನುಕೂಲವಾಗುವಂತಹ ನಾನಾ ರೀತಿಯ ಯೋಜನೆಗಳು ಇವೆ. ಆದರೆ ಆ ಯೋಜನೆಗಳನ್ನು ಯಾವುದನ್ನೂ ಮಾಡಿಲ್ಲ. ನಮ್ಮ ಕರಾವಳಿ ಪ್ರದೇಶದ ನೀರು ಉಪ್ಪು. ಇದನ್ನು ರೈತರು ಉಪಯೋಗಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಗಜನಿ ಸ್ಕೀಮ್ಸ್ ಮಾಡುವಂತದ್ದರಲ್ಲಿ ಮಾನ್ಯ ಸಚಿವರು ಬಹಳ ಅಸಹಾಯಕರಾಗಿದ್ದಾರೆ. ಈ ಯೋಜನೆಯನ್ನು ೧೯೮೪–೮೫ನೇ ಸಾಲಿನಲ್ಲಿ ಸೇರಿಸಿದ್ದರು. ಆದರೆ ಈ ಸಾರಿ ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಆಧ್ಯತೆಯ ಮೇರೆಗೆ ಈ ಯೋಜನೆಯನ್ನು ಬಡ್ಜೆಟ್‌ನಲ್ಲಿ ಈ ವರ್ಷ ಸೇರಿಸಿಕೊಳ್ಳಬೇಕು. ಮಾನ್ಯ ಸಚಿವರು ಇದನ್ನು ಸೇರಿಸುವಂತಹ ಪ್ರಯತ್ನ ಮಾಡಬೇಕೆಂದು ಹೇಳುತ್ತಾ ಅವರಿಗೆ, ಉತ್ತರಕನ್ನಡ ಜಿಲ್ಲೆಯ ಬಗ್ಗೆ, ಕಾರವಾರದ ಬಗ್ಗೆ ವಿಶಿಷ್ಟವಾದ ಪ್ರೀತಿ ಪ್ರೇಮ ಇದೆ, ಅವರು ಇದನ್ನು ಮಾಡುತ್ತಾರೆ ಎಂದು ವಿಶ್ವಾಸ ತಳೆಯುತ್ತೇನೆ. ಅದೇ ರೀತಿ ನ್ಯಾಷನಲ್ ಹೈವೇ ಮೇಲೆ ಕಾಳಿ ನದಿಗೆ ಕಟ್ಟಿರುವ ಸೇತುವೆಯ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಆ ಸೇತುವೆಯ ಮೇಲೆ ಓಡಾಡುವ ವಾಹನಗಳಿಗೆ ಪ್ರವೇಶ ತೆರಿಗೆಯನ್ನು ವಸೂಲು ಮಾಡುತ್ತಿದ್ದಾರೆ. ಈ ಸೇತುವೆಯ ಉದ್ಘಾಟನೆಗೆ ಮಾನ್ಯ ಸಚಿವರು ಬಂದಿದ್ದಾಗ ಅಲ್ಲಿನ ಸಾರ್ವಜನಿಕರು ಒಂದು ಬೇಡಿಕೆಯನ್ನು ಅವರ ಮುಂದೆ ಮಂಡಿಸಿದ್ದರು. ಅದೇನೆಂದರೆ ಕೆ.ಎಸ್.ಆರ್.ಟಿ.ಸಿ. ಬಸ್‌ಗಳಲ್ಲಿ ಹೋಗುವಂತಹ ಪ್ರಯಾಣಿಕರ ಮೇಲೂ ಸಹ ಈ ಒಂದು

ಟ್ಯಾಕ್ಸನ್ನು ಹಾಕಿ ವಸೂಲು ಮಾಡುತ್ತಿದ್ದಾರೆ. ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಈ ಸೇತುವೆಯ ಮೇಲೆ ಒಂದು ಸಲ ಪ್ರವೇಶ ಮಾಡಿದರೆ ದಿನಕ್ಕೆ ೧೦ ರೂಪಾಯಿ ಕರಾಕರಣೆ ಮಾಡುತ್ತಾರೆ. ಆದರೆ ಬಸ್ಸಿನವರು, ಪ್ರತಿಯೊಬ್ಬ ಪ್ಯಾಸೆಂಜರ್ ಮೇಲೂ ಪ್ರತಿಯೊಂದು ಸಲ ಈ ಸೇತುವೆಯ ಮೇಲೆ ಹೋದಾಗಲೂ, ತಲಾ ೩೦ ಪೈಸೆಯನ್ನು ಆಕರಣೆ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳ ಮೇಲೆ, ಸಾರ್ವಜನಿಕರ ಮೇಲೆ, ಇನ್ನು ಉಳಿದ ಸರಕಾರಿ ನೌಕರರ ಮೇಲೂ ಸಹ ಈ ಒಂದು ತೆರಿಗೆಯನ್ನು ವಸೂಲು ಮಾಡುತ್ತಿದ್ದಾರೆ. ಆದುದರಿಂದ ಮಾನ್ಯ ಸಚಿವರು ಅಲ್ಲಿಗೆ ಬಂದಾಗ ಸಾರ್ವಜನಿಕರು ಇದರ ಬಗ್ಗೆ ಮನವಿ ಸಲ್ಲಿಸಿದ್ದರು.

ಅಧ್ಯಕ್ಷರು.—ಅದನ್ನು ಮಾನ್ಯ ಸಚಿವರು ನೋಟ್ ಮಾಡಿಕೊಂಡಿದ್ದಾರೆ.

ಶ್ರೀ ಪ್ರಭಾಕರ ಎಸ್. ರಾಣೆ.—ಇದನ್ನು ಆದಷ್ಟು ಬೇಗ ತಡೆಹಿಡಿಯುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬ್ರಿಡ್ಜ್ ಮೇಲೆ ಕರಾಕರಣೆಗೆ ಏನು ಸಿಬ್ಬಂದಿಯನ್ನು ನೇಮಿಸಿದ್ದೀರಿ, ಅವರು ಸರಿಯಾಗಿ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಏಕೆಂದರೆ ೭ ಗಂಟೆಯ ನಂತರ ರಾತ್ರಿ ಸಮಯದಲ್ಲಿ, ಬಹಳಷ್ಟು ವಾಹನಗಳು ಅಲ್ಲಿ ಓಡಾಡುತ್ತವೆ, ಆ ಸಮಯದಲ್ಲಿ ನಿಜವಾಗಿಯೂ ಇಲಾಖೆಗೆ ಹೆಚ್ಚು ಆದಾಯ ಬರುತ್ತದೆ. ಆದರೆ ಆ ಸಮಯದಲ್ಲಿ ತೆರಿಗೆ ಸೋರುವಂತಹ ಅನೇಕ ಪ್ರಕರಣಗಳು ನಡೆಯುತ್ತಿವೆ. ಆದುದರಿಂದ ಬೇರೆ ಕೆಲವು ಕಡೆಗೆ ಇದನ್ನು ಖಾಸಗಿಯವರಿಗೆ ವಹಿಸಿಕೊಡುವಂತಹ ಪ್ರಯತ್ನ ಮಾಡಿದ್ದಾರೆ. ಈ ಬಗ್ಗೆ ವಿಚಾರ ಮಾಡಬೇಕೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅನಂತರ ನ್ಯಾಷನಲ್ ಹೈವೇ ನಂಬರ್ ೧೭ ಮತ್ತು ೪ ಇವೆರಡರ ಮಧ್ಯೆ ಲಿಂಕ್ ರೋಡ್ ಇದೆ, ಇದನ್ನು ಲೋಂಡಾ ಸದಾಶಿವಘಡ ರೋಡ್ ಎಂದು ಹೇಳುತ್ತಾರೆ. ಈ ಲಿಂಕ್ ರೋಡ್‌ನಲ್ಲಿ ಸೆಂಟ್ರಲ್ ರಿಸರ್ವ್ ಫಂಡ್ ಮೂಲಕ ಮೂರು ನಾಲ್ಕು ವರ್ಷಗಳ ಹಿಂದೆ ೭ ಸೇತುವೆಗಳ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ. ಇವತ್ತಿಗೂ ಕೂಡಾ ಇದರಲ್ಲಿ ಎರಡು ಸೇತುವೆಗಳ ಕಾರ್ಯ ಅಪೂರ್ಣವಾಗಿದೆ. ಕಂಟ್ರಾಕ್ಟರರ ಒಂದು ದೋಷದಿಂದ ಅಥವಾ ಅವನ ಒಂದು ನಿರ್ಲಕ್ಷ್ಯತೆಯಿಂದ ಈ ರೀತಿ ಆಗಿದೆ. ಆದರೆ ಇದುವರೆಗೆ ಆ ಕಂಟ್ರಾಕ್ಟರರ ಮೇಲೆ ಯಾವುದೇ ಕ್ರಮ ಕೈಗೊಳ್ಳದೆ ಇರುವುದರಿಂದ. ಪ್ರಯಾಣಿಕರಿಗೆ ತೊಂದರೆಯಾಗಿದೆ. ಆ ಕಂಟ್ರಾಕ್ಟರನು ಈ ಕೆಲಸವನ್ನು ಮಾಡಲಿಕ್ಕೆ ಅಸಮರ್ಥನಿದ್ದಾನೆ. ಆದ್ದರಿಂದ ಸಾಧ್ಯವಾದಷ್ಟು ಡಿಪಾರ್ಟ್‌ಮೆಂಟ್ ಕಡೆಯಿಂದ ಈ ಕೆಲಸ ಮಾಡಿಸುವ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಎಂ.ಎನ್.ಪಿ. ಪ್ರೋಗ್ರಾಂ ಪ್ರಕಾರ ೧೯೮೫–೮೬ನೇ ಸಾಲಿನ ಒಂದು ಬಜೆಟ್ ನೋಡಿದಾಗ, ಇದರ ಪ್ರಕಾರ ಒಂದು ಕಾರ್ಯವನ್ನೂ ಸಹ ನನ್ನ ಕ್ಷೇತ್ರದಲ್ಲಿ ತೆಗೆದುಕೊಂಡಿಲ್ಲ. ಈ ಎಂ.ಎನ್.ಪಿ. ಪ್ರೋಗ್ರಾಂಗೆ ಕೇಂದ್ರ ಸರಕಾರದವರು ಹಣ ಸಹಾಯ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ಆದುದರಿಂದ ಮಾನ್ಯ ಸಚಿವರು ನಮ್ಮ ಕಾರವಾರ ತಾಲ್ಲೂಕಿನಲ್ಲಿ ಮತ್ತು ಸೂಪ ತಾಲ್ಲೂಕಿನಲ್ಲಿ ಈ ಪ್ರೋಗ್ರಾಂ ಪ್ರಕಾರ ಕೆಲಸ ಮಾಡಿಸಬೇಕು. ಸೂಪ ತಾಲ್ಲೂಕು ಅತೀ ಹಿಂದುಳಿದ ತಾಲ್ಲೂಕು, ತಮಗೆ ಗೊತ್ತಿರುವಂತೆ ಸೂಪ ತಾಲ್ಲೂಕಿನ ಜನ ನಮ್ಮ ರಾಜ್ಯಕ್ಕೆ ವಿಶಿಷ್ಟವಾದ ಕೊಡುಗೆಯನ್ನು ಕೊಟ್ಟಿದ್ದಾರೆ. ಬಹಳ ತ್ಯಾಗ ಮಾಡಿದ್ದಾರೆ. ಆ ಜನರ ಸಲುವಾಗಿ ಎಂ.ಎನ್.ಪಿ. ಪ್ರೋಗ್ರಾಂನಲ್ಲಿ ರಸ್ತೆಗಳನ್ನು ಹಾಗೂ ಇತರ ಕಾರ್ಯಗಳನ್ನು ಕೈಗೊಳ್ಳಬೇಕೆಂದು ತಮ್ಮ ಗಮನಕ್ಕೆ ತರುತ್ತಾ ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಆ ಕಡೆಯವರಿಗೆ ಹಾಗೂ ಈ ಕಡೆಯವರಿಗೆ ಈ ಬೇಡಿಕೆಯ ಚರ್ಚೆಯ ಮೇಲೆ ಸಾಕಷ್ಟು ಅವಕಾಶ ಮಾಡಿಕೊಡಲಾಗಿದೆ. ಇನ್ನು ಈ ಚರ್ಚೆಯನ್ನು ಮುಕ್ತಾಯ ಮಾಡೋಣ. ಲೋಕೋಪಯೋಗಿ ಹಾಗೂ ನೀರಾವರಿ ಖಾತೆಗಳ ಮೇಲಿನ ಚರ್ಚೆ ಇಲ್ಲಿಗೆ ಮುಗಿಯಿತು. ಈಗ ಪ್ರಕಟಣೆ.